ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜನವರಿ 23, 2025

ಸಂಪುಟ : 51 ಸಂಚಿಕೆ : 251 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com






ದಾವಣಗೆರೆಗೆ ಸಮೀಪದ ಬಸಾಪುರದಲ್ಲಿನ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಸಾಮೂಹಿಕ ಹಾಗೂ ವೈಯಕ್ತಿಕ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು.

# ಮಹಿಳಾ ಸದಸ್ಯತ್ವ ಹೆಚ್ಚಳದಿಂದ ಕಾಂಗ್ರೆಸ್ ಪಕ್ಷಕ್ಕೆ ಬಲ

## ಕಾಂಗ್ರೆಸ್ ಕಾರ್ಯಕರ್ತೆಯರ ಸಭೆಯಲ್ಲಿ ಮಹಿಳಾ ರಾಜ್ಯಾಧ್ಯಕ್ಷೆ ಸೌಮ್ಯ ರೆಡ್ಡಿ ಅಭಿಮತ

ದಾವಣಗೆರೆ, ಜ.22- ಸದಸ್ಯತ್ವ ನೋಂದಣಿಗೆ ತೆರಳಿದ ವೇಳೆ ಜನರಿಗೆ ಅಗತ್ಯವಿರುವ ಬೀದಿ ದೀಪ, ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಆಲಿಸಿ, ಅವುಗಳನ್ನು ಕಲ್ಪಿಸಿ ಕೊಡುವ ಪ್ರಯತ್ನ ಮಾಡುವುದರಿಂದ ಕಾರ್ಯಕರ್ತರ ಮೇಲಿನ ವಿಶ್ವಾಸ ಉಳಿಯುತ್ತದೆ ಮತ್ತು ನಾಯಕತ್ವ ಬೆಳೆಯುತ್ತದೆ ಎಂದು ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ಸೌಮ್ಯ ರೆಡ್ಡಿ ಹೇಳಿದರು.

ನಗರದ ನಿಜಲಿಂಗಪ್ಪ ಬಡಾವಣೆಯಲ್ಲಿರುವ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯರ ಸಭೆಯಲ್ಲಿ ಮಾತನಾಡಿದರು.



ಮಹಿಳೆಯರಿಗೆ ನ್ಯಾಯ ಕೊಡಿಸುವ ಮೂಲಕ ಅವರಿಗೆ ಧ್ವನಿಯಾಗಿ ನಿಲ್ಲಬೇಕು. ಜನರ ಸಮಸ್ಯೆಗಳಿಗೆ ಸ್ಪಂದಿಸಿದಾಗ ಮಾತ್ರ ನಾಯಕತ್ವ ಬೆಳೆಯಲು ಸಾಧ್ಯವಾಗುತ್ತದೆ ಎಂದರು.

ಭಾರತದಲ್ಲಿನ ಪುರುಷ ಪ್ರಧಾನ ವ್ಯವಸ್ಥೆಯಿಂದಾಗಿ ಮಹಿಳೆಯರಿಗೆ ಸಿಗಬೇಕಾದ ಸ್ಥಾನಮಾನಗಳು ಮತ್ತು ಹಕ್ಕುಗಳು ಸಮರ್ಪಕವಾಗಿ ಸಿಕ್ಕಿಲ್ಲ. ಸಂವಿಧಾನದ ಆಶಯದಂತೆ ಮಹಿಳೆಯರಿಗೂ ಪುರುಷರ ಸರಿ ಸಮಾನವಾದ ಅವಕಾಶಗಳು ಹುಡುಕಿಕೊಂಡು ಬರುತ್ತಿವೆ. ಸಂವಿಧಾನ ಪೀಠಿಕೆಯನ್ನು ಕನಿಷ್ಠಪಕ್ಷ ವಾರಕ್ಕೊಮ್ಮೆಯಾದರೂ ಪಠಿಸಬೇಕೆಂದು ಸಲಹೆ ನೀಡಿದರು.

ಬಿಜೆಪಿ ಅಧಿಕಾರಕ್ಕೆ ಬಂದಾಗಲೆಲ್ಲಾ ಮಹಿಳೆಯರು, ದಲಿತರು ಹಾಗೂ ಅಲ್ಪಸಂಖ್ಯಾತರ ಮೇಲೆ ಹೆಚ್ಚು ದೌರ್ಜನ್ಯ ನಡೆಯುತ್ತವೆ. ಆದರೆ ಕಾಂಗ್ರೆಸ್ ಸರ್ಕಾರ ಜಾತಿ, ಮತ, ಧರ್ಮ, ಲಿಂಗ ಭೇದ ಮಾಡುವುದಿಲ್ಲ. ಕಾಂಗ್ರೆಸ್ ಗ್ಯಾರಂಟಿ ಯೋಜನೆ ಅನುಷ್ಠಾನದ ಫಲವಾಗಿ ಮಹಿಳೆಯರಿಗೆ ಸಾಕಷ್ಟು ಅನುಕೂಲವಾಗಿದೆ. ಮಹಿಳೆಯರ ಕೈ ಬಲಪಡಿಸಿದಲ್ಲಿ ಇಡೀ ಕುಟುಂಬ ಆರ್ಥಿಕವಾಗಿ ಮೇಲೆ ಬರುತ್ತದೆ ಎಂಬ ಮುಂದಾಲೋಚನೆಯಿಂದ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು.

ಮಹಿಳಾ ಕಾಂಗ್ರೆಸ್ ಸದಸ್ಯತ್ವ ಹೆಚ್ಚಳ ಮಾಡುವುದರಿಂದ ಪಕ್ಷಕ್ಕೆ ಬಲ ಬರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವ ನೋಂದಣಿ ಮಾಡಿಸಿದವರಿಗೆ ರಾಜ್ಯ, ಜಿಲ್ಲಾ ಮಟ್ಟದಲ್ಲಿ ಉನ್ನತ ಸ್ಥಾನಮಾನ ದೊರಕಲಿದೆ ಎಂದು ಹೇಳಿದರು.

ಜಗಳೂರು ಶಾಸಕ ಬಿ. ದೇವೇಂದ್ರಪ್ಪ ಮಾತನಾಡಿ, ಯಾವುದೇ ಕಾರ್ಯಕ್ರಮ ಯಶಸ್ವಿಯಾಗಲು ಮಹಿಳೆಯರ ಸಹಕಾರ ಅತ್ಯಗತ್ಯ. ಕಾಂಗ್ರೆಸ್ ಪಕ್ಷದಲ್ಲಿ ಮಹಿಳೆಯರಿಗೆ ಶಕ್ತಿ ತುಂಬುವ ಕೆಲಸ ಆಗಬೇಕಾಗಿದೆ ಎಂದರು.

ಮಹಾನಗರ ಪಾಲಿಕೆ ಮೇಯರ್ ಕೆ. ಚಮನ್‌ಸಾಬ್ ಮಾತನಾಡಿ, ನಗರಸಭೆ, ಮಹಾನಗರ ಪಾಲಿಕೆ, ಪಟ್ಟಣ ಪಂಚಾಯ್ತಿ, ಪುರಸಭೆ ಸೇರಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ. 50 ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ವಿಧಾನಸಭೆ, ಲೋಕಸಭೆಯಲ್ಲೂ ಸಹ ಈ ಮೀಸಲಾತಿ ಜಾರಿಗೆ ಬರಲಿದೆ. ನಿಷ್ಠೆ, ಪ್ರಾಮಾಣಿಕತೆಯಿಂದ ಪಕ್ಷಕ್ಕೆ ದುಡಿದರೆ ಅವಕಾಶಗಳು ತಾನಾಗಿಯೇ ಹುಡುಕಿಕೊಂಡು ಬರಲಿವೆ ಎಂದು ಹೇಳಿದರು.

ದೂಡ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಮಾತನಾಡಿ, ಪಕ್ಷ ಸಂಘಟನೆ, ಹೋರಾಟಗಳಲ್ಲಿ ಮಹಿಳಾ ಕಾರ್ಯಕರ್ತೆಯರ ಭಾಗವಹಿಸುವಿಕೆ ಅತ್ಯಂತ ಸಕ್ರಿಯವಾಗಿದೆ. ವಾರ್ಡ್‌ವಾರು ಸಂಘಟನೆಯಲ್ಲಿ ತೊಡಗಿರುವ ಮಹಿಳಾ ಕಾರ್ಯಕರ್ತರಿಗೆ ಪ್ರೋತ್ಸಾಹದ ಅವಶ್ಯವಿದೆ ಎಂದರು.

ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಅನಿತಾಬಾಯಿ ಮಾಲತೇಶರಾವ್ ಜಾಧವ್, ವಿವಿಧ ಹಂತದ ಪದಾಧಿಕಾರಿಗಳಾದ ಮಂಜುಳಾ, ಮಂಗಳಮ್ಮ, ಸುಧಾ, ಮೀನಾಕ್ಷಿ ಜಗದೀಶ್, ಶುಭ ಮಂಗಳಾ, ಸುಧಾ ಇಟ್ಟಿಗುಡಿ ಮಂಜುನಾಥ್, ಸವಿತಾ ಗಣೇಶ್ ಹುಲ್ಮನಿ, ಆಶಾ ಉಮಾಶಂಕರ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮತ್ತಿತರರು ಭಾಗವಹಿಸಿದ್ದರು.

# ಅಪಸ್ವರ ಎತ್ತುವ ಸಚಿವರ ಕೈಬಿಡಿ

## ಎಐಸಿಸಿ ವರಿಷ್ಠರ ಸ್ಪಷ್ಟ ಸಂದೇಶ

ಬೆಂಗಳೂರು, ಜ. 22- ನಾಯಕತ್ವ ಮತ್ತು ಪಕ್ಷ ಸಂಘಟನೆಗೆ ಅಪಸ್ವರ ಎತ್ತುವ ಒಂದಿಬ್ಬರು ಸಚಿವರನ್ನು ಸಂಪುಟದಿಂದ ಕೈಬಿಡಿ ಎಂದು ಎಐಸಿಸಿ ವರಿಷ್ಠರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರುಗಳಿಗೆ ಸ್ಪಷ್ಟ ಸಂದೇಶ ನೀಡಿದ್ದಾರೆ.

ಬೆಳಗಾವಿಯಲ್ಲಿ ನಡೆದ ಗಾಂಧಿ ಭಾರತ ಸಮಾವೇಶದ ನಂತರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಸಮ್ಮುಖದಲ್ಲೇ ಪಕ್ಷದ ರಾಜಕೀಯ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಖಡಕ್ಕಾಗಿ ಈ ವಿಷಯ ತಿಳಿಸಿದ್ದಾರೆ.

ವೇಣುಗೋಪಾಲ್ ಮಾತಿನ ವೇಳೆ ಮಧ್ಯೆ ಪ್ರವೇಶಿಸಿದ ಖರ್ಗೆ, ಪರೀಕ್ಷೆ ಬರೆಯದವರನ್ನು ನಾವು ಪಾಸು ಮಾಡಲು ಸಾಧ್ಯವಿಲ್ಲ. ಪರೀಕ್ಷೆ ಬರೆದವರಿಗೆ ಹುದ್ದೆ ದೊರೆಯುತ್ತದೆ, ಏನೂ ಮಾಡದೆ, ಅಧಿಕಾರ ಬೇಕು ಎಂದರೆ, ನಮ್ಮಲ್ಲಿ ದೊರೆಯದು, ಒಂದಿಬ್ಬರನ್ನು ಕಿತ್ತಾಕಿ,

**ನಾಯಕತ್ವ ಮತ್ತು ಪಕ್ಷ ಸಂಘಟನೆಗೆ ಅಪಸ್ವರ ಎತ್ತುವ ಒಂದಿಬ್ಬರನ್ನು ಕಿತ್ತಾಕಿ, ಎಲ್ಲವೂ ಸರಿಹೋಗುತ್ತೆ, ಅವರಿಂದ ಪಕ್ಷ ಮತ್ತು ಸರ್ಕಾರಕ್ಕೆ ಏನೂ ಆಗದು ಎಂದು ಮಲ್ಲಿಕಾರ್ಜುನ ಖರ್ಗೆ ಖಾರವಾಗಿ ತಿಳಿಸಿದ್ದಾರೆ.**

ಎಲ್ಲವೂ ಸರಿ ಹೋಗುತ್ತೆ, ಅವರಿಂದ ಪಕ್ಷ ಮತ್ತು ಸರ್ಕಾರಕ್ಕೆ ಏನೂ ಆಗದು ಎಂದು ಖಾರವಾಗಿ ತಿಳಿಸಿದ್ದಾರೆ.

ಮುಂದುವರೆದು ಮಾತನಾಡಿದ ವೇಣುಗೋಪಾಲ್, ಹಣಕಾಸು ಖಾತೆಯನ್ನೂ ಹೊಂದಿರುವ ಸಿದ್ದರಾಮಯ್ಯ, ವಿಧಾನಮಂಡಲದಲ್ಲಿ 2025-26ನೇ (4ನೇ ಪುಟಕ್ಕೆ)

# ದೂಡಾದಿಂದ 5 ವೃತ್ತಗಳ ಅಭಿವೃದ್ಧಿಗೆ ನಿರ್ಧಾರ

ದಾವಣಗೆರೆ, ಜ. 22 - ದಾವಣಗೆರೆ ಮತ್ತು ಹರಿಹರ ನಗರಗಳ 5 ವೃತ್ತಗಳನ್ನು ಅಭಿವೃದ್ಧಿಗೊಳಿಸಲಾಗುವುದು ಎಂದು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪನವರ ಆಶಯದಂತೆ ದಾವಣಗೆರೆ ಮತ್ತು ಹರಿಹರ ನಗರಗಳ 5 ಪ್ರಮುಖ ವೃತ್ತಗಳನ್ನು ಮಾದರಿಯಾಗಿ ಅಭಿವೃದ್ಧಿ ಮಾಡಲಾಗುವುದು ಎಂದರು.

ಅದೇ ರೀತಿ ನಾಡು ಕಂಡ ಮಹಾನ್ ತತ್ವಜ್ಞಾನಿ ಸರ್ವಜ್ಞ ಅವರ ಪ್ರತಿಮೆಯನ್ನು ಅನಾವರಣಗೊಳಿಸಲು ಸಹ ತೀರ್ಮಾನ ಕೈಗೊಳ್ಳಲಾಯಿತು ಎಂದು ತಿಳಿಸಿದರು. ಈ ಸಭೆಯಲ್ಲಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ಆಯುಕ್ತರಾದ ಹುಲ್ಮನಿ ತಿಮ್ಮಣ್ಣ, ಸದಸ್ಯರುಗಳಾದ ಮಂಜುನಾಥ್, ವಾಣಿ ಬಕ್ಕೇಶ್, ಹರಿಹರ ಜಬ್ಬಾರ್, ಜಾಕೀರ್ ಅಲಿ, ಪಾಲಿಕೆ ಆಯುಕ್ತರಾದ ರೇಣುಕಾ ಹಾಗೂ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.



ದೂಡಾ ಸಭೆಯಲ್ಲಿ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ


# ಶಿಕ್ಷಣ, ಸಾಹಿತ್ಯ ಮೇಳಕ್ಕೆ ಸರ್ವಾಧ್ಯಕ್ಷರಾಗಿ ಕಸಾಪ ಜಿಲ್ಲಾಧ್ಯಕ್ಷ ವಾಮದೇವಪ್ಪ ಆಯ್ಕೆ



ದಾವಣಗೆರೆ, ಜ. 21 - ಸುವರ್ಣ ದೇಶ ಪಬ್ಲಿಕೇಶನ್ ಹಾಗೂ ಎಲ್ ಆರ್ ಇವೆಂಟ್ಸ್ ಮತ್ತು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜಂಟಿಯಾಗಿ ಆಯೋಜಿಸಿರುವ 'ಶಿಕ್ಷಣ ಸಾಹಿತ್ಯ ಮೇಳ' ಕ್ಕೆ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಅಮೃತ ಪುರುಷ ಬಿ. ವಾಮದೇವಪ್ಪ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಶಿಕ್ಷಣ- ಸಾಹಿತ್ಯ ಮೇಳದ ಸಂಘಟಕರು ತಿಳಿಸಿದ್ದಾರೆ.

2025 ರ ಫೆ. 7, 8 ಮತ್ತು 9 ರಂದು ದಾವಣಗೆರೆ ನಗರದ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ 3 ದಿನಗಳ ಕಾಲ ನಡೆಯಲಿರುವ ಈ ಮೇಳ ಕ್ಕೆ ನಿರಂತರವಾಗಿ ಕನ್ನಡ ನಾಡು, ನುಡಿ, ಸಾಹಿತ್ಯ ಸೇವೆ ಯಲ್ಲಿ ತೊಡಗಿಸಿಕೊಂಡಿರುವ ಹಾಗೂ ಇತ್ತೀಚೆಗೆ 75 ವಸಂತಗಳನ್ನು ಪೂರೈಸಿ ಅಮೃತಪುರುಷ ಎನಿಸಿಕೊಂಡಿರುವ ಬಿ. ವಾಮದೇವಪ್ಪ ಅವರ ಆಯ್ಕೆ ಅತ್ಯಂತ (4ನೇ ಪುಟಕ್ಕೆ)

# ಬಸವಪ್ರಭು ಶ್ರೀಗೆ ಕುವೆಂಪು ವಿವಿಯಿಂದ ಪಿಹೆಚ್‌ಡಿ ಪದವಿ



ದಾವಣಗೆರೆ, ಜ. 22- ನಗರದ ಶ್ರೀ ಶಿವಯೋಗಾಶ್ರಮ - ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿಯವರಿಗೆ ಕುವೆಂಪು ವಿಶ್ವವಿದ್ಯಾನಿಲಯದಿಂದ ಪಿಹೆಚ್‌ಡಿ ಪದವಿ ಲಭಿಸಿದೆ.

'ಡಾ. ಶಿವಮೂರ್ತಿ ಮುರುಘಾ ಶರಣರು ; ಸಾಹಿತ್ಯ ಮತ್ತು ಸಂಸ್ಕೃತಿ' ವಿಷಯ ಕುರಿತು ಡಾ. ಸಣ್ಣರಾಮ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ಮಹಾ ಪ್ರಬಂಧಕ್ಕೆ ಈ ಪದವಿ ನೀಡಲಾಗಿದೆ. ಕುವೆಂಪು ವಿಶ್ವವಿದ್ಯಾನಿಲಯದ ಆವರಣದಲ್ಲಿ ಇಂದು ನಡೆದ ಕುವೆಂಪು ವಿವಿ 34ನೇ ಘಟಿಕೋತ್ಸವದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಶ್ರೀ ಬಸವ ಪ್ರಭು ಸ್ವಾಮೀಜಿಯವರಿಗೆ ಪಿಹೆಚ್‌ಡಿ ಪದವಿ ಪ್ರದಾನ ಮಾಡಿದರು.

# ಬಿಸಿಲಾಘಾತ ಘಟಕಗಳು ದೇಶಾದ್ಯಂತ ವಿಸ್ತರಣೆ

ನವದೆಹಲಿ, ಜ. 22- ಪ್ರಸಕ್ತ ದೇಶದಲ್ಲಿ 500 ರಷ್ಟು ಬಿಸಿಲಾಘಾತ ಘಟಕಗಳಿದ್ದು, ಇವುಗಳನ್ನು ದೇಶಾದ್ಯಂತ ವಿಸ್ತರಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ಪುಣ್ಯಾ ಶ್ರೀವಾಸ್ತವ ತಿಳಿಸಿದ್ದಾರೆ. ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ್ ಯೋಜನೆಯ ಮೂಲಕ ಬಿಸಿಲಾಘಾತ ಚಿಕಿತ್ಸೆಗೂ ನೆರವು ನೀಡಲಾಗುತ್ತಿದೆ ಎಂದವರು ಹೇಳಿದರು.

# ಶ್ರೀ ಶ್ರೀಶೈಲ ಕ್ರೆಡಿಟ್ ಸೊಸೈಟಿ ಚುನಾವಣೆ : ಮೇಕಾ ಸೇರಿ ಐವರು ಅವಿರೋಧ ಆಯ್ಕೆ



ದಾವಣಗೆರೆ, ಜ.22- ನಗರದ ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಆಡಳಿತ ಮಂಡಳಿಯ ಹಿರಿಯ ನಿರ್ದೇಶಕರಾಗಿದ್ದ ಮೇಕಾ ಮುರುಳಿಕೃಷ್ಣ ಅವರು ಸೇರಿದಂತೆ ಐವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ 13 ನಿರ್ದೇಶಕರ ಸ್ಥಾನಗಳಿಗೆ ಐವರು ಅವಿರೋಧ ಆಯ್ಕೆಯಾದ ಹಿನ್ನೆಲೆಯಲ್ಲಿ ಇನ್ನುಳಿದ 8 ಸ್ಥಾನಗಳಿಗೆ ನಾಡಿದ್ದು ದಿನಾಂಕ 24ರ ಶುಕ್ರವಾರ ಚುನಾವಣೆ ನಡೆಯಲಿದೆ.

ಶ್ರೀ ಶ್ರೀಶೈಲ ಕ್ರೆಡಿಟ್ ಸೊಸೈಟಿಯಲ್ಲಿ ಸತತ 25 ವರ್ಷಗಳಿಂದ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ದಾವಣಗೆರೆ ತಾಲ್ಲೂಕು ಪಂಚಾಯತ್ ಮಾಜಿ ಅಧ್ಯಕ್ಷ ಮೇಕಾ ಮುರುಳಿಕೃಷ್ಣ ಅವರು (6ನೇ ಪುಟಕ್ಕೆ)

# ಎಂದಿನಂತೆ ತಮ್ಮ ಚಟುವಟಿಕೆಗಳಲ್ಲಿ ಎಸ್ಸೆಸ್ ನಿರತ



ದಾವಣಗೆರೆ, ಜ.22- ವಯೋ ಸಹಜತೆಯಿಂದಾಗಿ ವೈದ್ಯರ ಆರೈಕೆಯಲ್ಲಿ ಬೆಂಗಳೂರಿನ ತಮ್ಮ ನಿವಾಸದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ನಿನ್ನೆ ನಗರಕ್ಕೆ ಆಗಮಿಸಿದ್ದು, ಇಂದು ಎಂದಿನಂತೆ ತಮ್ಮ ಚಟುವಟಿಕೆಗಳಲ್ಲಿ ನಿರತರಾಗಿದ್ದರು.

ಒಂದೂವರೆ ತಿಂಗಳ ಕಾಲ ವಿಶ್ರಾಂತಿ ಪಡೆದು ನಗರಕ್ಕೆ ಆಗಮಿಸುತ್ತಿದ್ದಂತೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದರ್ಶನ ಪಡೆದ ಎಸ್ಸೆಸ್, ಚೌಕಿಪೇಟೆಯಲ್ಲಿರುವ ತಮ್ಮ ಶಾಮನೂರು ಕಲ್ಲಪ್ಪ ಅಂಡ್ ಸನ್ಸ್‌ಗೆ ಭೇಟಿ ನೀಡಿ ಅಂಗಡಿಯ ವ್ಯಾಪಾರದ ವಹಿವಾಟು ಗಮನಿಸಿದರು.

ಇದೇ ಸಂದರ್ಭದಲ್ಲಿ ತಮ್ಮನ್ನು ಭೇಟಿ ಮಾಡಿದ ಈ ಭಾಗದ ವ್ಯಾಪಾರಸ್ಥರು, ಕುಶಲೋಪರಿ ನಡೆಸಿದರು. ದವಸ - ಧಾನ್ಯಗಳನ್ನು ಪರಿಶೀಲಿಸಿದ ಎಸ್ಸೆಸ್, ಗುಣಮಟ್ಟದ ಬೇಳೆ ಕಾಳುಗಳನ್ನು ಮಾರಾಟ ಮಾಡುವಂತೆ ಸೂಚಿಸಿದರು.

# ಮೈಕ್ರೋ ಫೈನಾನ್ಸ್‌ಗಳ ವಿರುದ್ಧ ಕ್ರಮಕ್ಕೆ ಸೂಚನೆ

ಬೆಂಗಳೂರು, ಜ. 22- ನಿಯಮಾವಳಿ ಬಿಟ್ಟು ಸಾಲದ ಅಸಲು ಮತ್ತು ಬಡ್ಡಿ ವಸೂಲಿಗೆ ಮುಂದಾಗುವ ಮೈಕ್ರೊ ಫೈನಾನ್ಸ್ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಪೋಲಿಸರಿಗೆ ಸೂಚಿಸಿರುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಖಾಸಗಿ ಹಣಕಾಸು ಸಂಸ್ಥೆಗಳು ಕಿರುಕುಳ ನೀಡಿದರೆ ಅಂತಹವರು ಸಂಬಂಧಪಟ್ಟ ಪೊಲೀಸ್ ಠಾಣೆಗೆ ದೂರು ನೀಡಬೇಕು, ಅವರು ಕ್ರಮ ಕೈಗೊಳ್ಳದಿದ್ದರೆ ಮೇಲಾಧಿಕಾರಿಗಳ ಗಮನಕ್ಕೆ ತನ್ನಿ ಎಂದು ತಿಳಿಸಿದ್ದಾರೆ.

ಈ ಸಂಸ್ಥೆಗಳು ನಿಯಮಾವಳಿಗಳನ್ನು ಗಾಳಿಗೆ ತೂರಿ ರೈತರು, ಬಡವರು ಹಾಗೂ ಮಧ್ಯಮ ವರ್ಗದ ಜನರಿಂದ ಸುಲಿಗೆ ಮಾಡುತ್ತಿವೆ. ಕೆಲವರು ನೋಂದಣಿ ಮಾಡಿಸದೇ ಹಣಕಾಸು ವ್ಯವಹಾರ ನಡೆಸುತ್ತಿದ್ದಾರೆ, ಇಂತಹವರನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ನಮಗೆ ಬಂದ ದೂರುಗಳ ಆಧಾರದ ಮೇಲೆ ಕಠಿಣ ಕ್ರಮ ಕೈಗೊಂಡಿದ್ದೇವೆ, ಸಾರ್ವಜನಿಕರು ಈ ವಿಷಯದಲ್ಲಿ ಸಹಕಾರ ನೀಡುವಂತೆ ಕೋರಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ, ತ್ಯಾಗ ಮನೋಭಾವದ ಹೇಳಿಕೆಗೆ ಪ್ರತಿಕ್ರಿಯಿಸಿ, ಅವರ ಮಾತುಗಳು ನಮಗೆ ಅರ್ಥವಾಗಿಲ್ಲ ಎಂದರು. ಅವರು ಯಾವ ಅರ್ಥದಲ್ಲಿ ಹೇಳಿದ್ದಾರೋ ನಮಗೆ ಗೊತ್ತಿಲ್ಲ, (4ನೇ ಪುಟಕ್ಕೆ)

# ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಸ್ಥಾನ ತಿರಸ್ಕರಿಸಿದ ಗಂಗಾಧರಯ್ಯ ಹಿರೇಮಠ



ದಾವಣಗೆರೆ, ಜ.22- ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಸಾಹಿತ್ಯ ಸಮ್ಮೇಳನವನ್ನು ಫೆ. 1 ಮತ್ತು 2 ರಂದು ನಡೆಸಲು ನಿರ್ಧರಿಸಲಾಗಿದ್ದು, ಈ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ವಾಧ್ಯಕ್ಷರನ್ನಾಗಿ ನಗರದ ಲೇಖಕ, ವಿಶ್ರಾಂತ ಪ್ರಾಧ್ಯಾಪಕರೂ ಆದ ಡಾ.ಗಂಗಾಧರಯ್ಯ ಹಿರೇಮಠ ಇವರನ್ನು ಸಾಹಿತ್ಯ ಪರಿಷತ್ ಸರ್ವಾನುಮತದಿಂದ ಆಯ್ಕೆ ಮಾಡಿದೆ.

ಪರಿಷತ್ತಿನ ಆಯ್ಕೆಯನ್ನು ಗೌರವಿಸಿ, ವಿನಮ್ರವಾಗಿ ನನಗೆ ಈ ಸ್ಥಾನ ಬೇಡ.ನನಗಿಂತ ಹಿರಿಯರು, ಅನುಭವಿಗಳು ಹಾಗೂ ಸಾಹಿತಿಗಳು (4ನೇ ಪುಟಕ್ಕೆ)

# ಇನ್ನೂ ಐದು ವರ್ಷಗಳು ಎನ್.ಹೆಚ್.ಎಂ. ವಿಸ್ತರಣೆ

ನವದೆಹಲಿ, ಜ.22- ನ್ಯಾಷನಲ್ ಹೆಲ್ತ್ ಮಿಷನ್ (ಎನ್.ಹೆಚ್.ಎಂ.) ಯೋಜನೆಯನ್ನು ಇನ್ನೂ ಐದು ವರ್ಷಗಳ ಕಾಲ ವಿಸ್ತರಿಸಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಕಳೆದ ಹತ್ತು ವರ್ಷಗಳಲ್ಲಿ ಈ ಯೋಜನೆ ತನ್ನ ಐತಿಹಾಸಿಕ ಗುರಿಗಳನ್ನು ತಲುಪಿದೆ ಎಂದು ಸಂಪುಟ ಸಭೆಯ ನಂತರ ಮಾತನಾಡಿದ ಕೇಂದ್ರ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ.

ಎನ್.ಹೆಚ್.ಎಂ. ಯೋಜನೆಗೆ 2021 ಹಾಗೂ 2022ರ ನಡುವೆ 12 ಲಕ್ಷ ಆರೋಗ್ಯ ಕಾರ್ಮಿಕರು ಸೇರ್ಪಡೆಯಾಗಿದ್ದಾರೆ ಎಂದವರು ತಿಳಿಸಿದರು.

|| ಶ್ರೀ ಕಾರಡಗಿ ವೀರಭದ್ರೇಶ್ವರ ಪ್ರಸನ್ನ ||

**ಎಂಟನೇ ವಾರ್ಷಿಕ ಭಾವಪೂರ್ಣ ಸ್ಮರಣಾಂಜಲಿ**



ಕೆ.ಎಸ್. ಚನ್ನವೀರಯ್ಯ
ಇವರ ಧರ್ಮಪತ್ನಿ
ಶ್ರೀಮತಿ ಕು||ಸೌ||
ಕೆ.ಸಿ.ಸೌಭಾಗ್ಯಮ್ಮ
ಲಿಂಗೋದ್ಭವ : 17.02.1953
ಲಿಂಗೈಕ್ಯ : 23.01.2017

*ಕರ್ಮಯೋಗಿಯ ಬದುಕು ಅವರನ್ನು ಆತ್ಮದೊಂದಿಗೆ ಜೋಡಿಸುತ್ತದೆ, ಇದು ಈಶನಲ್ಲಿ ಐಕ್ಯವಾಗಲು ಮಾರ್ಗ ತೋರುತ್ತದೆ. (ಭಗವದ್ ಗೀತೆಯ ಸಾರ) ನನ್ನ ನಿತ್ಯ ಬಾಳಸಂಗಾತಿಯಾಗಿದ್ದು ಬದುಕಿಗೆ ಪೂರಕವಾಗಿದ್ದ ಅಸ್ಮಿತೆಯೊಂದು ನಮ್ಮಿಂದ ದೂರವಾದಾಗಲೇ ಅದರ ನಿಜ ಮೌಲ್ಯ ಅರಿವಿಗೆ ಬರುವುದು. ನೀವು ಕಾಯದಿಂದ ಕಣ್ಮರೆಯಾದರೂ ನಿಮ್ಮಯ ಆದರ್ಶ, ಶಾಂತಿ ಸಮಾಧಾನ, ಸಹನಶೀಲತೆ ಹೆಜ್ಜೇನಿನಂತೆ ಮಧುರ ನುಡಿಗಳು, ಮನದಾಳದಲ್ಲಿ ಅಚ್ಚು ಒತ್ತಿದಂತಿದೆ. ಒಟ್ಟಿನಲ್ಲಿ ನಿಮ್ಮಯ ಸದ್ಗುಣ ಬಣ್ಣಿಸಲು ಪದಗಳು ಸಾಕಾಗುತ್ತಿಲ್ಲ. ತಮ್ಮ ಸಾರ್ಥಕ ಬದುಕಿನ ಪಯಣವು 2920 ದಿನಗಳು (8 ವಸಂತಗಳು) ಸಂದವು. ಮಂಗಳಮಯನಾದ ಪ್ರಕೃತಿ ಪುರುಷನಾದ ಪರಂಜ್ಯೋತಿಯು ನಿಮ್ಮಯ ಪವಿತ್ರಾತ್ಮಕ್ಕೆ ಚಿರಶಾಂತಿಯ ಸೌಖ್ಯವ ಕರುಣಿಸಲೆಂದು*

ನಮ್ಮಗಳ ಭಕ್ತಿಪೂರ್ವಕ ಪ್ರಣಾಮಗಳು....

ಶೋಕತಪ್ತ ಪತಿ : ಕೆ.ಎಸ್. ಚನ್ನವೀರಯ್ಯ
ಶ್ರೀ ಶಿವಕುಮಾರ ಸ್ವಾಮಿ ಬಡಾವಣೆ, 1ನೇ ಹಂತ, 1ನೇ ಮೇನ್, 1ನೇ ಕ್ರಾಸ್, ದಾವಣಗೆರೆ-4.
ಫೋ. : 70227 79716, 98440 02785, 95000 27489

ವಿ.ಸೂ. : ಶ್ರೀಮತಿಯವರ ಸ್ಮರಣಾರ್ಥವಾಗಿ 23.01.2025ರ ಗುರುವಾರ ಹಾವೇರಿ ಜಿಲ್ಲಾ ಬ್ಯಾಡಗಿ ತಾಲ್ಲೂಕು ಕದರಮಂಡಲಗಿ ಶ್ರೀ ಕಾಂತೇಶ್ವರ ಮಹಾಸ್ವಾಮಿ ಸನ್ನಿಧಿಯಲ್ಲಿ ಅಪರಾಹ್ನ 12.30 ರಿಂದ ಅನ್ನ ದಾಸೋಹವಿದೆ.

ಸರ್ವರಿಗೂ ಸುಸ್ವಾಗತ

# ಆದರ್ಶ ಶಾಲೆಗಳು ಪ.ಪೂ. ಕಾಲೇಜಾಗಿ ಮೇಲ್ದರ್ಜೆಗೆ



ಹರಪನಹಳ್ಳಿ

ಹರಪನಹಳ್ಳಿ.ಜ.22- ವಿಜಯನಗರ ಜಿಲ್ಲೆಯ ಹೊಸಪೇಟೆ. ಹರಪನಹಳ್ಳಿ. ಹಗರಿಬೊಮ್ಮನಹಳ್ಳಿ ಹಾಗೂ ಕೂಡ್ಲಿಗಿ ಸೇರಿ ಜಿಲ್ಲೆಯ ನಾಲ್ಕು ಕಾಲೇಜುಗಳನ್ನು ಆದರ್ಶ ಕಾಲೇಜುಗಳಾಗಿ ಮೇಲ್ದರ್ಜೆಗೇರಿಸಲಾಗಿದೆ ಎಂದು ವಿಜಯನಗರ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಟಿ. ಪಾಲಾಕ್ಷ ಹೇಳಿದರು.

ತಾಲ್ಲೂಕಿನ ಅನಂತನಹಳ್ಳಿಯ ಬಳಿ ಇರುವ ಸರ್ಕಾರಿ ಆದರ್ಶ ಶಾಲೆಗೆ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ತಾಲ್ಲೂಕಿನ ಅನಂತನಹಳ್ಳಿಯ ಬಳಿ ಇರುವ ಸರ್ಕಾರಿ ಆದರ್ಶ ಶಾಲೆಯಲ್ಲಿ 2025-26ನೇ ಸಾಲಿನಲ್ಲಿ ಪಿ.ಯು. ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳು ಮುಂದಿನ ವರ್ಷದಿಂದ ಪ್ರಾರಂಭವಾಗಲಿವೆ. ಆದರ್ಶ ವಿದ್ಯಾಲಯವನ್ನು ಆದರ್ಶ ಸರ್ಕಾರಿ ಪದವಿ ಪೂರ್ವ ಕಾಲೇಜಾಗಿ ಮೇಲ್ದರ್ಜೆಗೇರಿಸಿ ಮೂಲ ಸೌಲಭ್ಯ, ಸುಸಜ್ಜಿತ ಕಟ್ಟಡ ಪ್ರಯೋಗಾಲಯ ತರಗತಿಗಳು ಡಿಜಿಟಲ್ ಗ್ರಂಥಾಲಯ ಸ್ಥಾಪಿಸಲಾಗುತ್ತದೆ ಎಂದರು.

ಆದರ್ಶ ಸರ್ಕಾರಿ ಪದವಿ ಪೂರ್ವ ಕಾಲೇಜು ಆರಂಭಕ್ಕೆ 32ಲಕ್ಷ ರೂ.ಗಳು ಮಂಜೂರು ಆಗಿದ್ದು, ಡಿಜಿಟಲ್ ಗ್ರಂಥಾಲಯ, ಕಂಪ್ಯೂಟರ್ ಪ್ರಯೋಗಾಲಯದ ಸಿದ್ದತೆ ಕೈಗೊಳ್ಳಲಾಗಿದೆ. ಕೊಠಡಿ ದುರಸ್ತಿ. ಶುದ್ಧ ಕುಡಿಯುವ ನೀರು ಹಾಗೂ ಸಮರ್ಪಕ ವಿದ್ಯುತ್ ವ್ಯವಸ್ಥೆ, ವಿಜ್ಞಾನ ವಿಷಯದ ಸಂಯೋಜನೆ ಮಂಜೂರು ಸೇರಿ ಇತರೆ ಪ್ರಯೋಗಾಲಯಗಳಲ್ಲಿ ಮೂಲ ಸೌಕರ್ಯ ಕಲ್ಪಿಸಲಾಗುತ್ತದೆ ಎಂದರು.

ಇದೆ ವೇಳೆ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು.ಎಸ್ ಯು ಜೆಎಂ ಪದವಿ ಪೂರ್ವ ಕಾಲೇಜು, ಭಂಗಿ ಬಸಪ್ಪ ಪೂರ್ವ ಕಾಲೇಜು, ಎಚ್ ಪಿ.ಎಸ್ ಪದವಿ ಪೂರ್ವ ಕಾಲೇಜುಗಳಿಗೆ ಭೇಟಿ ನೀಡಿ ದ್ವಿತೀಯ ಪಿಯು ಫಲಿತಾಂಶ ಹೆಚ್ಚಳಕ್ಕೆ ಕ್ರಮಕೈಗೊಳ್ಳುವಂತೆ, ಪ್ರಾಂಶುಪಾಲರಿಗೆ ಸೂಚನೆ ನೀಡಿದರು.

ಸರ್ಕಾರಿ ಆದರ್ಶ ಶಾಲೆ ಮುಖ್ಯ ಶಿಕ್ಷಕ ಮಾತನಾಡಿ, ರಾಜ್ಯದಲ್ಲಿ ಹಿಂದುಳಿದ ತಾಲ್ಲೂಕುಗಳಲ್ಲಿ ಹರಪನಹಳ್ಳಿ ತಾಲ್ಲೂಕು ಕೂಡ ಒಂದಾಗಿದ್ದು, ಹರಪನಹಳ್ಳಿ ತಾಲ್ಲೂಕು ಶಿಕ್ಷಣ ಕ್ಷೇತ್ರದಲ್ಲಿ ಮುಂದುವರೆದ ತಾಲ್ಲೂಕಾಗಿದೆ. ಗ್ರಾಮೀಣ ಭಾಗದ ಮಕ್ಕಳ ಶೈಕ್ಷಣಿಕ ಬೆಳವಣಿಗೆ ದೃಷ್ಟಿಯಿಂದ ಸರ್ಕಾರ ಮುಂದಿನ ಶೈಕ್ಷಣಿಕ ವರ್ಷದಿಂದ ಮೇಲ್ದರ್ಜೆಗೇರಿಸಿರುವ ಆದರ್ಶ ಸರ್ಕಾರಿ ಕಾಲೇಜುಗಳು ದೂರದ ನಗರಗಳಿಗೆ ಹೋಗಿ ದುಬಾರಿ ವೆಚ್ಚ ಭರಿಸಿ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪಡೆಯುವ ಕನಸು ಹೊತ್ತಿರುವ ಬಡ ಮಕ್ಕಳಿಗೆ ಅನುಕೂಲವಾಗಲಿದೆ ಎಂದರು.

ಈ ವೇಳೆ ಎಸ್ ಯು ಜೆಎಂ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಎಚ್. ಮಲ್ಲಿಕಾರ್ಜುನ, ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ವೆಂಕಟೇಶ, ಉಪನ್ಯಾಸಕ ಹಾಲಪ್ಪ ಸೇರಿದಂತೆ ಇತರರು ಇದ್ದರು.

# ಹರಿಹರದಲ್ಲಿ ಶ್ರೀ ರಾಮ ಮೂರ್ತಿ ಮೆರವಣಿಗೆ





ಹರಿಹರ, ಜ. 22 - ಅಯೋಧ್ಯೆ ನಗರದ ಶ್ರೀ ರಾಮ ಮಂದಿರದ ದೇವಸ್ಥಾನದಲ್ಲಿ ಶ್ರೀ ರಾಮನ ಮೂರ್ತಿ ಪ್ರತಿಷ್ಠಾಪನೆ ಮಾಡಿ ಇಂದಿಗೆ ಒಂದು ವರ್ಷ ಕಳೆದಿರುವುದರಿಂದ ನಗರದ ಶ್ರೀರಾಮನ ಭಾವಚಿತ್ರದ ಮೆರವಣಿಗೆಯನ್ನು ಶ್ರದ್ಧಾ ಭಕ್ತಿಯಿಂದ ಮತ್ತು ಸಡಗರ, ಸಂಭ್ರಮದಿಂದ ಮಾಡಲಾಯಿತು.

ಮೆರವಣಿಗೆಯು ನಗರದ ಶ್ರೀ ಹರಿಹರೇಶ್ವರ ದೇವಸ್ಥಾನದ ಆವರಣದಿಂದ ಪ್ರಾರಂಭಗೊಂಡು, ದೇವಸ್ಥಾನ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯ ರಸ್ತೆ, ಹಳೆ ಪಿ.ಬಿ. ರಸ್ತೆ, ಹೆಚ್. ಶಿವಪ್ಪ ಸರ್ಕಲ್, ಶಿವಮೊಗ್ಗ ರಸ್ತೆ, ಹೈಸ್ಕೂಲ್ ಬಡಾವಣೆಯ ಸೇರಿದಂತೆ ಇತರೆ ಪ್ರಮುಖ ಬಡಾವಣೆಯ ಸಂಚಾರಿ ರಾಮ ಮಂದಿರಕ್ಕೆ ಅಂತ್ಯಗೊಂಡಿತು.

ಸೀತಾರಾಮ ಭಜನಾ ಮಂಡಳಿ, ರಾಣಿ ಚೆನ್ನಮ್ಮ, ವಾಸವಿ, ದಾನಮ್ಮ ದೇವಿ, ಸತ್ಯಗಣಪತಿ, ರುಕ್ಮಿಣಿ, ದೈವಜ್ಞ, ಎಸ್, ಎಸ್.ಕೆ, ಸ್ವಕುಳ ಸಾಲಿ, ಜನಬಾಯಿ ಭಜನಾ ಮಂಡಳಿ ಸೇರಿದಂತೆ ಹಲವು ಮಹಿಳಾ ಭಜನಾ ಮಂಡಳಿಯ ಸದಸ್ಯರು ಮೆರವಣಿಗೆಯಲ್ಲಿ ಭಾಗವಹಿಸಿ ಮೆರವಣಿಗೆಗೆ ಮೆರಗನ್ನು ನೀಡಿದವು.

ಮೆರವಣಿಗೆ ನಂತರ ಶ್ರೀರಾಮ ಸೀತಾಮಾತೆ, ಲಕ್ಷ್ಮಣ, ಆಂಜನೇಯ ಸ್ವಾಮಿ ದೇವರಿಗೆ ಮಹಾಮಂಗಳಾರತಿ ಮಾಡಿ ಪ್ರಸಾದ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ತಪೋವನ ಛೇರ್ಮನ್ ಶಶಿಕುಮಾರ್, ಬಿ.ಜೆ.ಪಿ. ಮುಖಂಡ ಚಂದ್ರಶೇಖರ್ ಪೂಜಾರ್, ಪರುಶುರಾಮ್ ಕಾಟ್ವೆ, ಶಶಿಕಾಂತ್ ನವರತ್ನ, ತುಳಜಪ್ಪ ಭೂತೆ, ಡಾ. ಸಿಂದಗಿ, ದಿನೇಶ್, ಕೃಷ್ಣಮೂರ್ತಿ ಶೆಟ್ಟಿ, ಶಿವಪ್ರಕಾಶ್ ಶಾಸ್ತ್ರಿ, ತುಳಜಪ್ಪ ಭೂತೆ, ಪವನ್ ಆಚಾರ್ಯ, ಮೈಲಾರಸಾ ಹೆಚ್. ಕಾಟ್ವೆ, ಗುರುಬಸವರಾಜ್, ಕೃಷ್ಣ ರಾಜೋಳ್ಳಿ, ಗಣೇಶ ನಲ್ಲಿ, ರಾಜು ಕಿರೋಜಿ, ರವಿಕುಮಾರ್, ಆದಿತ್ಯ ಟಿ. ಮೆಹರ್ವಾಡೆ, ಏಳುಕೋಟಿ ಹೆಚ್. ಕಾಟ್ವೆ, ರೂಪ ಶಶಿಕಾಂತ್, ಪ್ರೀಯಾ ರಾಯ್ಕರ್, ಸುಮಂತ್ ಖಮಿತ್ಕರ್, ಚಂದ್ರಲೇಖ ಮಲ್ಲಿಕಾರ್ಜುನ, ಗೀತಾ, ಗೀತಾ ಭೂತೆ, ಜಯಲಕ್ಷ್ಮಿ ಶಶಿಕುಮಾರ್ ಮೆಹರ್ವಾಡೆ, ಶಂಕುತಲ, ವಾಸವಿ, ಸಾಕ್ಷಿ, ನಂದಾ ಎಂ. ಕಾಟ್ವೆ , ಶೋಭಾ,ರತ್ನಮ್ಮ ಜಾನಕಿ, ವೀಣಾ ಮಂಜುಳಾ, ಮುಕ್ತ ಬೊಂಗಾಳೆ, ಭಾರತಿ ನವಾಲೆ, ಇಂದ್ರಾಣಿ, ಅರುಣಾ ಬೊಂಗಾಳೆ ಟಿ. ಯಶೋಧ, ಚಿದಾನಂದ, ಸಿ.ಕೆ. ಗುರುಪ್ರಾಸದ್ ಕಂಚಿಕೇರಿ ಇತರರು ಹಾಜರಿದ್ದರು.

# ಕೊನೆ ಭಾಗದ ಜಮೀನಿಗೆ ನೀರು ತಲುಪಿಸುವಂತೆ ರೈತರ ಆಗ್ರಹ



**ಶೀಘ್ರದಲ್ಲೇ ನೀರಾವರಿ ಇಲಾಖೆ ಅಧಿಕಾರಿಗಳ ಸಭೆ ಕರೆದು ಸೂಕ್ತ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಭರವಸೆ ನೀಡಿದ ಅಪರ ಜಿಲ್ಲಾಧಿಕಾರಿ ಲೋಕೇಶ್**

ದಾವಣಗೆರೆ, ಜ.22- ನಾಲೆಯ ನೀರು ನಿರ್ವಹಣೆ ಮಾಡುವ ಸೌಡಿಗಳ ಬಾಕಿ ವೇತನವನ್ನು ತಕ್ಷಣವೇ ಬಿಡುಗಡೆಗೊಳಿಸಿ, ಕೊನೆ ಭಾಗದ ರೈತರಿಗೆ ನೀರು ತಲುಪಿಸುವಂತೆ ಆಗ್ರಹಿಸಿ ರೈತರ ಒಕ್ಕೂಟವು ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದೆ.

ಈ ವೇಳೆ ಮಾತನಾಡಿದ ರೈತ ಮುಖಂಡರು, ಭದ್ರಾ ಡ್ಯಾಂನಿಂದ ಬೇಸಿಗೆ ಹಂಗಾಮಿಗೆ ನೀರು ಹರಿಸಲು ಪ್ರಾರಂಭಿಸಿ ಇಂದಿಗೆ 12 ದಿನಗಳೇ ಕಳೆದರೂ ತ್ಯಾವಣಿಗೆ ಉಪವಿಭಾಗದ ಕಾಲುವೆಗಳಿಗೆ ನೀರು ಬಂದಿಲ್ಲ. ಇದರಿಂದ ಬೇಸಿಗೆಯಲ್ಲಿ ಭತ್ತದ ಬೆಳೆ ಬೆಳೆಗಾಗಿ ಸಸಿಮಡಿ ಮಾಡಲು, ಜಮೀನು ಉಳಿಮೆ ಮಾಡಲು ಹಾಗೂ ಬೀಜ ಉಗ್ಗುವ ಮೂಲಕ ನೇರ ಬಿತ್ತನೆ ಮಾಡುವ ರೈತರಿಗೆ ಅನಾನುಕೂಲವಾಗುತ್ತಿದೆ ಎಂದು ದೂರಿದರು.

ಈ ಬಗ್ಗೆ ನೀರಾವರಿ ಇಲಾಖೆಯ ಇಂಜಿನಿಯರ್‌ಗಳನ್ನು ವಿಚಾರಿಸಿದರೆ, 'ನೀರು ನಿರ್ವಹಣೆ ಮಾಡುವ ಸೌಡಿಗಳು ಕೆಲಸಕ್ಕೆ ಬಾರದೆ ಮುಷ್ಕರ ನಡೆಸುತ್ತಿದ್ದಾರೆ'.

ಅವರು ಹೊರಗುತ್ತಿಗೆ ಆಧಾರದಲ್ಲಿ ನೇಮಕವಾಗಿದ್ದು, ಅವರಿಗೆ ಸುಮಾರು 10 ತಿಂಗಳಿನಿಂದ ವೇತನವಾಗಿಲ್ಲ. ನಾವು ಏನು ಮಾಡಲು ಸಾಧ್ಯ ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿ ಜಾರಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು.

ಪ್ರಸ್ತುತ ಡ್ಯಾಂನಲ್ಲಿ ನೀರಿನ ಮಟ್ಟ 180 ಅಡಿ ಇದ್ದು, ಪ್ರತಿನಿತ್ಯ ಹೊರಹರಿವು 3277 ಕ್ಯೂಸೆಕ್ಸ್ ನೀರನ್ನು ನಾಲೆಗಳಿಗೆ ಹರಿಸಲಾಗುತ್ತಿದೆ. ಸರಿಯಾದ ನಿರ್ವಹಣೆ ಇಲ್ಲದೆ, ನೀರು ವ್ಯರ್ಥವಾಗಿ ಹಳ್ಳ ಕೊಳ್ಳಗಳಿಗೆ ಹರಿದು ಹೋಗುತ್ತಿದೆ. ಆದ್ದರಿಂದ ಮುಷ್ಕರದಲ್ಲಿ ನಿರತರಾಗಿರುವ ಸೌಡಿಗಳ ಮನವೊಲಿಸಿ, ಕೆಲಸಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸುವಂತೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಕಾಲುವೆಗಳಲ್ಲಿ ಬೆಳೆದಿರುವ ಗಿಡಗಂಟಿಗಳನ್ನು ಸ್ವಚ್ಛ ಮಾಡಿಸಬೇಕು. ಹೂಳು ತೆಗೆಸಬೇಕು. ಕಾಲುವೆಗಳನ್ನು ದುರಸ್ಥಿ ಮಾಡಿಸಿ, ಕೊನೆ ಭಾಗಕ್ಕೆ ನೀರು ತಲುಪುವಂತೆ ಕ್ರಮ ವಹಿಸಬೇಕು ಮತ್ತು ಭದ್ರಾ ನೀರಾವರಿ ಸಲಹಾ ಸಮಿತಿ (ಐ.ಸಿ.ಸಿ) ಸಭೆ ನಿರ್ಣಯದ ವೇಳಾಪಟ್ಟಿಯಂತೆ ರೈತನ ಜಮೀನಿಗೆ ನೀರು ಹರಿಯುವಂತೆ ಕ್ರಮವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ವೇಳೆ ರೈತ ಮುಖಂಡರಾದ ಕೋಳೇನಹಳ್ಳಿ ಬಿ.ಎಂ ಸತೀಶ್, ಬೆಳವನೂರು ನಾಗೇಶ್ವರರಾವ್, ಕುಂದುವಾಡದ ಹೆಚ್.ಜಿ. ಗಣೇಶಪ್ಪ, ಮಾಜಿ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮಾಜಿ ಮೇಯರ್ ಹೆಚ್.ಎನ್. ಗುರುನಾಥ್ ಇತರರು ಇದ್ದರು.

# ಬೆಂಕಿ ಅವಘಡದ ಆತಂಕ : ಹಳಿಗೆ ಜಿಗಿದ 12 ಪ್ರಯಾಣಿಕರ ಸಾವು



ಜಲಗಾವ್, ಜ.22- ಬೆಂಕಿ ಅನಾಹುತ ಸಂಭವಿಸಿದೆ ಎಂದು ಗಾಬರಿಗೊಂಡು ರೈಲೊಂದರ ಪ್ರಯಾಣಿಕರು ಹಳಿಗೆ ಜಿಗಿದಾಗ ಮತ್ತೊಂದು ರೈಲು ಹರಿದು ಕನಿಷ್ಠ 12 ಪ್ರಯಾಣಿಕರು ಸಾವನ್ನಪ್ಪಿದ ಘಟನೆ ಮಹಾರಾಷ್ಟ್ರದ ಜಲಗಾವ್ ಜಿಲ್ಲೆಯಲ್ಲಿ ನಡೆದಿದೆ.

ಹನ್ನೆರಡು ಮೃತದೇಹಗಳನ್ನು ಹತ್ತಿರದ ಆಸ್ಪತ್ರೆಗೆ ರವಾನಿಸಲಾಗಿದೆ. ಆರರಿಂದ ಏಳು ಜನರು ಗಾಯಗೊಂಡಿ ದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹೇಜಿ ಹಾಗೂ ಪರ್ಧಾದೆ ನಿಲ್ದಾಣಗಳ ನಡುವೆ ಈ ಘಟನೆ ನಡೆದಿದೆ. ಲಕ್ನೋ -ಮುಂಬೈ ನಡುವೆ ಸಂಚರಿಸುವ ಪುಷ್ಪಕ್ ಎಕ್ಸ್‌ಪ್ರೆಸ್ ರೈಲಿನ ಚೈನನ್ನು ಸಂಜೆ 5 ಗಂಟೆಗೆ ಪ್ರಯಾಣಿಕರೊಬ್ಬರು ಎಳೆದು ನಿಲ್ಲಿಸಿದ್ದರು. ರೈಲಿನಲ್ಲಿ ಬೆಂಕಿ ಹತ್ತಿಕೊಂಡಿದೆ ಎಂಬ ಗಾಳಿ ಸುದ್ದಿ ಹರಡಿತ್ತು. ಆಗ ಕೆಲ ಪ್ರಯಾಣಿಕರು ಹೊರಕ್ಕೆ ಜಿಗಿದರು.

ಅದೇ ವೇಳೆ ಬೆಂಗಳೂರಿನಿಂದ ದೆಹಲಿಗೆ ತೆರಳುತ್ತಿದ್ದ ಕರ್ನಾಟಕ ಎಕ್ಸ್‌ಪ್ರೆಸ್ ರೈಲು ಬಂದಿತ್ತು. ಆ ರೈಲಿಗೆ ಸಿಲುಕಿ ಪ್ರಯಾಣಿಕರ ಸಾವು ಸಂಭವಿಸಿದೆ. ಪುಷ್ಪಕ್ ಎಕ್ಸ್‌ಪ್ರೆಸ್ ರೈಲಿನ ಭೋಗಿ ಒಂದರಲ್ಲಿ ಕಿಡಿ ಹಾಗೂ ಹೊಗೆ ಕಾಣಿಸಿಕೊಂಡಿತ್ತು. ಇದು ಪ್ರಯಾಣಿಕರು ಗಾಬರಿಯಾಗಲು ಕಾರಣವಾಗಿತ್ತು. ಅವರು ರೈಲಿನ ಚೈನ್ ಎಳೆದರು. ಆಗ ಕೆಲವರು ಹೊರಗೆ ಜಿಗಿದರು ಎಂದು ರೈಲ್ವೆ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ವಾರಸುದಾರರಿಗೆ ಲ್ಯಾಪ್‌ಟಾಪ್ ಹಸ್ತಾಂತರಿಸಿದ ಪೊಲೀಸರು



ದಾವಣಗೆರೆ, ಜ.22- ನಗರದ ಆಟೋವೊಂದರಲ್ಲಿ ಲ್ಯಾಪ್‌ಟಾಪ್ ಮತ್ತು ದಾಖಲಾತಿಯನ್ನು ಬಿಟ್ಟು ಕಳೆದುಕೊಂಡಿದ್ದ ಸ್ವತ್ತನ್ನು ಆಜಾದ್ ನಗರ ಪೊಲೀಸರು ಪತ್ತೆ ಮಾಡಿ ವಾರಸುದಾರರಿಗೆ ಹಸ್ತಾಂತರಿಸಿದ್ದಾರೆ.

ಬೆಂಗಳೂರು ನಗರದ ವಾಸಿ ರೇಷ್ಮಾ ಖಲೀಂವುಲ್ಲಾ ಅವರು ನಗರದ ಜೆ.ಜೆ ಕಾನ್ವೆಂಟ್ ಹತ್ತಿರವಿರುವ ಸಂಬಂಧಿಕರ ಮನೆಗೆ ಕಾರ್ಯಕ್ರಮದ ನಿಮಿತ್ತ ಬಂದಿರುತ್ತಾರೆ.

ಜ.20ರಂದು ಜೆ.ಜೆ ಕಾನ್ವೆಂಟ್ ನಿಂದ ಆಟೋದಲ್ಲಿ ಪ್ರಯಾಣಿಸಿ ವಿನೋಬಾ ನಗರದ 13ನೇ ಕ್ರಾಸಿನ ಸಂಬಂಧಿಕರ ಮನೆಗೆ ತಲುಪಿ ಆಟೋದಿಂದ ಇಳಿಯುವಾಗ ಲ್ಯಾಪ್‌ಟಾಪ್ ಮತ್ತು ದಾಖಲಾತಿ ಇರುವ ಬ್ಯಾಗ್ ಕಳೆದುಕೊಂಡಿರುವುದಾಗಿ ಆಜಾದ್ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪೊಲೀಸ್ ಕಮಾಂಡ್ ಸೆಂಟರ್ ಸಿಬ್ಬಂದಿಯ ಸಹಾಯದಿಂದ 'ರೇಷ್ಮಾ ಖಲೀಂವುಲ್ಲಾ' ಪ್ರಯಾಣಿಸಿದ ಕೆಎ-17ಎಎ4961 ನಂಬರ್‌ನ ಆಟೋ ಮತ್ತು ಅದರ ಚಾಲಕ ಮಹಮ್ಮದ್ ಸಾಧಿಕ್ ಈತನನ್ನು ಪತ್ತೆ ಮಾಡಿ, ಸಂತ್ರಸ್ಥರು ಕಳೆದುಕೊಂಡಿದ್ದ 70 ಸಾವಿರ ರೂ. ಮೌಲ್ಯದ ಲ್ಯಾಪ್ ಟಾಪ್ ಮತ್ತು ಇತರೆ ದಾಖಲಾತಿಯನ್ನು ವಶಕ್ಕೆ ಪಡೆದು ವಾರಸುದಾರರಿಗೆ ಹಸ್ತಾಂತರಿಸಿದ್ದಾರೆ.

# ನಗರಕ್ಕೆ ಇಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರು

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಅಪರ್ಣಾ ಎಂ. ಕೊಳ್ಳ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ.

ಇಂದು ಬೆಳಿಗ್ಗೆ 10.30 ಕ್ಕೆ ನಗರಕ್ಕೆ ಆಗಮಿಸುವ ಅವರು, ಆರ್‌ಟಿಇ ಅನುಷ್ಠಾನ ಮತ್ತು ಮಕ್ಕಳ ಶಿಕ್ಷಣದ ಜೊತೆಗೆ, ರಕ್ಷಣೆ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಮಧ್ಯಾಹ್ನ 2 ಗಂಟೆಗೆ ಆರ್‌ಟಿಇ ಕಾಯ್ದೆ- 2009 ರ ಕುರಿತು ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ, ವಾಸ್ತವ್ಯ ಹೂಡಲಿದ್ದಾರೆ.

ನಾಳೆ ಶುಕ್ರವಾರ ಬೆಳಿಗ್ಗೆ 10.30 ಕ್ಕೆ ಹರಿಹರದಲ್ಲಿ ಆಯೋಜಿಸಿರುವ ಬಾಲ್ಯವಿವಾಹ ಮತ್ತು ಪೋಕ್ಸೋ ಕಾಯ್ದೆ ತರಬೇತಿ ಹಾಗೂ ಮಕ್ಕಳ ಸಂವಾದದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 12.30 ಕ್ಕೆ ಆರ್‌ಟಿಇ ಕಾಯ್ದೆ-2009 ರ ಕುರಿತು ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಆಯೋಜಿಸಿರುವ ಸಭೆಯಲ್ಲಿ ಭಾಗವಹಿಸಿ, ನಂತರ 4 ಗಂಟೆಗೆ ಬೆಂಗಳೂರಿಗೆ ತೆರಳಲಿದ್ದಾರೆ.

## ಅಗ್ನಿ ವೀರ್ ಹುದ್ದೆಗೆ ಅರ್ಜಿ

ದಾವಣಗೆರೆ, ಜ.22- ಭಾರತೀಯ ವಾಯು ಪಡೆಯು ಅಗ್ನಿಪಥ್ ಯೋಜನೆಯಡಿ ಅಗ್ನಿವೀರ್ ಹುದ್ದೆಗಳ ಭರ್ತಿಗಾಗಿ ಅವಿವಾಹಿತ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪಿಯುಸಿಯಲ್ಲಿ ಶೇ. 50 ಅಂಕ, ಆಂಗ್ಲಭಾಷೆ ಶೇ. 50 ಅಂಕದೊಂದಿಗೆ ಉತ್ತೀರ್ಣರಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. 2005 ರ ಜನ ವರಿಯಿಂದ 2008 ರ ಜುಲೈ 1 ರೊಳಗೆ ಜನಿಸಿದವರು ಅರ್ಹರಿದ್ದು, ಇದೇ ದಿನಾಂಕ 27 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಮಾಹಿತಿಗೆ http://agnipathvayu.cdac.in ಹಾಗೂ http://agnipathvayu.cdac.in ವೆಬ್‌ಸೈಟ್‌ಗೆ ಅಥವಾ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ದಾವಣಗೆರೆ. ದೂ.ಸಂ: 08192-259446 ಸಂಪರ್ಕಿಸಲು ಜಿಲ್ಲಾ ಉದ್ಯೋಗಾಧಿಕಾರಿ ಡಿ. ರವೀಂದ್ರ ತಿಳಿಸಿದ್ದಾರೆ.

## ನಗರದಲ್ಲಿ ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಷನ್ ವತಿಯಿಂದ ನಗರದ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಇದೇ ದಿನಾಂಕ 26ರವರೆಗೆ ಪ್ರತಿದಿನ ಬೆಳಿಗ್ಗೆ 6ರಿಂದ 7.30 ರವರೆಗೆ ಓಶೋ ಧ್ಯಾನ ಶಿಬಿರ ನಡೆಯಲಿದೆ. ಆಸಕ್ತ ಧ್ಯಾನಾಸಕ್ತರು ಭಾಗವಹಿಸಬಹುದು ಎಂದು ಅರ್ಚನ (97385 72 318) ಪುಷ್ಪ (90367 19573) ತಿಳಿಸಿದ್ದಾರೆ.

## 21 ವರ್ಷದ ನಂತರ ನಡೆದ ಬೆನಕನಹಳ್ಳಿ ಕರಿಯಮ್ಮ ದೇವಿ ಜಾತ್ರೆ




ಹೊನ್ನಾಳಿ,ಜ.22- ತಾಲ್ಲೂಕಿನ ಬೆನಕನಹಳ್ಳಿ ಗ್ರಾಮದ ಶ್ರೀ ಕರಿಯಮ್ಮ ದೇವಿ ಮತ್ತು ಉಡುಚಲಮ್ಮ ದೇವಿ ಜಾತ್ರಾ ಮಹೋತ್ಸವ 21 ವರ್ಷಗಳ ನಂತರ ಸಂಭ್ರಮದಿಂದ ಜರುಗಿತು. ಮಂಗಳವಾರ ಮತ್ತು ಬುಧವಾರ ವಿವಿಧ ಮಂಗಳ ವಾದ್ಯಗಳೊಂದಿಗೆ ಸಡಗರ ಸಂಭ್ರಮದಿಂದ ಪದ್ಧತಿ ಪ್ರಕಾರ ಪೂಜಾ ಕಾರ್ಯಕ್ರಮಗಳು ಜರುಗಿದವು. ಇಡೀ ಗ್ರಾಮದ ಜನ ಜಾತ್ರೆಯಲ್ಲಿ ಭಕ್ತಿಯಿಂದ ಪಾಲ್ಗೊಂಡಿದ್ದರು. ಶ್ರೀ ಕರಿಯಮ್ಮ ದೇವಿ ಮೂರ್ತಿಯನ್ನು ಗ್ರಾಮದ ಬಡಿಗೇರ ಮನೆಯಿಂದ ಉತ್ಸವದ ಮೂಲಕ ತೆರಳಿ, ಬೀರಪ್ಪ ದೇವರ ಕಟ್ಟೆಯ ಮೇಲೆ ಪ್ರತಿಷ್ಠಾಪಿಸಿ ವಿವಿಧ ಧಾರ್ಮಿಕ ಕಾರ್ಯಕ್ರಮ ಗಳನ್ನು ನಡೆಸಲಾಯಿತು.

## ನಗರದಲ್ಲಿಂದು ಜಿಲ್ಲಾ ಶಸಾಪ ಕಾರ್ಯಕಾರಿ ಸಮಿತಿ ಸಭೆ

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ 2024-25ನೇ ಸಾಲಿನ ದತ್ತಿ ಕಾರ್ಯಕ್ರಮ ಮತ್ತು ಇತರೆ ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲು ಇಂದು ಸಂಜೆ 6ಕ್ಕೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಕಛೇರಿಯಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆಯಲಾಗಿದೆ.

## ರಾಣೇಬೆನ್ನೂರು: ಬೆಳಗಾವಿಯಲ್ಲಿ ಮೃತ ಕಾಂಗ್ರೆಸ್‌ನ ಬಸಪ್ಪಗೆ 5 ಲಕ್ಷ ಧನ ಸಹಾಯ




ರಾಣೇಬೆನ್ನೂರು, ಜ.22- ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಬೆಳಗಾವಿಗೆ ತೆರಳಿದ್ದ ತಾಲ್ಲೂಕಿನ ನದಿಹರಳಹಳ್ಳಿ ಗ್ರಾಮದ ಕಾಂಗ್ರೆಸ್ ಮುಖಂಡ ಬಸಪ್ಪ ಪಾಮೇನಹಳ್ಳಿ ಹೃದಯಘಾತದಿಂದ ನಿಧನರಾಗಿದ್ದು, ಅವರ ಕುಟುಂಬಕ್ಕೆ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು 5 ಲಕ್ಷ ಧನ ಸಹಾಯ ಮಾಡಿದ್ದಾರೆ.

ದಿವಂಗತರ ಪಾರ್ಥಿವ ಶರೀರವನ್ನು ಇಂದು ಗ್ರಾಮಕ್ಕೆ ತಂದು ಅಂತ್ಯಕ್ರಿಯೆ ನಡೆಸುವ ಸಂದರ್ಭದಲ್ಲಿ ಆಗಮಿಸಿದ ಶಾಸಕ ಪ್ರಕಾಶ ಕೋಳಿವಾಡ, ಪಕ್ಷದ ಅಧ್ಯಕ್ಷರು ಘೋಷಿಸಿದ ಧನ ಸಹಾಯವನ್ನು ಕುಟುಂಬ ವರ್ಗಕ್ಕೆ ತಿಳಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಮಂಜನಗೌಡ ಪಾಟೀಲ, ಚಂದ್ರಪ್ಪ ಬೇಡರ, ಇಸ್ಮಾಯಿಲ್ ರಾಣೇಬೆನ್ನೂರು ಮತ್ತಿತರರಿದ್ದರು.

## ವಸತಿ ಶಾಲೆಗಳಲ್ಲಿ ಪ್ರಸಕ್ತ ಸಾಲಿಗೆ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜ.22 - ಪ್ರಸಕ್ತ ಸಾಲಿಗೆ ಜಿಲ್ಲೆಯ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಡಾ.ಬಿ.ಆರ್.ಅಂಬೇಡ್ಕರ್, ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಗಳಲ್ಲಿ 6 ನೇ ತರಗತಿ ಪ್ರವೇಶ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 25 ಕೊನೆ ದಿನವಾಗಿರುತ್ತದೆ. ಮಾಹಿತಿಗಾಗಿ ಸಹಾಯವಾಣಿ ಸಂ: 080-23460460 ನ್ನು ಸಂಪರ್ಕಿಸಬಹುದು.

**40ನೇ ವರ್ಷದ ಪುಣ್ಯಸ್ಮರಣೆ**



**ಶ್ರೀ ಅಂದನೂರು ಕೊಟ್ರಪ್ಪ**
ಪತ್ರಕರ್ತರು ಹಾಗು ಪತ್ರಿಕಾ ಪ್ರತಿನಿಧಿಗಳು
15.05.1926 - 22.01.1985

ನಿಮ್ಮ ಸ್ಮರಣೆ, ನಮ್ಮ ಉಸಿರು,
ನಿಮ್ಮ ಸರಳತೆ, ನಮ್ಮ ಧ್ಯೇಯ
ನಿಮ್ಮ ನಿಷ್ಠೆಯ ಕಾಯಕ, ಸ್ಫೂರ್ತಿದಾಯಕ
ನಿಮ್ಮ ಆದರ್ಶ ನಮಗೆ ದಾರಿದೀಪ

ಸದಾ ನಿಮ್ಮ ಸ್ಮರಣೆಯಲ್ಲಿರುವ :-
ಅಂದನೂರು ರಾಜೇಶ್, ಪ್ರೀತಿ ರಾಜೇಶ್
ಅಕ್ಷಿತ್. ಆರ್. ಅಂದನೂರು

**ಅಂದನೂರು ಚಿಟ್ಸ್ (ರಿ)**
ಚರ್ಚ್ ರಸ್ತೆ, ಪಿ. ಜೆ. ಬಡಾವಣೆ, ದಾವಣಗೆರೆ.
98804 88688, 99867 52539, 82969 49473

**ಸುಭದ್ರ ಹೂಡಿಕೆ, ಅನುಕೂಲಕರ ನಿಧಿ**

# ಜನ್ಮಸಿದ್ಧ ಪೌರತ್ವಕ್ಕೆ ತಡೆ: ಟ್ರಂಪ್ ಆದೇಶ ಪ್ರಶ್ನಿಸಿದ 22 ರಾಜ್ಯಗಳು



ವಾಷಿಂಗ್ಟನ್, ಜ. 22- ಜನ್ಮಸಿದ್ಧವಾಗಿ ನೀಡಲಾಗುತ್ತಿದ್ದ ಪೌರತ್ವ ತಡೆಯಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಾರ್ಯಕಾರಿ ಆದೇಶ ಹೊರಡಿಸಿರುವುದಕ್ಕೆ ತೀವ್ರ ವಿರೋಧ ವ್ಯಕ್ತವಾಗುತ್ತಿದೆ.

ಚುನಾವಣಾ ಸಂದರ್ಭದಲ್ಲಿ ಟ್ರಂಪ್ ಅವರು ಈ ಕ್ರಮ ತೆಗೆದುಕೊಳ್ಳುವ ಬಗ್ಗೆ ಪ್ರಮುಖವಾಗಿ ತಿಳಿಸಿದ್ದರು. ಆದರೆ, ಅವರು ಅಧಿಕಾರ ವಹಿಸಿಕೊಂಡ ನಂತರ ಹೊರಡಿಸಿರುವ ಆದೇಶ ದೀರ್ಘ ಕಾನೂನು ಹೋರಾಟದಲ್ಲಿ ಗೆಲುವು ಸಾಧಿಸಬೇಕಿದೆ.

ಜನ್ಮಸಿದ್ಧವಾಗಿ ನೀಡಲಾಗುತ್ತಿದ್ದ ಪೌರತ್ವವನ್ನು ತಡೆಯಲು ಹಾಗೂ ವಲಸೆ ನೀತಿಗಳಲ್ಲಿ ಬದಲಾವಣೆ ತರಲು ಟ್ರಂಪ್ ಹೊರಡಿಸಿರುವ ಆದೇಶಗಳು ಕಾನೂನು ಹೋರಾಟದಲ್ಲಿ ಗೆಲ್ಲುವುದು ಅನುಮಾನವಾಗಿದೆ.

ಜನ್ಮಸಿದ್ಧವಾಗಿ ಪೌರತ್ವ ನೀಡುವ ವಿಷಯವು ಕಾನೂನು ದೃಷ್ಟಿಯಲ್ಲಿ ಈಗಾಗಲೇ ಇತ್ಯರ್ಥವಾಗಿದೆ. ಅಧ್ಯಕ್ಷರು ಅಪಾರ ಅಧಿಕಾರ ಹೊಂದಿದ್ದಾರೆ. ಆದರೂ ಅವರು ಮಹಾರಾಜರಲ್ಲ ಎಂದು ಡೆಮಾಕ್ರಾಟ್ ಪರ ವಕೀಲರು ಹಾಗೂ ವಲಸೆ ಹಕ್ಕು ಪ್ರತಿಪಾದಕರು ಹೇಳಿದ್ದಾರೆ. ಅಧ್ಯಕ್ಷರು ಒಂದೇ ಆದೇಶದ ಮೂಲಕ ಸಂವಿಧಾನಕ್ಕೆ 14ನೇ ತಿದ್ದುಪಡಿ ಮೂಲಕ ನೀಡಲಾಗಿದ್ದ ಜನ್ಮಸಿದ್ಧ ಪೌರತ್ವದ ಅಧಿಕಾರವನ್ನು ರದ್ದುಗೊಳಿಸಲಾಗದು ಎಂದು ನ್ಯೂ ಜರ್ಸಿ ಅಟಾರ್ನಿ ಜನರಲ್ ಮ್ಯಾಟ್ ಪ್ಲಾಟ್ಕಿನ್ ಹೇಳಿದ್ದಾರೆ.

ನ್ಯಾಯಾಲಯದಲ್ಲಿ ರಾಜ್ಯಗಳನ್ನು ಎದುರಿಸಲು ಸಿದ್ಧ ಎಂದು ಶ್ವೇತ ಭವನ ತಿಳಿಸಿದ್ದು, ಈ ಆದೇಶ ಕುರಿತ ಆಕ್ಷೇಪಗಳು ಎಡಪಂಥೀಯರ ವಿರೋಧದ ವಿಸ್ತೃತ ಭಾಗವಲ್ಲದೆ ಬೇರೇನೂ ಅಲ್ಲ ಎಂದು ಹೇಳಿದೆ.

ತೀವ್ರ ಎಡಪಂಥೀಯರು ಅಲೆಗೆ ವಿರುದ್ಧವಾಗಿ ಈಜಲು ಇಷ್ಟಪಡಬಹುದು ಹಾಗೂ ಜನಾದೇಶವನ್ನು ವಿರೋಧಿಸಬಹುದು. ಇಲ್ಲವೇ ಅವರು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಜೊತೆಗೂಡಿ ಕಾರ್ಯ ನಿರ್ವಹಿಸಬಹುದು ಎಂದು ಶ್ವೇತ ಭವನದ ಪತ್ರಿಕಾ ಕಾರ್ಯದರ್ಶಿ ಹ್ಯಾರಿಸನ್ ಫೀಲ್ಡ್ಸ್ ಹೇಳಿದ್ದಾರೆ.

ಪೌರತ್ವಕ್ಕೆ ಸಂಬಂಧಿಸಿದಂತೆ ಅಮೆರಿಕದ ನಾಗರಿಕರು ಜನ್ಮಸಿದ್ಧ ಅಧಿಕಾರ ಹೊಂದಿದ್ದಾರೆ. ಈ ಕುರಿತ ಕಾನೂನು ಹೋರಾಟ ತಮಗೆ ವೈಯಕ್ತಿಕವಾಗಿದೆ ಎಂದು ಕೆನ್ಯಾಟಿಕಟ್ ಅಟಾರ್ನಿ ಜನರಲ್ ವಿಲಿಯಂ ಟಾಂಗ್ ಹೇಳಿದ್ದಾರೆ. ಟಾಂಗ್ ಅವರು ಅಟಾರ್ನಿ ಜನರಲ್ ಆಗಿ ಆಯ್ಕೆಯಾಗಿರುವ ಮೊದಲ ಚೀನಾದ ಅಮೆರಿಕನ್ ಆಗಿದ್ದಾರೆ.

ಅಮೆರಿಕದಲ್ಲಿ ಯಾರಾದರೂ ಜನಿಸಿದ್ದರೆ ಅವರು ಅಮೆರಿಕದ ಪ್ರಜೆ ಎಂದು ಸಂವಿಧಾನದ 14ನೇ ತಿದ್ದುಪಡಿಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಇದರಲ್ಲಿ ಯಾವುದೇ ಗೊಂದಲವಿಲ್ಲ ಎಂದವರು ಹೇಳುತ್ತಾರೆ.

ಈ ವಿಷಯದಲ್ಲಿ ಯಾವುದೇ ಚರ್ಚೆಯ ಪ್ರಶ್ನೆಗೆ ಇಲ್ಲ ಟ್ರಂಪ್ ತೆಗೆದುಕೊಂಡ ತಪ್ಪು ನಿರ್ಧಾರದ ಕಾರಣದಿಂದಾಗಿ ನನ್ನಂತಹ ಅಮೆರಿಕದ ಕುಟುಂಬಗಳ ಮೇಲೆ ಗಂಭೀರ ಪರಿಣಾಮವಾಗಲು ಬಿಡಲಾಗದು ಎಂದವರು ಹೇಳಿದ್ದಾರೆ.

ಅಮೆರಿಕಗೆ ಯಾವುದೇ ರೀತಿಯಲ್ಲಿ ವಲಸೆ ಬಂದವರಿಗೆ ಅಮೆರಿಕದಲ್ಲಿ ಮಗು ಜನಿಸಿದರೆ ಆ ಮಗು ಅಮೆರಿಕದ ಪೌರತ್ವ ಪಡೆಯುತ್ತದೆ. ಅವರು ಅಮೆರಿಕದ ನಾಗರಿಕರೇ ಆಗಿರಬಹುದು ಇಲ್ಲವೇ ಪ್ರವಾಸಿಗರೇ ಆಗಿರಬಹುದು ಇಲ್ಲವೇ ಬೇರೆ ಯಾವುದೇ ಮಾರ್ಗದ ಮೂಲಕ ಬಂದಿರಬಹುದು ಇಲ್ಲವೇ ದೇಶಕ್ಕೆ ಅಕ್ರಮವಾಗಿ ಬಂದಿದ್ದರೂ ಅವರ ಮಕ್ಕಳು ಅಮೆರಿಕದಲ್ಲಿ ಜನಿಸಿದರೆ ಅಲ್ಲಿನ ಪೌರತ್ವ ಪಡೆಯುತ್ತಾರೆ. ಸಂವಿಧಾನದ 14ನೇ ತಿದ್ದುಪಡಿಯ ಮೂಲಕ ಈ ಹಕ್ಕು ನೀಡಲಾಗಿ ನೀಡ ಲಾಗಿದೆ ಎಂದು ಇದರ ಪ್ರತಿಪಾದಕರು ಹೇಳುತ್ತಿದ್ದಾರೆ.

ಆದರೆ ಈ ತಿದ್ದುಪಡಿಯ ಮರು ವ್ಯಾಖ್ಯಾನದ ಮೂಲಕ ಜನ್ಮಸಿದ್ಧ ಪೌರತ್ವ ಕಠಿಣಗೊಳಿಸಲು ಟ್ರಂಪ್ ಹಾಗೂ ಅವರ ಬೆಂಬಲಿಗರು ಬಯಸಿದ್ದಾರೆ. ಕೇವಲ ಅಮೆರಿಕ ಅಷ್ಟೇ ಅಲ್ಲದೆ ಸುಮಾರು 30 ದೇಶಗಳು ಜನ್ಮಸಿದ್ಧ ಪೌರತ್ವ ಹಕ್ಕು ನೀಡುತ್ತಿವೆ.

ಅಮೆರಿಕದ ಅಂತರ್ಯುದ್ಧದ ನಂತರ 1868ರಲ್ಲಿ ಸಂವಿಧಾನಕ್ಕೆ 14ನೇ ತಿದ್ದುಪಡಿ ತಂದು ಜನ್ಮಸಿದ್ಧ ಪೌರತ್ವದ ಅಧಿಕಾರ ನೀಡಲಾಗಿತ್ತು. ಆದರೆ ನಾಗರಿಕರಲ್ಲದವರಿಗೆ ಜನಿಸಿದ ಮಕ್ಕಳಿಗೆ ಪೌರತ್ವ ನೀಡಲಾಗದು ಎಂದು ಟ್ರಂಪ್ ಆದೇಶದಲ್ಲಿ ತಿಳಿಸಲಾಗಿದೆ.

ಟ್ರಂಪ್ ಆದೇಶ ಫೆಬ್ರವರಿ 19 ರಿಂದ ಜಾರಿಗೆ ಬರಲಿದೆ. ಆದರೆ ಈ ಆದೇಶ ಪೂರ್ವಾನ್ವಯವಾಗಲಿದೆಯೇ ಎಂಬುದು ಸ್ಪಷ್ಟವಾಗಿಲ್ಲ.

ಟ್ರಂಪ್ ಆದೇಶದ ವಿರುದ್ಧ ಕಾನೂನು ಹೋರಾಟ ನಡೆಸಲು 22 ರಾಜ್ಯಗಳು ಕ್ರಮ ತೆಗೆದುಕೊಂಡಿವೆ. ಇದಲ್ಲದೆ ಕೊಲಂಬಿಯ ಹಾಗೂ ಸ್ಯಾನ್ ಫ್ರಾನ್ಸಿಸ್ಕೋ ಜಿಲ್ಲೆಗಳು ಹಾಗೂ ವಲಸೆ ಹಕ್ಕುಗಳ ಗುಂಪುಗಳೂ ಸಹ ಟ್ರಂಪ್ ಆದೇಶದ ವಿರುದ್ಧ ಕಾನೂನು ಹೋರಾಟ ನಡೆಸಲು ಮುಂದಾಗಿದೆ.

# ಕುಂಭಮೇಳದ ಪಾಂಟೂನ್‌ಗಳಿಗೆ 2500 ವರ್ಷಗಳ ಪರ್ಶಿಯನ್ ತಂತ್ರಜ್ಞಾನದ ಸ್ಫೂರ್ತಿ



ಮಹಾಕುಂಭ ನಗರ, ಜ. 22- 2500 ವರ್ಷಗಳ ಹಳೆಯ ಪರ್ಶಿಯನ್ ತಂತ್ರಜ್ಞಾನದಿಂದ ಸ್ಫೂರ್ತಿ ಪಡೆದ ಪಾಂಟೂನ್ ಸೇತುವೆಗಳು ಸಂಗಮ ಹಾಗೂ 4 ಸಾವಿರ ಹೆಕ್ಟೇರ್ ಪ್ರದೇಶದಲ್ಲಿರುವ ಅಖಾಡಗಳಿಗೆ ಸಂಪರ್ಕ ಮಾರ್ಗವಾಗಿವೆ. ಇವು ಮಹಾ ಕುಂಭದಲ್ಲಿರುವ 25 ವಲಯಗಳನ್ನು ಜೋಡಿಸುತ್ತಿವೆ.

ಇವುಗಳನ್ನು ನಿರ್ಮಿಸಲು ಸಾವಿರಕ್ಕೂ ಹೆಚ್ಚು ಜನರು ಪ್ರತಿದಿನ 10 ಗಂಟೆಗಳಂತೆ ಒಂದು ವರ್ಷ ಕಾಲ ಶ್ರಮಿಸಿದ್ದಾರೆ. ಇಲ್ಲಿ 30 ಪಾಂಟೂನ್ ಸೇತುವೆಗಳನ್ನು ನಿರ್ಮಿಸಲಾಗಿದೆ. ಈ ರೀತಿಯ ಯೋಜನೆ ಇದುವರೆಗಿನ ಅತ್ಯಂತ ಬೃಹತ್ ಸ್ವರೂಪದ್ದಾಗಿದೆ.

ಸುಮಾರು ಒಂದು ಟನ್ ತೂಕ ಹೊಂದಿರುವ 2,200 ಕಪ್ಪು ತೇಲುವ ಕಬ್ಬಿಣದ ಕೊಳವೆಗಳನ್ನು ಪಾಂಟೂನ್ ಸೇತುವೆಗಳ ನಿರ್ಮಾಣಕ್ಕೆ ಬಳಸಲಾಗಿದೆ. ಇದರ ಮೇಲೆ ವಾಹನಗಳು, ಯಾತ್ರಿಗಳು, ಸಾಧುಗಳು ಹಾಗೂ ಕಾರ್ಮಿಕರು ಸಂಚಾರ ನಡೆಸುತ್ತಿದ್ದಾರೆ.

ಪ್ರತಿಯೊಂದು ಸೇತುವೆಯೂ ತೇಲುವ ಕೌತುಕವಾಗಿದೆ. ಪ್ರತಿ ಸೇತುವೆ ಐದು ಟನ್ ತೂಕ ಹೊರಬಲ್ಲದು. ಈ ಸೇತುವೆಗಳು ಸಂಗಮ ಹಾಗೂ ಅಖಾಡ ಪ್ರದೇಶಕ್ಕೆ ಪ್ರಮುಖ ಸಂಪರ್ಕ ಕೊಂಡಿ ಎಂದು ಮಹಾ ಕುಂಭ ನಗರ ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ವಿವೇಕ್ ಚತುರ್ವೇದಿ ತಿಳಿಸಿದ್ದಾರೆ.

ಈ ಸೇತುವೆಗಳು ಮಹಾ ಕುಂಭದ ಪ್ರಮುಖ ಭಾಗವಾಗಿವೆ. ಬೃಹತ್ ಪ್ರಮಾಣದಲ್ಲಿ ಬರುವ ಜನರನ್ನು ನಿರ್ವಹಿಸಲು ಇದು ಕಡಿಮೆ ವೆಚ್ಚದ ಪರಿಹಾರವಾಗಿದೆ. ಆದರೆ, ಇವುಗಳ ಮೇಲೆ ನಿರಂತರ ನಿಗಾ ವಹಿಸಬೇಕಿದೆ. ಸುಲಲಿತ ಚಾಲನೆ ಹಾಗೂ ಸುರಕ್ಷತೆಗಾಗಿ ನಿರಂತರ ನಿಗಾ ಅಗತ್ಯವಾಗಿದೆ. ಪ್ರತಿ ಸೇತುವೆಯ ಮೇಲೆ ನಾವು ಸಿಸಿಟಿವಿ ಕ್ಯಾಮೆರಾ ಅಳವಡಿಸಿದ್ದೇವೆ. ಇವುಗಳಿಂದ ದೊರೆಯುವ ದೃಶ್ಯಗಳ ಮೇಲೆ ಕಣ್ಣಿರಿಸಲಾಗಿದೆ ಎಂದು ಚತುರ್ವೇದಿ ತಿಳಿಸಿದ್ದಾರೆ.

ಹಲವು ಪರೀಕ್ಷೆಗಳ ನಂತರವೇ ಸೇತುವೆಗಳಿಗೆ ಅನುಮತಿ ನೀಡಲಾಗಿದೆ. ಬೃಹತ್ ಸಂಖ್ಯೆಯ ಜನರು ಸೇತುವೆಯ ಮೇಲಿದ್ದರೂ ಅವುಗಳು ಕಾರ್ಯನಿರ್ವಹಿಸುವ ರೀತಿಯಲ್ಲಿ ನಿರ್ಮಾಣ ಮಾಡಲಾಗಿದೆ ಎಂದವರು ಹೇಳಿದ್ದಾರೆ.

ಕ್ರಿಸ್ತಪೂರ್ವ 480ನೇ ಇಸವಿಯಲ್ಲಿ ಪರ್ಶಿಯನ್ ದೊರೆ ಮೊದಲನೇ ಕ್ಸೆರ್‌ಕ್ಸೆಸ್ ಪಾಂಟೂನ್ ಸೇತುವೆಗಳನ್ನು ಮೊದಲ ಬಾರಿ ಬಳಸಿದ್ದರು. 11ನೇ ಶತಮಾನದಲ್ಲಿ ಚೀನಾದ ಜೌ ರಾಜವಂಶಸ್ಥರು ಈ ರೀತಿಯ ಸೇತುವೆಗಳನ್ನು ಬಳಸಿದ್ದರು.

ಭಾರತದಲ್ಲಿ 1874ರಲ್ಲಿ ಹೌರಾ ಮತ್ತು ಕೊಲ್ಕತ್ತಾ ನಡುವಿನ ಹೂಗ್ಲಿ ನದಿಯಲ್ಲಿ ಮೊದಲ ಬಾರಿಗೆ ಈ ರೀತಿಯ ಸೇತುವೆ ನಿರ್ಮಿಸಲಾಗಿತ್ತು. ಬ್ರಿಟಿಷ್ ಇಂಜಿನಿಯರ್ ಸರ್ ಬ್ರಾಡ್ಫೋರ್ಡ್ ಲೆಜ್ಲೀ ಅವರು ಕಟ್ಟಿಗೆಯ ಪಾಂಟೂನ್ ಸೇತುವೆ ನಿರ್ಮಿಸಿದ್ದರು.

ಕುಂಭಮೇಳದಲ್ಲಿ ನಿರ್ಮಿಸಲಾಗಿರುವ ಸೇತುವೆಗಳ ಕುರಿತು ಮಾತನಾಡಿರುವ ಇಂಜಿನಿಯರ್ ಅಲೋಕ್ ಕುಮಾರ್, ಕಬ್ಬಿಣದ ತೇಲುವ ಕೊಳವೆಗಳನ್ನು ಬಳಸಿಕೊಂಡು ಈ ಸೇತುವೆಗಳನ್ನು ನಿರ್ಮಿಸಲಾಗಿದೆ. ಇವುಗಳು ಸಾರ್ವಜನಿಕ ಸಂಚಾರಕ್ಕಷ್ಟೇ ಅಲ್ಲದೆ 13 ಅಖಾಡಾಗಳ ಭವ್ಯ ಪ್ರವೇಶ, ರಥಗಳು, ಆನೆಗಳು, ಕುದುರೆಗಳು ಹಾಗೂ ಸಾವಿರಕ್ಕೂ ಹೆಚ್ಚು ವಾಹನಗಳು ಸಂಚರಿಸಲು ಅನುಕೂಲವಾಗುವಂತೆ ನಿರ್ಮಿಸಲಾಗಿದೆ. ಅಮೃತ ಸ್ನಾನದ ವೇಳೆ ಈ ಸೇತುವೆಗಳು ಪ್ರಮುಖವಾಗಿ ಬಳಕೆಗೆ ಒಳಗಾಗುತ್ತವೆ ಎಂದಿದ್ದಾರೆ.

ಮಹಾ ಕುಂಭಮೇಳಕ್ಕಾಗಿ ಇದೇ ಮೊದಲ ಬಾರಿಗೆ 30 ಸೇತುವೆಗಳನ್ನು ನಿರ್ಮಿಸಲಾಗಿದೆ. ಕುಂಭಮೇಳ ಮುಗಿದ ನಂತರ ಈ ಸೇತುವೆಗಳನ್ನು ತೆರವುಗೊಳಿಸಲಾಗುವುದು. ಮುಂದಿನ ಕುಂಭಮೇಳದವರೆಗೆ ಇವುಗಳನ್ನು ಕಾಯ್ದಿರಿಸಲಾಗುವುದು ಎಂದವರು ತಿಳಿಸಿದ್ದಾರೆ.

ಕ್ರೇನ್‌ಗಳ ಮೂಲಕ ಕಬ್ಬಿಣದ ಕೊಳವೆಗಳನ್ನು ನೀರಿನಲ್ಲಿ ಇಳಿಸಲಾಗುತ್ತದೆ ಇವುಗಳ ಮೇಲೆ ಗರ್ಡನ್ ಬೀಮ್ ಗಳನ್ನು ಅಳವಡಿಸಿ ನಟ್ ಹಾಗೂ ಬೋಲ್ಟ್ ಮೂಲಕ ಬಿಗಿಪಡಿಸಲಾಗುತ್ತದೆ. ಸರಿಯಾಗಿ ಕೂರುವಂತೆ ಮಾಡಲು ಹೈಡ್ರಾಲಿಕ್ ಯಂತ್ರಗಳನ್ನು ಬಳಸಲಾಗುತ್ತದೆ. ಕಟ್ಟಿಗೆ, ಮರಳುಯುಕ್ತ ಮಣ್ಣು ಇತ್ಯಾದಿಗಳನ್ನು ಬಳಸಿ ಸೇತುವೆಗಳನ್ನು ಭದ್ರಗೊಳಿಸಲಾಗುತ್ತದೆ. ಪ್ರತಿಯೊಂದು ಪಾಂಟೂನ್ ಸುಮಾರು ಐದು ಟನ್ ತೂಕದ್ದಾಗಿದೆ. ಆದರೂ ಇದು ತೇಲುತ್ತದೆ. ಇದು ಆರ್ಕಿಮಿಡಿಸ್ ತತ್ವವನ್ನು ಅವಲಂಬಿಸಿದೆ. ಈ ಸೇತುವೆ ಐದು ಟನ್ ತೂಕವನ್ನು ಹೊರುವ ಸಾಮರ್ಥ್ಯ ಹೊಂದಿದೆ. ತೂಕ ಹೆಚ್ಚಾದಲ್ಲಿ ಸೇತುವೆಗೆ ಹಾನಿಯಾಗುವ ಇಲ್ಲವೇ ಮುಳುಗುವ ಅಪಾಯವಿದೆ. ಹೀಗಾಗಿ ಗುಂಪು ನಿಯಂತ್ರಣ ಪ್ರಾಮುಖ್ಯತೆ ಪಡೆದಿದೆ ಎಂದು ಕುಮಾರ್ ಹೇಳಿದ್ದಾರೆ.

ಈ ಸೇತುವೆಗಳ ನಿರ್ಮಾಣಕ್ಕೆ 17.31 ಕೋಟಿ ರೂ. ವೆಚ್ಚವಾಗಿದೆ ಎಂದು ಉತ್ತರ ಪ್ರದೇಶ ಸರ್ಕಾರದ ಅಧಿಕಾರಿಗಳು ತಿಳಿಸಿದ್ದಾರೆ.

## ಅಪಘಾತದಲ್ಲಿ ಗಾಯಗೊಂಡ ವಿಜಯ್‌ಗೆ ಧರ್ಮಸ್ಥಳ ಯೋಜನೆಯಿಂದ ಪರಿಹಾರ




ಮಲೇಬೆನ್ನೂರು, ಜ, 22 - ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ನೀಡುವ ಸಹಾಯಧನ ಕಾರ್ಯಕ್ರಮದಡಿಯಲ್ಲಿ ಹೊಳೆಸಿರಿಗೆರೆ ವಲಯದ ಎಳೆಹೊಳೆ ಗ್ರಾಮದಲ್ಲಿ ಇತ್ತೀಚೆಗೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಗಾಯಗೊಂಡು ಬಲಗಾಲಿಗೆ ತೀವ್ರ ಹಾನಿಯಾಗಿ ನಡೆಯಲು ಸಾಧ್ಯವಾಗದ ಪರಿಸ್ಥಿತಿಯಲ್ಲಿರುವ ವಿಜಯ್ ಅವರಿಗೆ 10 ಸಾವಿರ ರೂ.ಗಳ ಸಹಾಯಧನದ ಚೆಕ್ಕನ್ನು ಮಲೇಬೆನ್ನೂರು ಯೋಜನಾಧಿಕಾರಿ ವಸಂತ ದೇವಾಡಿಗ ಅವರು ಮಂಗಳವಾರ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಚಿತ್ರದುರ್ಗ ಪ್ರಾದೇಶಿಕ ಕಚೇರಿಯ ಜನಜಾಗೃತಿ ಯೋಜನಾಧಿಕಾರಿ ನಾಗರಾಜ್ ಕುಲಾಲ್ ಮತ್ತು ವಲಯ ಮೇಲ್ವಿಚಾರಕ ರಂಗಸ್ವಾಮಿ ಹಾಜರಿದ್ದರು.

## ಹರಿಹರದಲ್ಲಿ ಇಂದು ನಡೆಯಬೇಕಿದ್ದ ದೂಡಾ ಜನ ಸಂಪರ್ಕ ಸಭೆ ಮುಂದೂಡಿಕೆ

ದಾವಣಗೆರೆ, ಜ. 22 - ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಇಂದು (ಜ. 23) ಹರಿಹರದಲ್ಲಿ ನಡೆಬೇಕಿದ್ದ ಜನ ಸಂಪರ್ಕ ಸಭೆಯನ್ನು ಕಾರಣಾಂತರದಿಂದ ಮುಂದೂಡಲಾಗಿದೆ.

ಸಾರ್ವಜನಿಕರು ಸಹಕರಿಸುವಂತೆ ದಾವಣಗೆರೆ ಹರಿಹರ ನಗರಾಭಿವೃದ್ಧಿ ಆಯುಕ್ತ ಹುಲ್ಲುಮನೆ ತಿಮ್ಮಣ್ಣ ಕೋರಿದ್ದಾರೆ.

## ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ



ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 12 ರವರೆಗೆ ಹಾಗೂ ಹರಿಹರ ಸಮೀಪದ ಕೋಡಿಯಾಲ - ಹೊಸಪೇಟೆಯ ಪುಣ್ಯಕೋಟಿ ಮಠದಲ್ಲಿ ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸ ಬಹುದು. ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಇಂ. ಬಿ.ಎಸ್. ವೀರೇಶ್ (88676 - 91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಹರಿಹರ ಎಂ.ಹೆಚ್. ಶಿವಯೋಗೀಶ್ವರ ಸ್ವಾಮಿ (94483 39424) ಅವರನ್ನು ಸಂಪರ್ಕಿಸಬಹುದು.

# ಅಧಿಕಾರ ಪ್ರಯೋಗಕ್ಕೆ ಹೊಸ ಮಾರ್ಗ ಹುಡುಕುತ್ತಿರುವ ಟ್ರಂಪ್

ವಾಷಿಂಗ್ಟನ್, ಜ. 22- ಅಮೆರಿಕದ ಅಧ್ಯಕ್ಷರಾಗಿ ಎರಡನೇ ಅವಧಿಗೆ ಅಧಿಕಾರ ವಹಿಸಿಕೊಂಡಿರುವ ಡೊನಾಲ್ಡ್ ಟ್ರಂಪ್ ತಮ್ಮ ಅಧಿಕಾರ ಬಳಸಲು ಸಾಂಪ್ರದಾಯಿಕ ಮಿತಿಗಳನ್ನು ಮಿರುತ್ತಿದ್ದಾರೆ. ಇದರಿಂದಾಗಿ ರಾಜಕೀಯ ವಲಯದಲ್ಲಿ ಹೊಸ ಚರ್ಚೆಗಳು ಆರಂಭವಾಗಿವೆ.

ಅಧಿಕಾರ ವಹಿಸಿಕೊಂಡ ಮೊದಲ ದಿನವೇ ಅವರು ಅಭೂತಪೂರ್ವ ಕಾರ್ಯಕಾರಿ ಆದೇಶಗಳನ್ನು ಹೊರಡಿಸಿದ್ದಾರೆ. ವಲಸೆ ನಿಯಂತ್ರಣದಿಂದ ಹಿಡಿದು ಚೀನಾದ ಟಿಕ್ ಟಾಕ್ ಆಪ್ ಕಾರ್ಯನಿರ್ವಹಣೆ ಬಗ್ಗೆ ಟ್ರಂಪ್ ಆದೇಶಗಳನ್ನು ಹೊರಡಿಸಿದ್ದಾರೆ.

ಈ ಆದೇಶಗಳ ಪ್ರಶ್ನಿಸಲು ಡೆಮಾಕ್ರಾಟ್ ಹಾಗೂ ನಾಗರಿಕ ಹಕ್ಕುಗಳ ಸಂಘಟನೆಗಳು ಸಿದ್ಧತೆ ನಡೆಸಿವೆ. ಆದರೆ ದೀರ್ಘಾವಧಿಯ ಈ ಕಾನೂನು ಹೋರಾಟಗಳು ಟ್ರಂಪ್ ಮೇಲೆ ಎಷ್ಟರಮಟ್ಟಿಗೆ ಪರಿಣಾಮ ಬೀರಲಿವೆ ಎಂಬುದನ್ನು ಕಾದು ನೋಡಬೇಕಿದೆ.

ಸರ್ಕಾರದ ವಿವಿಧ ಶಾಖೆಗಳ ನಡುವೆ ಇರುವ ನಿಯಂತ್ರಣ ಹಾಗೂ ಸಮತೋಲನಗಳನ್ನು ಪ್ರಶ್ನಿಸುವ ರೀತಿಯಲ್ಲಿ ಟ್ರಂಪ್ ಮುನ್ನಡೆಯುವ ಸಾಧ್ಯತೆ ಇದೆ.

ಟ್ರಂಪ್ ತಮ್ಮ ಮಿತಿಯನ್ನು ಗರಿಷ್ಠ ಮಟ್ಟಕ್ಕೆ ಬಳಸಿಕೊಳ್ಳಲಿದ್ದಾರೆ ಎಂದು ರಿಪಬ್ಲಿಕನ್ ಸೆನೆಟರ್ ಟಾಮಿ ಟ್ಯೂಬರ್‌ವಿಲ್ಲೆ ತಿಳಿಸಿದ್ದಾರೆ.



ಟ್ರಂಪ್ ತಮ್ಮ ಮೊದಲ ಅವಧಿಯಲ್ಲೂ ಸಹ ಇದೇ ಮಾರ್ಗ ಹಿಡಿದಿದ್ದರು. ಆಗ ಅವರಿಗೆ ಮಿಶ್ರ ಫಲ ದೊರೆತಿತ್ತು.

ಆದರೆ, ಈ ಬಾರಿ ವಾತಾವರಣ ಟ್ರಂಪ್‌ಗೆ ಹೆಚ್ಚು ಅನುಕೂಲಕರವಾಗಿದೆ. ಅಮೆರಿಕದ ಸುಪ್ರೀಂ ಕೋರ್ಟ್‌ನಲ್ಲಿ ಕನ್ಸರ್ವೇಟಿವ್ ನ್ಯಾಯಮೂರ್ತಿಗಳು ಹೆಚ್ಚಾಗಿದ್ದಾರೆ. ಅಧ್ಯಕ್ಷರು ತಮ್ಮ ಅಧಿಕಾರವಧಿಯಲ್ಲಿ ತೆಗೆದುಕೊಂಡ ಯಾವುದೇ ಕ್ರಮಗಳ ಬಗ್ಗೆ ದೋಷಾರೋಪ ಮಾಡಲಾಗದು ಎಂದು ಇತ್ತೀಚೆಗೆ ತೀರ್ಪು ನೀಡಲಾಗಿತ್ತು. ಶಾಸನ ಸಭೆಗಳಲ್ಲೂ ಸಹ ರಿಪಬ್ಲಿಕನ್ನರು ಪೂರ್ಣ ಹಿಡಿತ ಹೊಂದಿದ್ದಾರೆ.

2021 ರಲ್ಲಿ ಅಮೆರಿಕದ ಕ್ಯಾಪಿಟಲ್ ಮೇಲೆ ನಡೆದ ದಾಳಿ ಪ್ರಕರಣದ ಬಹುತೇಕರಿಗೆ ಟ್ರಂಪ್ ಕ್ಷಮಾದಾನ ನೀಡಿದ್ದರು. ಅವರ ಈ ನಿರ್ಧಾರವನ್ನು ಯಾರೂ ಪ್ರಶ್ನಿಸಿಲ್ಲ. ಇದು ಟ್ರಂಪ್ ಪ್ರಾಬಲ್ಯವನ್ನು ತೋರಿಸುತ್ತಿದೆ.

ಕಳೆದ ಅಧ್ಯಕ್ಷ ಚುನಾವಣೆ ಸಂದರ್ಭದಲ್ಲಿ ಈ ಪರಿಸ್ಥಿತಿ ಬಗ್ಗೆ ಡೆಮಾಕ್ರಾಟ್‌ಗಳು ಪ್ರಸ್ತಾಪಿಸಿದ್ದರು. ಟ್ರಂಪ್‌ಗೆ ಅಧಿಕಾರ ನೀಡಿದಲ್ಲಿ ಅವರು ಸರ್ವಾಧಿಕಾರಿಯಾಗಬಹುದು ಎಂದು ಹೇಳಿದ್ದರು.

ಟ್ರಂಪ್ ಮೊದಲ ದಿನದಂದು ಹೊರಡಿಸಿರುವ ಕಾರ್ಯಕಾರಿ ಆದೇಶಗಳು ಅಭೂತಪೂರ್ವವಾಗಿವೆ. ಈ ಆದೇಶಗಳ ಸಂಖ್ಯೆಯೇ ಗಮನಾರ್ಹವಾಗಿದೆ ಎಂದು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಕಾನೂನು ಪ್ರಾಧ್ಯಾಪಕ ಜಾನ್ ಯೂ ಹೇಳಿದ್ದಾರೆ.

ಮುಂಬರುವ ಅಧ್ಯಕ್ಷರು ಇಂತಹ ಆದೇಶಗಳನ್ನು ಸುಲಭವಾಗಿ ಬದಲಿಸಬಹುದು. ಆದರೆ ಅಲ್ಲಿಯವರೆಗೂ ಈ ಆದೇಶಗಳು ಅಪಾರ ಪರಿಣಾಮ ಬೀರುತ್ತವೆ.

ಟಿಕ್ ಟಾಕ್ ಅಮೆರಿಕದ ಸುರಕ್ಷತೆಗೆ ಬೆದರಿಕೆಯಾಗಿದೆ ಎಂದು ಅಮೆರಿಕದ ಅಧಿಕಾರಿಗಳು ಈಗಾಗಲೇ ಹೇಳಿದ್ದಾರೆ. ಇಷ್ಟಾದರೂ ಟಿಕ್ ಟಾಕ್ ಮುಂದುವರೆಯಲು ಆದೇಶ ಹೊರಡಿಸಲಾಗಿದೆ. ಇಂತಹ ನಿರ್ಧಾರಗಳು ಕೋರ್ಟ್ ಎದುರು ನಿಲ್ಲುವುದು ಕಷ್ಟ ಎಂದು ಯೂ ಹೇಳಿದ್ದಾರೆ.

ಅಕ್ರಮ ವಲಸೆಯನ್ನು ತಡೆಯಲು ಟ್ರಂಪ್ ತೀವ್ರ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಅಕ್ರಮ ವಲಸೆಗೆ ಸಂಬಂಧಿಸಿದಂತೆ ಸೈನಿಕ ಪಡೆಗಳಿಗೆ ಹೆಚ್ಚು ಅಧಿಕಾರವಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ಜನ್ಮಸಿದ್ಧವಾಗಿ ದೊರೆಯುವ ಅಮೆರಿಕದ ಪೌರತ್ವವನ್ನು ತಡೆಯಲು ಟ್ರಂಪ್ ಹೊರಡಿಸಿರುವ ಕಾರ್ಯಕಾರಿ ಆದೇಶವನ್ನು ಈಗಾಗಲೇ ಎರಡು ಡಜನ್ ರಾಜ್ಯಗಳು ಕಾನೂನಾತ್ಮಕವಾಗಿ ಪ್ರಶ್ನಿಸಿವೆ.

ಟ್ರಂಪ್ ಹೊರಡಿಸಿರುವ ಕಾರ್ಯಕಾರಿ ಆದೇಶಗಳ ಪೈಕಿ ಅರ್ಧದಷ್ಟು ಯಶಸ್ವಿಯಾದರೂ ಸಹ ಮುಂದಿನ ಅಧ್ಯಕ್ಷರು ಇದೇ ದಾರಿ ಹಿಡಿಯಲಿದ್ದಾರೆ ಎಂದು ಯೂ ಹೇಳಿದ್ದಾರೆ.

ಅಮೆರಿಕದ ಹಿಂದಿನ ಅಧ್ಯಕ್ಷರೂ ಸಹ ಇದೇ ರೀತಿಯ ಕೆಲ ಕ್ರಮಗಳಿಗೆ ಮುಂದಾಗಿದ್ದರು. ಹಿಂದಿನ ಅಧ್ಯಕ್ಷ ಜೋ ಬಿಡೆನ್ ಅವರು ವಿದ್ಯಾರ್ಥಿಗಳ ಸಾಲವನ್ನು ರದ್ದುಗೊಳಿಸಿದರು. ಆದರೆ ಸುಪ್ರೀಂ ಕೋರ್ಟ್ ಈ ಕ್ರಮವನ್ನು ತಡೆದಿತ್ತು ಎಂದು ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಇತಿಹಾಸ ಉಪನ್ಯಾಸಕ ಜುಲಿಯನ್ ಜೆಲಿಜರ್ ಹೇಳಿದ್ದಾರೆ.

ಇಷ್ಟಾದರೂ ತಮ್ಮ ಕ್ರಮಗಳಿಗೆ ರಿಪಬ್ಲಿಕನ್ ಸದಸ್ಯರ ಬೆಂಬಲ ಪಡೆಯುವುದು ಟ್ರಂಪ್‌ಗೆ ಮುಖ್ಯವಾಗಿದೆ.

ಟ್ರಂಪ್ ಅವರ ಕೆಲ ಆದೇಶಗಳನ್ನು ಬೆಂಬಲಿಸುತ್ತೇನೆ. ಇನ್ನೂ ಕೆಲವು ಆದೇಶಗಳನ್ನು ಪ್ರಶ್ನಿಸುತ್ತೇನೆ ಎಂದು ರಿಪಬ್ಲಿಕನ್ ಸೆನೆಟರ್ ಸುಸಾನ್ ಕಾಲಿನ್ಸ್ ಹೇಳಿದ್ದಾರೆ.

# ರೈತರಿಗೆ ಆನ್‌ಲೈನ್ ತಂತ್ರಾಂಶದಲ್ಲಿ ಮಂಜೂರಾತಿ



**ಶಾಸಕ ಡಿ.ಜಿ. ಶಾಂತನಗೌಡ**

**ಹೊನ್ನಾಳಿ**

ಹೊನ್ನಾಳಿ,ಜ.22- ತಾಲ್ಲೂಕಿನ ಬೆನಕನ ಹಳ್ಳಿ ರೈತರಿಗೆ ಆನ್‌ಲೈನ್ ತಂತ್ರಾಂಶದಲ್ಲಿ ಮಂಜೂರಾತಿ ಆದೇಶ ನೀಡಲಾಗಿದೆ ಎಂದು ಬಗರ್ ಹುಕ್ಕುಂ ಸಮಿತಿ ತಾಲ್ಲೂಕು ಅಧ್ಯಕ್ಷರೂ ಆಗಿರುವ ಶಾಸಕ ಡಿ.ಜಿ.ಶಾಂತನಗೌಡರು ತಿಳಿಸಿದರು.

ತಾಲ್ಲೂಕು ಕಛೇರಿಯಲ್ಲಿ ನಡೆದ ಬಗರ್ ಹುಕ್ಕುಂ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಗರ್ ಹುಕುಂ ಜಮೀನಿನಲ್ಲಿ ಸಾಗುವಳಿ ಮಾಡುವ ತಾಲ್ಲೂಕಿನ ರೈತರ ಅರ್ಜಿಗಳು ಇತ್ಯರ್ಥವಾಗದೇ ನೆನೆಗುದಿಗೆ ಬಿದ್ದಿರುವ ಕಾರಣ ಮುಂದಿನ ಸಭೆಯಲ್ಲಿ ಸಂಬಂಧಪಟ್ಟ ಅರಣ್ಯ ಇಲಾಖೆ ಅಧಿಕಾರಿಗಳನ್ನು ಕರೆಸಿ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಾಗಿ ಶಾಸಕರು ತಿಳಿಸಿದರು.

ಬಲಮೂರಿ ಸ.ನಂ 58ರಲ್ಲಿ ಸಾಗುವಳಿ ಮಾಡುವ ರೈತರು ಎನ್.ಓ.ಸಿಗಾಗಿ ಹೋರಾಟ ನಡೆಸಿದ್ದು, ಹೊನ್ನಾಳಿ ಆರ್.ಎಫ್.ಓದಿಂದ ವರದಿ ಬಂದು ಮೂರು ತಿಂಗಳಲ್ಲೇ ಸಮಸ್ಯೆ ಇತ್ಯರ್ಥಪಡಿಸುವುದಾಗಿ ಡಿ.ಎಫ್. ಹೇಳಿದ್ದಾರೆ ಎಂದು ಬಲಮೂರಿ ಮದಕರಿ ಸಭೆಗೆ ತಂದ ವಿಚಾರವು ಹೆಚ್ಚು ಚರ್ಚೆಗೆ ಗ್ರಾಸವಾಯಿತು.

ಬಗರ್ ಹುಕ್ಕುಂ ಸಮಿತಿ ಸದಸ್ಯೆ ಪುಷ್ಪಾ ರವೀಶ್ ಮಾತನಾಡಿ, ಮಾಸಡಿ ಕೆರೆಯನ್ನು ಶೀಘ್ರವೇ ಹದ್ದುಬಸ್ತು ಮಾಡುವಂತೆ ಒತ್ತಾಯಿಸಿದರು.

ಸದಸ್ಯ ಕೊಡತಾಳ್ ರುದ್ರೇಶ್ ಮಾತನಾಡಿ ಕಂದಾಯ ಜಮೀನನ್ನು, ಅರಣ್ಯ ಇಲಾಖೆ ಸುಪರ್ದಿಗೆ ತೆಗೆದುಕೊಳ್ಳುತ್ತಾ ಹೋದರೆ ಮುಂದಿನ ದಿನಗಳಲ್ಲಿ ಅರ್ಹ ರೈತ ಫಲಾನುಭವಿಗಳಿಗೆ ಹೆಚ್ಚು ಅನ್ಯಾಯವಾಗುತ್ತದೆ ಎಂದರು.

ಸಭೆಯಲ್ಲಿ ಸಿಂಗಟಗೆರೆ, ದಿಡಗೂರು, ಕತ್ತಿಗೆ, ಬಲಮೂರಿ, ಕುಂದೂರು ಹಾಗು ಇನ್ನಿತರೆ ಗ್ರಾಮದ ರೈತರ 50 ಮತ್ತು 53 ಅರ್ಜಿಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು.

ಸಭೆಯಲ್ಲಿ ತಹಶೀಲ್ದಾರ್ ಪಟ್ಟರಾಜೇಗೌಡ, ಬಗರ್ ಹುಕ್ಕುಂ ಸಮಿತಿ ಸದಸ್ಯ ಸಣ್ಣಕ್ಕಿ ಬಸವನಗೌಡ, ನ್ಯಾಮತಿ ತಾಲೂಕು ಸದಸ್ಯ ವಾಜೀದ್, ಸರ್ವೇ ಇಲಾಖೆಯ ಎ.ಡಿ ಹಂಸ, ಅರಣ್ಯಾಧಿಕಾರಿ ಮೈಲಾರ ಸ್ವಾಮಿ, ಆರ್.ಎಫ್ ಕಿಶೋರ್ ಕುಮಾರ್ ಮತ್ತಿತರರು ಇದ್ದರು.

## ಟ್ರಂಪ್ ಸೇಡು ತಡೆಗಾಗಿ ಕ್ಷಮಾದಾನ

ವಾಷಿಂಗ್ಟನ್, ಜ. 22- ಕ್ಯಾಪಿಟಲ್ ಮೇಲೆ ಜನವರಿ 6ರಂದು ನಡೆದ ದಾಳಿಯ ತನಿಖೆ ನಡೆಸಿದ ಸದನ ಸಮಿತಿಯ ಸದಸ್ಯರು ಹಾಗೂ ಆಂಥಿನಿ ಫಾಕಿ ಮತ್ತು ನಿವೃತ್ತ ಜನರಲ್ ಮಾರ್ಕ್ ಮಿಲಿ ಅವರಿಗೆ ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಕ್ಷಮಾದಾನ ಮಾಡಿದ್ದಾರೆ. ಮುಂದಿನ ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರ ವಹಿಸಿಕೊಂಡ ನಂತರ ಇವರ ಮೇಲೆ ಸೇಡು ತೀರಿಸಿಕೊಳ್ಳುವ ಸಾಧ್ಯತೆ ಇರುವುದರಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ.

2020ರಲ್ಲಿ ಚುನಾವಣೆಯಲ್ಲಿ ಸೋತ ನಂತರ ತಮಗೆ ವಿರುದ್ಧವಾಗಿದ್ದವರು ಹಾಗೂ ಅಮೆರಿಕದ ಕ್ಯಾಪಿಟಲ್ ಮೇಲೆ ಜನವರಿ 6, 2021 ರಲ್ಲಿ ನಡೆದ ದಾಳಿಯಲ್ಲಿ ತಮ್ಮ ಪಾತ್ರ ಇದೆ ಎಂದು ಹೇಳಿದವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಟ್ರಂಪ್ ಹೇಳಿದ್ದರು. ಬಿಡೆನ್ ಅವರು ಕ್ಷಮಾದಾನದ ಅಧಿಕಾರವನ್ನು ಹೆಚ್ಚು ವಿಸ್ತಾರವಾಗಿ ಬಳಸಿಕೊಂಡಿದ್ದಾರೆ. ಇನ್ನೂ ತನಿಖೆಯನ್ನೇ ಎದುರಿಸದವರಿಗೂ ಕ್ಷಮಾದಾನ ನೀಡಿದ್ದಾರೆ.

## ನಗರದಲ್ಲಿ ನಾಳೆ ವಿಶೇಷ ಚೇತನರ ಸ್ವ ಉದ್ಯೋಗ ಮಾಹಿತಿ ಕಾರ್ಯಗಾರ

ದಾವಣಗೆರೆ, ಜ.22- ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ವತಿಯಿಂದ ಸ್ವಾಮಿ ವಿವೇಕಾನಂದರ ಜಯಂತಿ, ರಾಷ್ಟ್ರೀಯ ಯುವ ದಿನ ದಿನಾಚರಣೆ ಅಂಗವಾಗಿ ನಾಡಿದ್ದು ದಿನಾಂಕ 24ರ ಶುಕ್ರವಾರ ಬೆಳಿಗ್ಗೆ 10 ಕ್ಕೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ವಿಶೇಷ ಚೇತನರ ಸ್ವ ಉದ್ಯೋಗ ಮಾಹಿತಿ ಕಾರ್ಯಾಗಾರ ನಡೆಯಲಿದೆ.

# ಮೆಟಾದ ಫ್ಯಾಕ್ಟ್‌ಚೆಕ್ ಕಡಿತ : ಎ.ಐ.-ನ್ಯೂರೋ ಟೆಕ್ನಾಲಜಿಯಿಂದ ಬೆದರಿಕೆ



ನವದೆಹಲಿ, ಜ.22- ಮಾರ್ಕ್ ಝುಕರ್‌ಬರ್ಗ್ ಅವರು ತಮ್ಮ ಮೆಟಾ ವೇದಿಕೆಗಳಿಂದ ಫ್ಯಾಕ್ಟ್‌ಚೆಕರ್‌ಗಳನ್ನು ತೆಗೆದು ಹಾಕಲು ನಿರ್ಧರಿಸಿದ್ದಾರೆ. ಇನ್‌ಸ್ಟಾಗ್ರಾಮ್, ಫೇಸ್‌ಬುಕ್ ಹಾಗೂ ತ್ರೆಡ್ಸ್ ವೇದಿಕೆಗಳಿಂದ ಫ್ಯಾಕ್ಟ್‌ಚೆಕರ್‌ಗಳನ್ನು ಕಡಿತಗೊಳಿಸಿರುವುದು ವಿವಾದಕ್ಕೆ ಕಾರಣವಾಗಿದೆ. ಅಪಪ್ರಚಾರ ತಡೆಯಲು ಹಾಗೂ ಸಾಮಾಜಿಕ ಜಾಲತಾಣ ವೇದಿಕೆಗಳ ನಂಬಿಕಾರ್ಹತೆ ಉಳಿಸಲು ಫ್ಯಾಕ್ಟ್‌ಚೆಕರ್‌ಗಳನ್ನು ಮುಂದುವರಿಸಬೇಕಿತ್ತು ಎಂದು ಹಲವರು ಅಭಿಪ್ರಾಯ ಪಟ್ಟಿದ್ದಾರೆ.

ಆದರೆ ಕೃತಕ ಬುದ್ಧಿವಂತಿಕೆ ಶಕ್ತಿಶಾಲಿಯಾಗಿದ್ದು, ಮಾನವ ಭಾಷೆಯನ್ನು ಅರಿತುಕೊಳ್ಳಬಹುದು ಹಾಗೂ ಮಾನವರಂತೆ ಸಂವಹನ ನಡೆಸಬಲ್ಲದು. ಇದರ ಜೊತೆಗೆ ಮನುಷ್ಯರ ಮೆದುಳನ್ನು ಓದಬಲ್ಲ ತಂತ್ರಜ್ಞಾನ ಉದಯಿಸುತ್ತಿದೆ.

ಇದೆಲ್ಲವೂ ಆನ್‌ಲೈನ್ ಮೂಲಕ ನಡೆಯುವ ಚರ್ಚೆಯ ಮೇಲೆ ಪರಿಣಾಮ ಬೀರುವ ಜೊತೆಗೆ ಸತ್ಯ ಹಾಗೂ ಸಂವಾದದ ಮೂಲ ನೆಲೆಗಟ್ಟನ್ನೇ ಬದಲಿಸುತ್ತಿದೆ ಎಂದು ಕ್ಯಾಡ್ರಿಫ್ ಮೆಟ್ರೋಪಾಲಿಟನ್ ವಿಶ್ವವಿದ್ಯಾಲಯದ ಸಂಶೋಧಕರಾದ ಫಿಯೋನಾ ಕೆರೋಲ್ ಹಾಗೂ ರಫೇಲ್ ವೆಬರ್‌ಹಾಸ್ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ಮಾಹಿತಿ ತಡೆಯುವಲ್ಲಿ ಫ್ಯಾಕ್ಟ್‌ಚೆಕರ್‌ಗಳು ದೀರ್ಘ ಕಾಲದಿಂದ ಪ್ರಮುಖ ಪಾತ್ರ ವಹಿಸಿದ್ದರು. ಅದರಲ್ಲೂ ರಾಜಕೀಯ, ಸಾರ್ವಜನಿಕ ಆರೋಗ್ಯ ಹಾಗೂ ಪರಿಸರ ಬದಲಾವಣೆ ಮುಂತಾದ ವಿಷಯಗಳಲ್ಲಿ ಇವರ ಪಾತ್ರ ಪ್ರಮುಖವಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ನೀಡಲಾಗುವ ಹೇಳಿಕೆಗಳನ್ನು ಇವರು ಪರಿಶೀಲಿಸಿ ಉತ್ತರದಾಯಿತ್ವ ಇರುವಂತೆ ಮಾಡುತ್ತಿದ್ದರು.

ಈಗ ಮೆಟಾ ಸಂಸ್ಥೆಯು ಫ್ಯಾಕ್ಟ್‌ಚೆಕರ್‌ಗಳ ಬದಲಿಗೆ ಸಮುದಾಯ ಆಧಾರಿತ ಟಿಪ್ಪಣಿಗಳನ್ನು ಬಳಸಲು ಮುಂದಾಗಿದೆ.ಉದ್ಯಮಿ ಎಲಾನ್ ಮಸ್ಕ್ ಅವರು ತಮ್ಮ ಎಕ್ಸ್ (ಈ ಹಿಂದೆ ಟ್ವಿಟ್ಟರ್) ವೇದಿಕೆಯಲ್ಲೂ ಇದೇ ರೀತಿಯ ದಾರಿ ಹಿಡಿದಿದ್ದರು. ಫ್ಯಾಕ್ಟ್‌ಚೆಕರ್‌ಗಳನ್ನು ಕೈಬಿಡುವುದು ಸಾಮಾಜಿಕ ಜಾಲತಾಣಗಳಿಗೆ ಹಿನ್ನಡೆ ತರಲಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ಕೋಟ್ಯಾಂತರ ಜನರು ಮೆಟಾದ ಹಲವು ವೇದಿಕೆಗಳನ್ನು ಬಳಸಿಕೊಳ್ಳುತ್ತಿದ್ದಾರೆ ಹಾಗೂ ಇವರು ಹೆಚ್ಚು ಪ್ರಭಾವ ಹೊಂದಿದ್ದಾರೆ. ಇಂತಹ ವೇದಿಕೆಗಳ ಸುರಕ್ಷತಾ ಮಾನದಂಡ ಸಡಿಲಿಸುವುದರಿಂದ ಸಾಮಾಜಿಕ ಧೃವೀಕರಣಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ ಎಂಬ ವಾದ ಇದೆ.

ಆದರೆ ಇದೆಲ್ಲವನ್ನು ಮೀರುವ ಅಪಾಯಗಳು ಈಗ ಕಂಡುಬರುತ್ತಿವೆ. ಓಪನ್ ಎಐನ ಚಾಟ್ ಜಿಪಿಟಿ ಹಾಗೂ ಗೂಗಲ್‌ನ ಜೆಮಿನಿ ಮುಂತಾದ ಕೃತಕ ಬುದ್ಧಿವಂತಿಕೆ ಮಾದರಿಗಳು ಸಹಜ ಭಾಷೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಸಾಕಷ್ಟು ಪ್ರಗತಿ ಸಾಧಿಸಿವೆ. ಈ ವ್ಯವಸ್ಥೆಗಳು ಸಂಕೀರ್ಣ ಪ್ರಶ್ನೆಗಳಿಗೆ ಉತ್ತರ ನೀಡುವ ಸಾಮರ್ಥ್ಯ ಹೊಂದಿವೆ. ಅವರು ಅವು ಮನುಷ್ಯರ ಜೊತೆ ಅರ್ಥಪೂರ್ಣ ಸಂವಾದ ನಡೆಸಬಲ್ಲವು. ಮಾನವ ರೀತಿ ಈ ವ್ಯವಸ್ಥೆಗಳು ಸಂವಾದ ನಡೆಸುವುದು ಅಭೂತಪೂರ್ವ ಸವಾಲು ತಂದಿದೆ.

ಮಾನವ ಸಂವಾದ ಹಾಗೂ ಯಾಂತ್ರಿಕ ಸಂವಾದದ ನಡುವೆ ಇರುವ ಅಂತರವನ್ನು ಎಐ ಮಾದರಿಗಳು ಕಡಿಮೆ ಮಾಡುತ್ತಿವೆ. ಇದರಿಂದಾಗಿ ಮಾಲೀಕತ್ವ, ಮೂಲ ಹಾಗೂ ಉತ್ತರದಾಯಿತ್ವದ ಕುರಿತ ಹಲವಾರು ನೈತಿಕ ಪ್ರಶ್ನೆಗಳು ಹುಟ್ಟಿಕೊಂಡಿವೆ. ಆವಿಷ್ಕಾರಕ್ಕೆ ನೆರವಾಗುವ ಈ ಎಐ ಉಪಕರಣಗಳೇ ಅಪಪ್ರಚಾರ ಇಲ್ಲವೇ ಸಾರ್ವಜನಿಕರ ಅಭಿಪ್ರಾಯ ತಿರುಚುವ ದಿಸೆಯಲ್ಲಿ ದುರ್ಬಳಕೆ ಆಗುವ ಸಾಧ್ಯತೆ ಇದೆ.

ಇದರ ಜೊತೆಗೆ ನ್ಯೂರೋ ಟೆಕ್ನಾಲಜಿ ಸಹ ಸಾಕಷ್ಟು ಬೆಳವಣಿಗೆ ಕಾಣುತ್ತಿದೆ. ಮನುಷ್ಯರು ಯೋಚಿಸುವ ರೀತಿಯನ್ನು ಅರ್ಥ ಮಾಡಿಕೊಳ್ಳುವ ದಿಸೆಯಲ್ಲಿ ನ್ಯೂರೋ ತಂತ್ರಜ್ಞಾನ ಬೆಳೆಯುತ್ತಿದೆ. ನ್ಯೂರೋ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿವಂತಿಕೆಗಳ ಸಂಗಮ ಹೊಸ ಬೆಳವಣಿಗೆಯಾಗಿದೆ.

ಅಮೆರಿಕದ ಕ್ಯಾಲಿಫೋರ್ನಿಯಾದ ನವೋದ್ಯಮವಾದ ಆರ್‌ಇಎಂ ಸ್ಪೇಸ್ ಸಂಸ್ಥೆಯು ಕನಸುಗಳನ್ನು ದಾಖಲಿಸಿಕೊಳ್ಳುವ ತಂತ್ರಜ್ಞಾನ ರೂಪಿಸುತ್ತಿದೆ. ಮೆದುಳು ಹಾಗೂ ಕಂಪ್ಯೂಟರ್ ನಡುವೆ ಸಂವಹನ ತರುವ ಮೂಲಕ ಜನರು ತಮ್ಮ ಕನಸುಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿದೆ ಎಂದು ಕಂಪನಿ ತಿಳಿಸಿದೆ. ಈ ಬೆಳವಣಿಗೆ ಉತ್ಸಾಹ ತರುವ ರೀತಿ ಇದೆ. ಆದರೆ ಇದು ಮನಸ್ಸಿನ ಖಾಸಗಿತನ ಹಾಗೂ ನಮ್ಮ ವಿಚಾರಗಳ ನಿಯಂತ್ರಣ ಕುರಿತ ಪ್ರಶ್ನೆಯನ್ನು ಹುಟ್ಟು ಹಾಕಿದೆ.

ಈ ನಡುವೆ ಮೆಟಾ ಸಂಸ್ಥೆಯು ಎಐ ತಂತ್ರಜ್ಞಾನದ ಜೊತೆಗೆ ನ್ಯೂರೋ ಟೆಕ್ನಾಲಜಿಯಲ್ಲೂ ಹೂಡಿಕೆ ಮಾಡುತ್ತಿದೆ. ಇತರ ಜಾಗತಿಕ ಕಂಪನಿಗಳೂ ಸಹ ನ್ಯೂರೋ ಟೆಕ್ನಾಲಜಿ ಬಗ್ಗೆ ಆಸಕ್ತಿ ತೋರುತ್ತವೆ.

ಆದರೆ ಮೆದುಳಿನ ಚಟುವಟಿಕೆಗಳ ಮಾಹಿತಿ ತಿಳಿಯುವ ಈ ತಂತ್ರಜ್ಞಾನ ಯಾವ ರೀತಿ ಬಳಕೆ ಆಗಲಿದೆ ಎಂಬ ಪ್ರಶ್ನೆಗಳು ಹುಟ್ಟಿಕೊಂಡಿವೆ. ಕೃತಕ ಬುದ್ಧಿವಂತಿಕೆಯು ಮನುಷ್ಯರ ವಿಚಾರಗಳನ್ನು ಅರಿಯುವಷ್ಟು ಬೆಳೆದರೆ ಮನುಷ್ಯರ ಸಂವಾದ ಹಾಗೂ ಆಂತರಿಕ ಯೋಚನೆಗಳ ನಡುವಿನ ಅಂತರ ಕಡಿಮೆಯಾಗಲಿದೆ.

ಇದರಿಂದಾಗಿ ಮನುಷ್ಯರ ಖಾಸಗಿ ಸಂವಾದ ಹಾಗೂ ಯೋಚನೆಗಳ ವಿಧಾನವೇ ಬದಲಾಗುವ ಸಾಧ್ಯತೆ ಇದೆ. ಈ ರೀತಿಯ ತಂತ್ರಜ್ಞಾನಗಳು ಸೃಜನಾತ್ಮಕ ಚಟುವಟಿಕೆಗಳಿಗೆ ಕಡಿವಾಣ ಹಾಕಲಿವೆ ಹಾಗೂ ಸ್ವಯಂ ಶಿಸ್ತಿನ ಮೇಲೆ ಪರಿಣಾಮ ಬೀರಲಿವೆ. ವಿಶೇಷವಾಗಿ ಮಕ್ಕಳ ಮೇಲೆ ಹೆಚ್ಚಿನ ಪರಿಣಾಮ ಆಗಲಿದೆ ಎಂದು ಅಧ್ಯಯನಗಳು ತಿಳಿಸಿವೆ.

ಹೀಗಾಗಿ ಫ್ಯಾಕ್ಟ್ ಚೆಕರ್ ಕೈ ಬಿಟ್ಟಿರುವ ಕುರಿತು ಚರ್ಚೆ ನಡೆಸುವ ಜೊತೆಗೆ ತಂತ್ರಜ್ಞಾನ ನಮ್ಮ ಭಾಷೆ ವಿಚಾರ ಹಾಗೂ ಸುತ್ತಲಿನ ಜಗತ್ತನ್ನು ಅರ್ಥ ಮಾಡಿಕೊಳ್ಳುವುದರ ಮೇಲೆ ಯಾವ ರೀತಿ ಪರಿಣಾಮ ಬೀರಲಿದೆ ಎಂಬ ಬಗ್ಗೆ ಯೋಚಿಸಬೇಕಿದೆ.

ಈ ಎಲ್ಲಾ ತಂತ್ರಜ್ಞಾನಗಳ ಬೆಳವಣಿಗೆ ಮೇಲೆ ನಿಯಂತ್ರಣದ ಕೊರತೆ ಇರುವುದು ಕಳವಳಕಾರಿಯಾಗಿದೆ. ಮನುಷ್ಯರ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಬಲಿಷ್ಠ ಶಾಸನಗಳ ಅಗತ್ಯವಿದೆ. ವಿವಿಧ ಕೈಗಾರಿಕಾ ವಲಯಗಳು ಹಾಗೂ ಸರ್ಕಾರಗಳ ನಡುವೆ ಸಮನ್ವಯದ ಅಗತ್ಯ ಇದೆ. ಮುಂದಿನ ದಿನಗಳಲ್ಲಿ ಸಂಭಾಷಣೆಯಲ್ಲಿ ಸತ್ಯ ಹಾಗೂ ನಂಬಿಕಾರ್ಹತೆ ಉಳಿಸಿಕೊಳ್ಳುವುದು ನಾವು ಈಗ ತೆಗೆದುಕೊಳ್ಳುವ ಕ್ರಮಗಳನ್ನು ಅವಲಂಬಿಸಿದೆ.

**ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ಆಡಳಿತ ಮಂಡಲಿ ನಿರ್ದೇಶಕರ ಚುನಾವಣೆ**

**ಚುನಾವಣಾ ಕಣದಿಂದ ಹಿಂದಕ್ಕೆ**

ಮಾನ್ಯ ಮತದಾರರೇ,

ದಿನಾಂಕ : 24-01-2025 ರ ಶುಕ್ರವಾರ ನಡೆಯುತ್ತಿರುವ ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ದಾವಣಗೆರೆ ಇದರ ಆಡಳಿತ ಮಂಡಲಿ ಚುನಾವಣೆಗೆ ಹಿಂದುಳಿದ ವರ್ಗ ಪ್ರವರ್ಗ 'ಎ' ಕ್ಷೇತ್ರದಿಂದ ನಾನು ಸ್ಪರ್ಧಿಸಿದ್ದು ಸರಿಯಷ್ಟೇ. ಆದರೆ ಕಾರಣಾಂತರದಿಂದ ಹಿಂದುಳಿದ ವರ್ಗ ಪ್ರವರ್ಗ 'ಎ' ಕ್ಷೇತ್ರದಿಂದ ಸ್ಪರ್ಧಿಸಿರುವ ಆನಂದ್ ಎನ್. ಕ್ರಮ ಸಂಖ್ಯೆ: 1 ಇವರನ್ನು ಬೆಂಬಲಿಸಿ ಕಣದಿಂದ ನಿವೃತ್ತಿಯಾಗಿದ್ದೇನೆ.

**ನಾಗೇಂದ್ರ ಎನ್. ಲದ್ವಾ** ಬಿನ್ ಲೇ. ನಾರಾಯಣ ಸಿ. ಲದ್ವಾ

ನಂ. 63, 60 ಅಡಿ ರಸ್ತೆ, 'ಜಯಶ್ರೀ ನಿಲಯ', ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.

**ಮಾನ್ಯ ಗೌರವಾನ್ವಿತ 2ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ.**

R.A. No. : 16/2024

ಅರ್ಜಿದಾರರು : **ನಾಗರಾಜ** ಬಿನ್ **ಮರಿಸಿದ್ದಪ್ಪ**, ವಯಸ್ಸು ಸುಮಾರು 38 ವರ್ಷ, ವಾಸ : ವಿನಾಯಕ ನಗರ, 7ನೇ ಕ್ರಾಸ್, ರಿಂಗ್ ರಸ್ತೆ ಹತ್ತಿರ, ಕುಂದುವಾಡ ರೋಡ್, ದಾವಣಗೆರೆ ಮತ್ತು ಇತರರು

ವಿರುದ್ಧ ಎದುರುದಾರರು : ಮರಿಸಿದ್ದಪ್ಪ ಮತ್ತು ಇತರರು

ಎದುರುದಾರರು ನಂ. 3. **ಶ್ರೀ ಬೀರಣ್ಣ @ ಬೀರೇಶ್ ಬಿನ್ ಮರಿಸಿದ್ದಪ್ಪ**, ವಯಸ್ಸು ಸುಮಾರು 34 ವರ್ಷ, ವಾಸ : ವಿನಾಯಕ ನಗರ, 7ನೇ ಕ್ರಾಸ್, ರಿಂಗ್ ರಸ್ತೆ ಹತ್ತಿರ, ಕುಂದುವಾಡ ರೋಡ್, ದಾವಣಗೆರೆ.

ಎದುರುದಾರರು ನಂ. 9. **ಶ್ರೀಮತಿ ಸಹನಾ ಬಿನ್ ಲೇಟ್ ಕೆ. ವೆಂಕಟೇಶ ಕಿಣಿ**, ವಯಸ್ಸು ಸುಮಾರು 39 ವರ್ಷ, # 4024, 2ನೇ ಕ್ರಾಸ್, ಕುವೆಂಪು ನಗರ, ದಾವಣಗೆರೆ.

**ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪ್ರತಿವಾದಿಯರ ವಿರುದ್ಧ ನೀಡಲಾದ ಪ್ರಕಟಣಾ ನೋಟೀಸು**

ಸದರಿ ಮೇಲ್ಕಾಣಿಸಿದ ಪ್ರಕರಣದಲ್ಲಿ ಅರ್ಜಿದಾರರು ಎದುರುದಾರರ ವಿರುದ್ಧ ನಿರ್ದಿಷ್ಟ ಪರಿಹಾರ ಆದೇಶ ಕೋರಿ ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವುಗಳು 3 ಮತ್ತು 9ನೇ ಉದ್ದೇಶಿತ ಎದುರುದಾರರಾಗಿದ್ದು, ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸಿದ್ದರೂ ಸಹ ಅವು ನಿಮಗೆ ಜಾರಿಯಾಗಿರುವುದಿಲ್ಲ, ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ : 24.02.2024ರಂದು ಬೆಳಿಗ್ಗೆ 11.00 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ : 17.01.2025ರಂದು ಕೊಡಲ್ಪಟ್ಟಿದೆ.

ಸಹಿ/-
ಅರ್ಜಿದಾರರ ಪರ ವಕೀಲರು
(ಕೆ. ಪವಿತ್ರ)

ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/- ಮುಖ್ಯ ಆಡಳಿತಾಧಿಕಾರಿಗಳು
ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ.

# ಚೀನಾದಲ್ಲಿ ಸತತ ಮೂರನೇ ವರ್ಷ ಜನಸಂಖ್ಯೆ ಇಳಿಕೆ

## ಇನ್ನೂ ಹಲವು ದೇಶಗಳಲ್ಲಿ ಜನಸಂಖ್ಯಾ ಕುಸಿತ ಹಾಗೂ ವೃದ್ಧಾಪ್ಯ ಸಮಸ್ಯೆ


ಬೀಜಿಂಗ್, ಜ. 22- ಚೀನಾದಲ್ಲಿ ಸತತ ಮೂರನೇ ವರ್ಷ ಜನಸಂಖ್ಯೆ ಇಳಿಕೆಯಾಗಿದೆ. ಕೇವಲ ಚೀನಾ ಅಷ್ಟೇ ಅಲ್ಲದೆ ಹಲವು ದೇಶಗಳು ಜನಸಂಖ್ಯೆ ಕುಸಿತ ಹಾಗೂ ವೃದ್ಧರು ಹೆಚ್ಚಾಗುವ ಅವಳಿ ಸಮಸ್ಯೆಗಳನ್ನು ಎದುರಿಸುತ್ತಿವೆ.

ಯುವ ಪೀಳಿಗೆ ಹೆಚ್ಚು ಮಕ್ಕಳನ್ನು ಹೊಂದಲು ಬಯಸದೇ ಇರುವುದು ಹಾಗೂ ಆರೋಗ್ಯ ಸೇವೆಯಿಂದಾಗಿ ಜೀವಿತಾವಧಿ ಹೆಚ್ಚಾಗಿರುವುದು ಈ ಸಮಸ್ಯೆ ಉಲ್ಬಣಿಸಲು ಕಾರಣವಾಗಿದೆ.

ಚೀನಾ ಶುಕ್ರವಾರ ತನ್ನ ಜನಸಂಖ್ಯಾ ಮಾಹಿತಿಯನ್ನು ಬಿಡುಗಡೆ ಮಾಡಿದೆ. ಅದರ ಪ್ರಕಾರ 2024ರಲ್ಲಿ 1.4 ದಶಲಕ್ಷ ಜನಸಂಖ್ಯೆ ಇಳಿಕೆಯಾಗಿದ್ದು 1.408 ಶತಕೋಟಿಗೆ ತಲುಪಿದೆ.

ಜಪಾನ್ ದೇಶದಲ್ಲಿ ಕಳೆದ 15 ವರ್ಷಗಳಿಂದ ಜನಸಂಖ್ಯೆ ಇಳಿಮುಖವಾಗಿದೆ ಹಾಗೂ ದಕ್ಷಿಣ ಕೊರಿಯಾದಲ್ಲಿ 2021 ರಿಂದ ಜನಸಂಖ್ಯೆ ಇಳಿಯುತ್ತಿದೆ. ಇಟಲಿಯಲ್ಲಿ 19ನೇ ಶತಮಾನದ ನಂತರ ಮೊದಲ ಬಾರಿಗೆ ವರ್ಷದಲ್ಲಿ ಜನನ ಪ್ರಮಾಣ 4 ಲಕ್ಷಕ್ಕಿಂತ ಕಡಿಮೆ ಆಗಿದೆ.

ಒಟ್ಟಾರೆ 63 ದೇಶಗಳು ಹಾಗೂ ಪ್ರಾಂತ್ಯಗಳಲ್ಲಿ ಜನಸಂಖ್ಯೆ ಉತ್ತುಂಗದ ಮಟ್ಟದಿಂದ ಇಳಿಕೆಯಾಗುತ್ತಿದೆ ಎಂದು ವಿಶ್ವಸಂಸ್ಥೆ ತಿಳಿಸಿದೆ. ಮುಂದಿನ 30 ವರ್ಷಗಳಲ್ಲಿ 48 ದೇಶಗಳು ತಮ್ಮ ಜನಸಂಖ್ಯಾ ಪ್ರಮಾಣದ ಉತ್ತುಂಗ ತಲುಪಲಿವೆ ಎಂದು ಅಂದಾಜಿಸಲಾಗಿದೆ. ಈಗ ವಿಶ್ವದ ಒಟ್ಟು ಜನಸಂಖ್ಯೆ 8.2 ಶತಕೋಟಿ ಎಂದು ಅಂದಾಜಿಸಲಾಗಿದೆ. ಜಾಗತಿಕ ಜನಸಂಖ್ಯೆ ಇನ್ನೂ ಹೆಚ್ಚುತ್ತಲೇ ಇದೆ. ಇನ್ನು 60 ವರ್ಷಗಳಲ್ಲಿ ಜನಸಂಖ್ಯೆ 10.3 ಶತಕೋಟಿಗೆ ತಲುಪಲಿದ್ದು ನಂತರ ಇಳಿಕೆಯಾಗಲಿದೆ ಎಂದು ವಿಶ್ವ ಸಂಸ್ಥೆ ಅಂದಾಜಿಸಿದೆ.



ಜನಸಂಖ್ಯಾ ಹೆಚ್ಚಳಕ್ಕೆ ಹಲವು ದೇಶಗಳು ಉತ್ತೇಜನಗಳನ್ನು ನೀಡುತ್ತಿವೆ. ಹೆಚ್ಚು ಮಕ್ಕಳನ್ನು ಹೊಂದಲು ಹಣಕಾಸು ಸೌಲಭ್ಯಗಳನ್ನು ನೀಡುತ್ತಿವೆ.

ಜಪಾನ್‌ನಲ್ಲಿ 2008ರ ನಂತರ ಜನಸಂಖ್ಯೆ 3 ದಶ ಲಕ್ಷದಷ್ಟು ಇಳಿಕೆಯಾಗಿದೆ. ಜನಸಂಖ್ಯಾ ಪರಿಸ್ಥಿತಿ ಅತ್ಯಂತ ಕಠಿಣವಾಗಿದೆ ಎಂದು ಜಪಾನ್ ಸರ್ಕಾರದ ಮುಖ್ಯ ಸಂಪುಟ ಕಾರ್ಯದರ್ಶಿ ಯೊಶಿಮಾಸ ಹಯಾಶಿ ಹೇಳಿದ್ದಾರೆ.

ಜನಸಂಖ್ಯಾ ಇಳಿಕೆ ತಪ್ಪಿಸಲು ಮುಂದಿನ ಕೊನೆಯ ಅವಕಾಶ 6 ವರ್ಷಗಳಲ್ಲಿ ಮಾತ್ರ ಲಭ್ಯವಿದೆ ಎಂದವರು ತಿಳಿಸಿದ್ದಾರೆ. 2018 ರಲ್ಲಿ ಜಪಾನ್ ಜನಸಂಖ್ಯೆ ಅತಿ ಹೆಚ್ಚಿನ 128 ದಶಲಕ್ಷ ಆಗಿತ್ತು. ಈಗ ಅದು 125 ದಶಲಕ್ಷಕ್ಕೆ ಇಳಿಕೆಯಾಗಿದೆ. 2023ರಲ್ಲಿ ಕೇವಲ 7.30 ಲಕ್ಷ ಮಕ್ಕಳು ಜನಿಸಿದ್ದು ದಾಖಲೆಯಾಗಿತ್ತು. ಜಪಾನ್‌ನ ಯುವ ಪೀಳಿಗೆ ಮದುವೆ ಇಲ್ಲವೇ ಮಕ್ಕಳನ್ನು ಹೊಂದುವುದರಿಂದ ದೂರವಾಗುತ್ತಿದ್ದಾರೆ ಎಂದು ಸಮೀಕ್ಷೆಗಳು ತಿಳಿಸಿವೆ.

ಕುಸಿಯುತ್ತಿರುವ ಉದ್ಯೋಗಾವಕಾಶ, ಹೆಚ್ಚುತ್ತಿರುವ ಜೀವನ ವೆಚ್ಚ ಹಾಗೂ ಕಾರ್ಪೊರೇಟ್ ಸಂಸ್ಕೃತಿ ಕಾರಣದಿಂದಾಗಿ ಜನರು ಮದುವೆಯಾಗಲು ಬಯಸುತ್ತಿಲ್ಲ.

2070ರ ವೇಳೆಗೆ ಜಪಾನ್ ಜನಸಂಖ್ಯೆ 87 ದಶಲಕ್ಷಕ್ಕೆ ಕುಸಿಯಲಿದೆ. ಆ ವೇಳೆಗೆ ಶೇಕಡ 40ರಷ್ಟು ಜನರ ವಯೋಮಾನ 65ಕ್ಕಿಂತ ಹೆಚ್ಚಾಗಿರಲಿದೆ ಎಂದು ಅಂದಾಜಿಸಲಾಗಿದೆ.

ಚೀನಾದಲ್ಲೂ ಸಹ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ. ಇದು ಆರ್ಥಿಕ ಬೆಳವಣಿಗೆಗೂ ಸಮಸ್ಯೆಯಾಗಿದೆ. ವೃದ್ಧರಾಗುತ್ತಿರುವ ಜನರಿಗೆ ಸೌಲಭ್ಯ ಕಲ್ಪಿಸುವುದು ಮತ್ತೊಂದು ಸವಾಲಾಗಿದೆ.

ಚೀನಾದಲ್ಲಿ ಹಲವರು ವೃದ್ಧಾಪ್ಯವನ್ನು ಅವಕಾಶ ವಾಗಿ ಬಳಸಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ವೃದ್ಧರ ವಿಶ್ವವಿದ್ಯಾಲಯ ಆರಂಭಿಸಲಾಗಿದೆ. ಇಲ್ಲಿ 150 ವಿದ್ಯಾರ್ಥಿಗಳಿಗೆ ನೃತ್ಯ, ಹಾಡು, ಯೋಗ ಹಾಗೂ ಮಾಡೆಲಿಂಗ್ ತರಗತಿಗಳನ್ನು ಒದಗಿಸಲಾಗುತ್ತಿದೆ.

ಈ ಪ್ರಯತ್ನ ಇನ್ನೂ ನಿರೀಕ್ಷಿತ ಫಲ ನೀಡಿಲ್ಲ. ಆದರೆ ಭವಿಷ್ಯದಲ್ಲಿ ಉತ್ತಮ ಅವಕಾಶಗಳಿವೆ ಎಂದು ಇದರ ಸ್ಥಾಪಕ ಲ್ಯೂ ಕ್ಸಿಕ್ವಿನ್ ಹೇಳಿದ್ದಾರೆ. ಚೀನಾ ಸರ್ಕಾರ ನಿವೃತ್ತಿ ವಯಸ್ಸನ್ನು ಹೆಚ್ಚಿಸುವ ಮೂಲಕ ಪರಿಸ್ಥಿತಿ ನಿಭಾಯಿಸಲು ಪ್ರಯತ್ನ ನಡೆಸಿದೆ. 2023ರವರೆಗೂ ಚೀನಾ ವಿಶ್ವದಲ್ಲೇ ಅತಿ ಹೆಚ್ಚಿನ ಜನಸಂಖ್ಯೆ ಹೊಂದಿತ್ತು. ಆದರೆ ಆ ವರ್ಷ ಭಾರತ ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿದ ದೇಶವಾಗಿ ಹೊರಹೊಮ್ಮಿತ್ತು. ಇತ್ತೀಚಿನ ವರ್ಷ ಗಳಲ್ಲಿ ಚೀನಾ ಸರ್ಕಾರ ಒಂದು ಮಗುವಿನ ನೀತಿ ಯನ್ನು ಬದಲಿಸಿದ್ದು ಮೂರು ಮಕ್ಕಳು ಹೊಂದಲು ಅವಕಾಶ ನೀಡಿದೆ. ಆದರೆ ಪರಿಸ್ಥಿತಿ ಹೆಚ್ಚೇನು ಬದಲಾಗಿಲ್ಲ.

# ಅಪಸ್ವರ ಎತ್ತುವ ಸಚಿವರ ಕೈಬಿಡಿ

**(1ನೇ ಪುಟದಿಂದ)** ಸಾಲಿನ ಮುಂಗಡ ಪತ್ರ ಮಂಡಿಸಿ ಅನುಮತಿ ಪಡೆದುಕೊಳ್ಳುವ ವರೆಗೂ ಕರ್ನಾಟಕದ ಮಟ್ಟಿಗೆ ಯಾವುದೇ ರಾಜಕೀಯ ನಿರ್ಧಾರಗಳನ್ನು ಪಕ್ಷ ತೆಗೆದುಕೊಳ್ಳುವುದಿಲ್ಲ ಎಂದರು.

ಸಚಿವರು, ಮುಖಂಡರಲ್ಲಿ ನಾಯಕರ ಬಗ್ಗೆ ಅಸಮಾಧಾನ ಇದ್ದಲ್ಲಿ, ಅದನ್ನು ವರಿಷ್ಠರ ಮುಂದೆ ತೋಡಿಕೊಳ್ಳಲಿ, ಅದು ಬಿಟ್ಟು ಬಹಿರಂಗ ಹೇಳಿಕೆ ನೀಡಿದರೆ ಇನ್ನು ಮುಂದೆ ನಾವು ಸಹಿಸುವುದಿಲ್ಲ.

ಕೆಪಿಸಿಸಿ ಅಧ್ಯಕ್ಷ ಸ್ಥಾನ ಹಾಗೂ ನಾಯಕತ್ವ ವಿಚಾರಕ್ಕೆ ಸಂಬಂಧಿಸಿದಂತೆ ಮೂರ್ನಾಲ್ಕು ಸಚಿವರು ಪದೇ ಪದೇ ಹೇಳಿಕೆ ನೀಡುತ್ತಿದ್ದಾರೆ.

ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಖುದ್ದಾಗಿ, ಇವರನ್ನು ಭೇಟಿ ಮಾಡಿ, ಇಲ್ಲವೇ ಸಂಪರ್ಕಿಸಿ, ವರಿಷ್ಠರ ನಿಲುವು ಏನೆಂಬುದನ್ನು ತಿಳಿಸಿದ್ದಾರೆ.

ಉಸ್ತುವಾರಿಗಳ ಮಾತಿಗೂ ಮನ್ನಣೆ ನೀಡದೆ, ನಾಯಕತ್ವದ ಬಗ್ಗೆ ಬಹಿರಂಗವಾಗಿ ಅಪಸ್ವರ ಎತ್ತಿರುವ ಇಬ್ಬರು ಸಚಿವರನ್ನು ಸಂಪುಟದಿಂದ ಕಿತ್ತೊಗೆಯಿರಿ ಎಂದು ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರಿಗೆ ವೇಣುಗೋಪಾಲ್ ಸ್ಪಷ್ಟವಾಗಿ ತಿಳಿಸಿದ್ದಾರೆ.

ಸುರ್ಜೇವಾಲಾ ಅವರು, ಅಪಸ್ವರ ಎತ್ತಿರುವ ಬಗ್ಗೆ ಸಮಾಲೋಚನೆಗೆ ಬರುವ ಸಮಯದಲ್ಲೇ ವರಿಷ್ಠರು ಈ ಸಂದೇಶವನ್ನು ನೀಡಿಯೇ ಕಳುಹಿಸಿದ್ದರು.

ಇದಾದ ನಂತರವೂ ಅವರುಗಳು ಅದನ್ನೇ ಮುಂದುವರೆಸಿದ್ದಾರೆ, ಇಂತಹವರು ಅಧಿಕಾರದಲ್ಲಿ ಇರುವುದು ಬೇಡ, ಅವರಿಲ್ಲದೆ ಪಕ್ಷ ನೆಲ ಕಚ್ಚುವುದಿಲ್ಲ.

ಕರ್ನಾಟಕದ ಮಟ್ಟಿಗೆ ಸಂಘಟನಾತ್ಮಕವಾಗಿ ಪಕ್ಷ ಮತ್ತು ಸರ್ಕಾರ ಬಲಿಷ್ಠವಾಗಿದೆ, ಹೀಗಾಗಿ ನೀವು ಯಾವುದೇ ಮುಲಾಜಿಗೆ ಒಳಗಾಗಬೇಡಿ, ನಾವು, ನಿಮಗೆ ಮುಕ್ತ ಅವಕಾಶ ನೀಡಿದ್ದೇವೆ ಎಂದು ತಿಳಿಸಿದ್ದಾರೆ.

ಮಧ್ಯಪ್ರದೇಶ, ರಾಜಾಸ್ತಾನ ಹಾಗೂ ಹರಿಯಾಣದಲ್ಲಿ ನಾವು ಸ್ವಲ್ಪ ಸಡಿಲ ಕೊಟ್ಟಿದ್ದರಿಂದ ಅಧಿಕಾರವನ್ನೇ ಕಳೆದುಕೊಳ್ಳಬೇಕಾಯಿತು, ನಮಗೆ ವ್ಯಕ್ತಿ ಮುಖ್ಯವಲ್ಲ ಪಕ್ಷ ಮುಖ್ಯ. ನಮ್ಮ ಬಲ ಹೆಚ್ಚಿರುವಾಗ ಈ ಸಚಿವರುಗಳಿಗೆ ನೀವು ಅಂಜುವುದು ಬೇಡ ಎಂದಿದ್ದಲ್ಲದೆ, ಕರ್ನಾಟಕದಲ್ಲಿ ಸದ್ಯಕ್ಕೆ ಯಾವುದೇ ಬದಲಾವಣೆ ಇಲ್ಲ, ಏನಿದ್ದರೂ ವರಿಷ್ಠರು ತೀರ್ಮಾನ ಮಾಡುತ್ತಾರೆ ಎಂದು ವೇಣುಗೋಪಾಲ್ ಹೇಳಿದ್ದಾರೆ.

ಸಮಾವೇಶಕ್ಕೂ ಮುನ್ನ ಖರ್ಗೆ ಅವರು, ಅಪಸ್ವರ ಎತ್ತದೆ, ಕೊಟ್ಟಿರುವ ಕೆಲಸವನ್ನು ಬಾಯಿಮುಚ್ಚಿಕೊಂಡು ಮಾಡಿ ಎಂದು ಕೆಲವು ಸಚಿವರಿಗೆ ಖಡಕ್ಕಾಗಿ ತಿಳಿಸಿದ್ದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಶಿವಕುಮಾರ್ ಕೆಳಗಿಳಿಯಬೇಕು, ಸಿದ್ದರಾಮಯ್ಯ ಅವರೇ ಪೂರ್ಣಾವಧಿಗೆ ಅಧಿಕಾರದಲ್ಲಿ ಮುಂದುವರೆಯಬೇಕು, ಅವರ ನಾಯಕತ್ವ ಬಿಟ್ಟು ಬೇರೆಯವರ ನಾಯಕತ್ವ ನಮಗೆ ಬೇಡ ಎಂದು ಸಚಿವರಾದ ಕೆ.ಎನ್.ರಾಜಣ್ಣ, ಸತೀಶ್ ಜಾರಕಿಹೊಳಿ ಬಹಿರಂಗವಾಗೇ ಹೇಳಿದ್ದರು.

ಇವರ ಅಪಸ್ವರಕ್ಕೆ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ್ ಧ್ವನಿಗೂಡಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

# ಅಂಬಿಗರ ಚೌಡಯ್ಯ ವಿಚಾರಧಾರೆ ಮನುಕುಲಕ್ಕೆ ದಾರಿದೀಪ



### ಹರಿಹರ ಶಾಸಕ ಬಿ.ಪಿ. ಹರೀಶ್

ಹರಿಹರ,ಜ.22- ನಿಜ ಶರಣ ಅಂಬಿಗರ ಚೌಡಯ್ಯನವರ ವಿಚಾರ ಧಾರೆಗಳು ಒಂದು ಜಾತಿಗೆ ಮಾತ್ರ ಸೀಮಿತವಾಗಿರದೇ ಮನು ಕುಲಕ್ಕೇ ಮಾರ್ಗದರ್ಶನ ಮಾಡತಕ್ಕಂತಹ ವಿಚಾರಗಳಾಗಿದ್ದಾವೆ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ನಡೆದ ನಿಜಶರಣ ಶ್ರೀ ಅಂಬಿಗರ ಚೌಡಯ್ಯ ನವರ 905ನೇ ಜಯಂತಿ ಆಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಬಸವಣ್ಣನವರ ಕಾಲಘಟ್ಟದಲ್ಲಿ ಅಂಬಿಗರ ಚೌಡಯ್ಯ ಸೇರಿದಂತೆ ಬಹಳಷ್ಟು ಜ್ಞಾನಿಗಳು ಅಧ್ಯಾತ್ಮಿಕತೆಯ, ಅನೇಕ ದಾರ್ಶನಿಕರು ಮಾನವ ಕುಲದ ಹಾಗೂ ಸಮಾಜದ ಒಳಿತಿಗಾಗಿ ಹೆಚ್ಚು ಕೊಡುಗೆ ನೀಡಿರುವುದು ಶ್ಲಾಘನೀಯ ಕಾರ್ಯ ಎಂದು ಹೇಳಿದರು.

ಹರಿಹರ ತಾಲ್ಲೂಕಿನಲ್ಲಿ ಅಂಬಿಗರ ಚೌಡಯ್ಯನವರ ಸಮಾಜದವರು ಗಣನೀಯವಾಗಿ ಇದ್ದಾರೆ, ಎಷ್ಟೇ ಹಣ, ಅಂತಸ್ತು, ಆಸ್ತಿ ಗಳಿಸಿದರೂ ಸಹ ಶೈಕ್ಷಣಿಕವಾಗಿ ಮುಂದೆ ಬಂದಾಗ ಮಾತ್ರ ಎಲ್ಲಾ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಬಹುದು. ತಮ್ಮ ಅಭಿವೃದ್ಧಿ ಜೊತೆಗೆ ಸಮಾಜ ಹಾಗೂ ಮನೆತನದ ಅಭಿವೃದ್ಧಿ ಕೂಡ ಸಹಕಾರ ಆಗುವಂತೆ ಆಗುತ್ತದೆ ಎಂದು ಹೇಳಿದರು.

ಅಂಬಿಗರ ಪೋಷಕರು ತಮ್ಮ ಮಕ್ಕಳಿಗೆ ಶೇ. ನೂರರಷ್ಟು ವಿದ್ಯೆ ನೀಡಿದರೆ, ಮುಂದೆ ಆ ಮಗುವಿಗೆ ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಪರಂಪರೆಯ ವಿಚಾರಗಳನ್ನು ತಿಳಿದುಕೊಳ್ಳಲು ಶಕ್ತಿ, ಸಾಮರ್ಥ್ಯ ಬರುತ್ತದೆ ಎಂದು ಹೇಳಿದರು.

ಶೇ. 90 ರಷ್ಟು ಮತಗಳನ್ನು ನನಗೆ ಹಾಕಿ ನನ್ನ ಗೆಲುವಿಗೆ ಅಂಬಿಗರ ಸಮಾಜದವರು ಕಾರಣರಾಗಿದ್ದಾರೆ. ಹಾಗಾಗಿ ನನಗೆ ವಿರೋಧ ಹಾಗೂ ಟೀಕೆ ಮಾಡಿದ್ದರೂ ಸಹ ಅವರ ಕೆಲಸವನ್ನು ಮಾಡಿರುವೆ. ಅದರಲ್ಲೂ ಗುತ್ತೂರು ಗ್ರಾಮದಲ್ಲಿ ನನಗೆ ಪ್ರತಿ ಸಾರಿಯೂ ಹೆಚ್ಚು ಮತಗಳನ್ನು ಹಾಕಿದ್ದಾರೆ ಎಂದು ಹೇಳಿದರು.

ನಿಜ ಶರಣ ಅಂಬಿಗರ ಚೌಡಯ್ಯನವರ ಸಮಾಜದ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಬಸವರಾಜ್ ಹಲಸಬಾಳು ಮಾತನಾಡಿ, ನಿಜ ಶರಣ ಅಂಬಿಗರ ಚೌಡಯ್ಯನವರು ಒಂದು ಕುಲಕ್ಕೆ ಸೀಮಿತವಾಗಿ ಇರದೇ, ಎಲ್ಲಾ ವರ್ಗದವರ ಒಳಿತಿಗಾಗಿ ಸುಮಾರು ವಚನಗಳನ್ನು ರಚಿಸಿ, ಆ ಮೂಲಕ ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಕಾರ್ಯವನ್ನು ಮಾಡಿ, ಸಮಾಜದಲ್ಲಿನ ಜನರು ಸಾಮರಸ್ಯದಿಂದ ಬದುಕನ್ನು ಕಟ್ಟಿಕೊಳ್ಳುವಂತೆ ಮಾಡಿದ್ದಾರೆ ಎಂದರು.

ನಿಜಶರಣ ಅಂಬಿಗರ ಚೌಡಯ್ಯನವರ ಹೆಸರಿನಲ್ಲಿ ಗುತ್ತೂರು ಗ್ರಾಮದಲ್ಲಿ ಸಮುದಾಯ ಭವನವನ್ನು ನಿರ್ಮಾಣ ಮಾಡಲಾಗಿದೆ. ಶಾಸಕ ಬಿ.ಪಿ. ಹರೀಶ್ ರವರು ಹಿಂದೆ ಶಾಸಕರಾಗಿದ್ದ ಸಮಯದಲ್ಲಿ ಸಹಕಾರ ನೀಡಿದ್ದರು. ಆದರೆ ಆ ಕಟ್ಟಡ ಬಹಳಷ್ಟು ಸೋರುತ್ತಿದ್ದು, ಅದರ ದುರಸ್ತಿಗೆ ಮತ್ತು ಅನ್ನ ದಾಸೋಹ ಭವನ ನಿರ್ಮಾಣ ಮಾಡಬೇಕಾಗಿದ್ದರಿಂದ 10 ಲಕ್ಷ ರೂ. ಅನುದಾನ ನೀಡುವಂತೆ ಶಾಸಕರಲ್ಲಿ ಮನವಿ ಮಾಡಿಕೊಂಡರು.

ತಹಶೀಲ್ದಾರ್ ಗುರುಬಸವರಾಜ್, ತಾಲ್ಲೂಕು ನಿಜಶರಣ ಅಂಬಿಗರ ಚೌಡಯ್ಯನವರ ಸಮಾಜದ ಅಧ್ಯಕ್ಷ ಪೇಟೆ ಬಸವರಾಜಪ್ಪ ಇತರರು ಮಾತನಾಡಿದರು.

ಈ ಸಂದರ್ಭದಲ್ಲಿ ನಗರಸಭೆ ಎಇಇ ವಿನಯ್ ಕುಮಾರ್, ಅಂಬಿಗರ ಸಮಾಜದ ಉಪಾಧ್ಯಕ್ಷ ಗರಡಿ ಮನೆ ಬಸವರಾಜಪ್ಪ, ನಿವೃತ್ತ ಶಿಕ್ಷಕ ಅಶೋಕ, ಕೆಂಚನಹಳ್ಳಿ ಮಹಾಂತೇಶಪ್ಪ, ವಾಸುದೇವ್, ಕುಂಬಳೂರು ದುರುಗಪ್ಪ, ಬೆಳ್ಳೂಡಿ ಪುನೀತ್ ಮತ್ತಿತರರು ಹಾಜರಿದ್ದರು.

# 26ರಂದು 76ನೇ ಗಣರಾಜ್ಯೋತ್ಸವ

### ಜಿಲ್ಲಾ ಉಸ್ತುವಾರಿ ಸಚಿವರಿಂದ ರಾಷ್ಟ್ರ ಧ್ವಜಾರೋಹಣ

ದಾವಣಗೆರೆ, ಜ. 22 - ಜಿಲ್ಲಾಡಳಿತದ ವತಿಯಿಂದ ಜ.26 ರಂದು 76ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ. ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಜ.26ರ ಬೆಳಗ್ಗೆ 9 ಗಂಟೆಗೆ ರಾಷ್ಟ್ರಧ್ವಜಾರೋಹಣ ನೆರವೇರಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಜಗಳೂರು ಶಾಸಕ ಬಿ. ದೇವೇಂದ್ರಪ್ಪ, ಹೊನ್ನಾಳಿ ಶಾಸಕ ಶಾಂತನಗೌಡ ಡಿ.ಜಿ, ಚನ್ನಗಿರಿ ಶಾಸಕ ಬಸವರಾಜು ವಿ. ಶಿವಗಂಗಾ, ಹರಿಹರ ಶಾಸಕ ಬಿ.ಪಿ. ಹರೀಶ್, ವಿಧಾನ ಪರಿಷತ್ ಸದಸ್ಯ ಎಸ್. ಎಲ್. ಭೋಜೇಗೌಡ, ಚಿದಾನಂದ ಎಂ. ಗೌಡ, ಡಿ. ಎಸ್. ಅರುಣ್, ಕೆ.ಎಸ್. ನವೀನ್, ಕೆ. ಅಬ್ದುಲ್ ಜಬ್ಬಾರ್, ಡಾ. ಧನಂಜಯ್ ಸರ್ಜಿ, ಡಿ.ಟಿ. ಶ್ರೀನಿವಾಸ್, ಮೇಯರ್ ಚಮನ್ ಸಾಬ್.ಕೆ, ದೂಡಾ ಅಧ್ಯಕ್ಷರಾದ ದಿನೇಶ್. ಕೆ. ಶೆಟ್ಟಿ, ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಸಗೋಡು ಜಯಸಿಂಹ, ಬಂಜಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವನಾಯ್ಕ್, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ ಬಿ. ಇಟ್ನಾಳ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಅಂದು ಸಂಜೆ 6 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಶಾಲಾ, ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

# ಸರ್ವಾಧ್ಯಕ್ಷರಾಗಿ ಜಿಲ್ಲಾಧ್ಯಕ್ಷ ವಾಮದೇವಪ್ಪ ಆಯ್ಕೆ

**(1ನೇ ಪುಟದಿಂದ)** ಸೂಕ್ತವಾಗಿದೆ ಎಂದು ತಿಳಿಸಲಾಗಿದೆ.

ಜಿಲ್ಲೆಯ ಎಲ್ಲಾ ಸಾಹಿತ್ಯಾಸಕ್ತರು ಪರಿಷತ್ತಿನ ಪ್ರತಿನಿಧಿಗಳು ಹಾಗೂ ಮೇಳ ನಡೆಸುತ್ತಿರುವ ಎಲ್ಲಾ ಪದಾಧಿಕಾರಿಗಳ ಅಭಿಲಾಷೆ, ಅಪೇಕ್ಷೆಯ ಮೇರೆಗೆ ಸಮ್ಮೇಳನ ಅಧ್ಯಕ್ಷರನ್ನಾಗಿ ಬಿ. ವಾಮದೇವಪ್ಪ ಅವರನ್ನು ಆಯ್ಕೆ ಮಾಡಿರುವುದು ಎಲ್ಲರಿಗೂ ಸಂತಸ ತಂದಿದೆ.

ಮೇಳದ ಉಸ್ತುವಾರಿ ವಹಿಸಿಕೊಂಡಿರುವ ಆನಂದ ಗೌಡ ಅವರು ಸಮ್ಮೇಳನ ಅಧ್ಯಕ್ಷರನ್ನಾಗಿ ಕವಿಗಳನ್ನು ಆಯ್ಕೆ ಮಾಡುವುದು ರೂಢಿ. ಆದರೆ ಕನ್ನಡ ಸಾಹಿತ್ಯಕ್ಕಾಗಿ ನಿಜವಾಗಿಯೂ ದುಡಿಯುವವರು, ಕನ್ನಡ ನಾಡು ನುಡಿಗಾಗಿ ಸಾಹಿತ್ಯ ಪರಿಷತ್ತಿನಲ್ಲಿ ಸೇವೆ ಸಲ್ಲಿಸುವವರು ಅಂತಹವಾರ ಸೇವೆಗೂ ತಕ್ಕ ಗೌರವ ದೊರೆಯುವಂತಾಗಬೇಕು ಎಂಬ ಅಭಿಲಾಷೆ, ಅಭಿಪ್ರಾಯದಿಂದಲೇ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನೇ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

## ಗುಡಿಸಲು ವಾಸಿಗಳಿಗೆ ಆಹಾರ ಕಿಟ್ ವಿತರಣೆ



ದಾವಣಗೆರೆ, ಜ.22- ಕಾಯಕಯೋಗಿ ಹಾಗೂ ತ್ರಿವಿಧ ದಾಸೋಹಿ ಸಿದ್ಧಗಂಗಾ ಮಠದ ಲಿಂ. ಡಾ. ಶಿವಕುಮಾರ ಸ್ವಾಮೀಜಿಯವರ 6ನೇ ಪುಣ್ಯಸ್ಮರಣೆ ನಿಮಿತ್ತ ಸರ್ಕಾರಿ ನೌಕರರ ಸಂಘದ ನಿಕಟ ಪೂರ್ವ ಜಿಲ್ಲಾಧ್ಯಕ್ಷ ಎಸ್. ಹಾಲೇಶಪ್ಪ ಅವರು, ನಗರದಲ್ಲಿನ ಗುಡಿಸಲು ವಾಸಿಗಳಿಗೆ ಆಹಾರ ಕಿಟ್ ಮತ್ತು ಮಕ್ಕಳಿಗೆ ಸಿಹಿ ಹಂಚಿದರು.

ಈ ಸಂದರ್ಭದಲ್ಲಿ ಗೋವಿಂದಪ್ಪ, ರಂಗಪ್ಪ, ಸುರೇಶ್, ದುರ್ಗಮ್ಮ, ರೇಖಮ್ಮ, ಮರಿಯಜ್ಜಿ, ಮಕ್ಕಳು ಹಾಗೂ ಇತರರು ಇದ್ದರು.

## ಫೆ. 1ರಿಂದ ಚೀನಾ ಮೇಲೆ ಶೇ. 10ರ ತೆರಿಗೆಗೆ ಪರಿಶೀಲನೆ : ಟ್ರಂಪ್

ವಾಷಿಂಗ್ಟನ್, ಜ.22- ಬರುವ ಫೆಬ್ರವರಿ ಒಂದರಿಂದ ಚೀನಾದಿಂದ ಆಮದಾಗುವ ಸರಕುಗಳ ಮೇಲೆ ಶೇಕಡಾ 10ರಷ್ಟು ತೆರಿಗೆ ಹೇರಲು ಪರಿಶೀಲಿಸುತ್ತಿರುವದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಚೀನಾ ಅಪಾಯಕಾರಿ ಫೆಂಟನೈನ್ ಮಾದಕವನ್ನು ಮೆಕ್ಸಿಕೋ ಹಾಗೂ ಕೆನಡಾಗಳಿಗೆ ಕಳಿಸುತ್ತಿದೆ. ಇದನ್ನು ತಡೆಯಲು ತೆರಿಗೆ ಹೇರ ಲಾಗುವುದು ಎಂದವರು ತಿಳಿಸಿದ್ದಾರೆ. ಫೆಂಟನೈಲ್ ಅತ್ಯಂತ ವ್ಯಸನಕಾರಿ ಮಾದಕವಾಗಿದೆ. ವಿಶ್ವದಾದ್ಯಂತ ಇದರ ಪೂರೈಕೆ ಜಾಲವಿದೆ. ಇದಕ್ಕೆ ಅಗತ್ಯವಾದ ರಾಸಾಯನಿಕ ವಸ್ತುಗಳನ್ನು ಉತ್ಪಾದಿಸುವ ಕಂಪನಿಗಳು ಚೀನಾದಲ್ಲಿ ಇವೆ ಎಂದು ಅಮೆರಿಕದ ಔಷಧ ನಿಯಂತ್ರಕರು ತಿಳಿಸಿದ್ದರು.

ಅವರು ಫೆಂಟಾನೈಲ್ ಅನ್ನು ಮೆಕ್ಸಿಕೋ ಮತ್ತು ಕೆನಡಾಗಳಿಗೆ ರವಾನಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ತೆರಿಗೆ ಹೇರಲು ಪರಿಶೀಲಿಸುತ್ತಿರುವದಾಗಿ ಟ್ರಂಪ್ ಹೇಳಿದ್ದಾರೆ.

ಟ್ರಂಪ್ ತಮ್ಮ ಮೊದಲ ಅವಧಿಯಲ್ಲಿ ಚೀನಾದಿಂದ ಆಮದಾಗುವ ಸರಕುಗಳ ಮೇಲೆ 300 ಶತಕೋಟಿ ಡಾಲರ್ ತೆರಿಗೆ ಹೇರಿದ್ದರು. ಇದಕ್ಕೆ ಹೆಚ್ಚಿನದಾಗಿ ಶೇಕಡ ಹತ್ತರ ತೆರಿಗೆ ವಿಧಿಸಲಾಗುವುದು ಎಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ವರದಿ ಮಾಡಿದೆ.

ಈ ಹಿಂದಿನ ಅಧ್ಯಕ್ಷ ಜೋ ಬಿಡೆನ್ ಸಹ ಚೀನಾದ ಎಲೆಕ್ಟ್ರಿಕ್ ವಾಹನ, ಸೆಮಿಕಂಡಕ್ಟರ್ ಇತ್ಯಾದಿಗಳ ಮೇಲೆ ಹೆಚ್ಚುವರಿ ತೆರಿಗೆ ಹೇರಿದ್ದರು.

## ಫೈನಾನ್ಸ್ ವಿರುದ್ಧ ಕ್ರಮಕ್ಕೆ ಸೂಚನೆ

**(1ನೇ ಪುಟದಿಂದ)** ಕಾಂಗ್ರೆಸ್‌ನವರು ಸ್ವಾತಂತ್ರ್ಯ ಹೋರಾಟದಲ್ಲಿ ತ್ಯಾಗ ಮಾಡಿದ್ದಾರೆ, ಅಂತಹ ತ್ಯಾಗ, ಬಲಿದಾನ ಈಗಿನ ಆಧುನಿಕ ಸಮಾಜದಲ್ಲಿ ಕಡಿಮೆಯಾಗಿದೆ ಎಂಬ ಅರ್ಥದಲ್ಲಿ ಹೇಳಿರಬಹುದು.

ಕಾಂಗ್ರೆಸ್‌ನಲ್ಲಿ ಮಾತ್ರ ತ್ಯಾಗ ಕಡಿಮೆಯಾಗಿಲ್ಲ, ಇಡೀ ಸಮಾಜದಲ್ಲಿ ತ್ಯಾಗ ಮನೋಭಾವ ಕಡಿಮೆಯಾಗಿದೆ.

ಸ್ವಾಭಾವಿಕವಾಗಿ, ಕಾಂಗ್ರೆಸ್‌ನಲ್ಲೂ ತ್ಯಾಗ ಮನೋಭಾವ ಕಡಿಮೆಯಾಗಿದೆ, ಉಳಿದ ರಾಜಕೀಯ ವಿಚಾರಗಳ ಬಗ್ಗೆ ನಾನು ಮಾತನಾಡುವುದಿಲ್ಲ ಎಂದು ಕೆಲವು ಪ್ರಶ್ನೆಗಳಿಂದ ಜಾರಿಕೊಂಡರು.

## ಅಧ್ಯಕ್ಷ ಸ್ಥಾನ ತಿರಸ್ಕರಿಸಿದ ಹಿರೇಮಠ

**(1ನೇ ಪುಟದಿಂದ)** ಇದ್ದಾರೆ.ಹೀಗಿರುವಾಗ ಈ ಗೌರವ ಸ್ಥಾನವನ್ನು ನಾನು ಅಲಂಕರಿಸುವ ಇಚ್ಛೆ ನನಗಿಲ್ಲ.ನಾನು ಇನ್ನು ಸಾಹಿತ್ಯಿಕವಾಗಿ ಬಹಳ ಕೆಲಸ ಮಾಡಬೇಕಾಗಿದೆ. ದಯವಿಟ್ಟು ಅನ್ಯತಾ ಭಾವಿಸಬೇಡಿ ಎಂದು ಜಿಲ್ಲಾ ಕಸಾಪ ಅಧ್ಯಕ್ಷರಿಗೆ, ತಾಲ್ಲೂಕು ಕಸಾಪ ಅಧ್ಯಕ್ಷರಿಗೆ ಹಾಗೂ ಸಾಹಿತಿಗಳಿಗೆ ವಿನಂತಿಸಿದ್ದಾರೆ. ಡಾ.ಗಂಗಾಧರಯ್ಯ ಹಿರೇಮಠ ಅವರ 30ಕ್ಕೂ ಹೆಚ್ಚು ಪುಸ್ತಕಗಳ ಪ್ರಕಟಣೆ ಹಾಗೂ 200 ಕ್ಕೂ ಹೆಚ್ಚು ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.ಇಂತವರು ಈ ಗೌರವ ಸ್ಥಾನವನ್ನು ಪಡೆಯದೇ ತಿರಸ್ಕರಿಸಿರುವುದು ಆತ್ಮೀಯ ವಲಯದಲ್ಲಿ ಬೇಸರ ಮೂಡಿಸಿದೆ.

## ಸಕ್ಕರೆ ನಾಡಲ್ಲಿ ಕೃಷಿ ವಿವಿ : ಸಿಎಂಗೆ ಮಂಡ್ಯ ಜನಪ್ರತಿನಿಧಿಗಳ ಅಭಿನಂದನೆ



ಬೆಂಗಳೂರು, ಜ. 22- ಕಾವೇರಿ ಕೊಳ್ಳ ಪ್ರಾಂತ್ಯದ ಸಕ್ಕರೆ ನಾಡಿನಲ್ಲಿ ಕೃಷಿ ವಿಶ್ವವಿದ್ಯಾಲಯ ಆರಂಭಿಸಲು ಅನುವು ಮಾಡಿಕೊಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಶಿವಕುಮಾರ್ ಅವರಿಗೆ ಮಂಡ್ಯ ಜಿಲ್ಲಾ ಜನಪ್ರತಿನಿಧಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ಜಿಲ್ಲಾ ಕಾಂಗ್ರೆಸ್ ಶಾಸಕರು, ಮುಖಂಡರ ನಿಯೋಗ, ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರನ್ನು ಗೃಹ ಕಚೇರಿ ಕೃಷ್ಣಾದಲ್ಲಿ ಭೇಟಿಯಾಗಿ ಕೃತಜ್ಞತೆ ಸಲ್ಲಿಸಿತು.

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಸ್ಥಾಪನೆಗೆ ಅನುಮತಿ ನೀಡಿದ್ದಲ್ಲದೆ, ಮಂಡ್ಯ ಸಕ್ಕರೆ ಕಾರ್ಖಾನೆ ಕಳೆದ 24 ವರ್ಷಗಳಿಂದ ಬಾಕಿ ಉಳಿಸಿಕೊಂಡಿದ್ದ 52 ಕೋಟಿ ರೂ. ವಿದ್ಯುತ್ ಬಾಕಿಯನ್ನು ಕಳೆದ ಸಚಿವ ಸಂಪುಟ ಸಭೆಯಲ್ಲಿ ಮನ್ನಾ ಮಾಡಿರುವುದಕ್ಕೂ ಪ್ರತಿನಿಧಿಗಳು ಅಭಿನಂದನೆ ಸಲ್ಲಿಸಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್.ಪಟೇಲ್ ಬಡಾವಣೆ ದಕ್ಷಿಣ 40x60, 20x30 ವಾಜಪೇಯಿ ಬಡಾವಣೆ ಪೂರ್ವ + ದಕ್ಷಿಣ ಕಾರ್ನರ್ 50x50 ಎಸ್.ಎಸ್. 'ಎ' ಬ್ಲಾಕ್, ದಕ್ಷಿಣ 30x50 (ಕವಿ ಹೋಟೆಲ್ ಹತ್ತಿರ)
ಐಗೂರು ವಿಜಯಕುಮಾರ್
99457 02495

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ, ಹೊಸ ಬನಶಂಕರಿ ಬಡಾವಣೆಯಲ್ಲಿ 30x40 ಪಶ್ಚಿಮ, 40 ಅಡಿ ರಸ್ತೆಗೆ ಹೊಂದಿಕೊಂಡು ಆಂಜನೇಯ ಬಡಾವಣೆಯಲ್ಲಿ 30x50 ಉತ್ತರ, ವಿನಾಯಕ ಬಡಾವಣೆಯಲ್ಲಿ 30x50 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟು ಮಾರಾಟಕ್ಕಿದೆ**
ಜಿ.ಎಂ.ಐ.ಟಿ. ಕಾಲೇಜು ಹಿಂಭಾಗ 30x40 ಅಳತೆಯ ಸೈಟು ಮಾರಾಟಕ್ಕಿದೆ.
ಮೊ: 98443 95959

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಡ್ರೈವಿಂಗ್ ಲೈಸೆನ್ಸ್ ಹಾಗೂ ದ್ವಿಚಕ್ರವಾಹನ ಹೊಂದಿರುವ ಕಾರ್ ಡ್ರೈವರ್ ಬೇಕಾಗಿದ್ದಾರೆ. (ಮೇಲ್ಕಂಡ ನಂಬರ್‌ಗೆ ಈ ಮೊದಲು ಕರೆ ಮಾಡಿದವರು ಪುನಃ ಕರೆ ಮಾಡಬೇಡಿ)
94486 56091

**ಓಂ ವರಸಿದ್ದಿ ವಿನಾಯಕ**
ದಾವಣಗೆರೆ ಕ್ಲೌಡ್ ಕಿಚನ್ ವೆಜ್ ಅಡುಗೆ ಮಾಡುತ್ತೇವೆ ಮತ್ತು ನೌಕರಿಗೆ ಹೋಗುವವರು ಮತ್ತು ಪಿಜಿಯಲ್ಲಿ ಇರುವವರಿಗೆ ಅಲ್ಲಿಗೇ ಊಟ ತಯಾರಿಸಿ ಕಳಿಸುತ್ತೇವೆ. ನೀವುಗಳು ತಿಂಗಳಿಗೊಮ್ಮೆಯಾದರೂ ಪೇಮೆಂಟ್ ಮಾಡಬಹುದು.
91102 74329

**ಮೊರಾರ್ಜಿ ಶಾಲೆಗಳಿಗೆ ತರಬೇತಿ**
ಮೊರಾರ್ಜಿ ಶಾಲೆಗಳಿಗೆ ಇದೇ ಶುಕ್ರವಾರ (24.01.2025) ರಿಂದ ಪ್ರತಿ ದಿನ ಸಂಜೆ 6 ರಿಂದ 9 ರವರೆಗೆ ತರಬೇತಿ ಇರುತ್ತದೆ. ಇದಲ್ಲದೆ ನಮ್ಮಲ್ಲಿ ಇದ್ದು ಈ ಮೇಲಿನ ಶಾಲೆಗಳಿಗೆ ಓದಲು ಹಾಸ್ಟೆಲ್‌ನ ವ್ಯವಸ್ಥೆ ಸಹ ಇರುತ್ತದೆ. ತರಬೇತಿ ನೀಡುವವರು **ಶ್ರೀ ಸುರೇಶ್ ಪಿ. ಮುರುಗಿ.** (M.sc, B.Ed)
99028 24909, 98447 48763

**ಬೇಕಾಗಿದ್ದಾರೆ**
ದಾವಣಗೆರೆ ಹೊಸ ಬಸ್ ನಿಲ್ದಾಣ ಹಿಂಭಾಗದಲ್ಲಿರುವ ಪ್ರತಿಷ್ಠಿತ ಬಾರ್ & ರೆಸ್ಟೋರೆಂಟ್‌ನಲ್ಲಿ ವೆಂಡರ್ ಕೆಲಸಕ್ಕಾಗಿ ಉತ್ಸಾಹಿ ಯುವಕರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಊಟ, ವಸತಿ, ಉಚಿತವಾಗಿ ನೀಡಲಾಗುವುದು. ಆಸಕ್ತರು ಸಂಪರ್ಕಿಸಿ. **ಸಂತೋಷ, ಮಾಲೀಕರು.**
98442 99666

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x40, ಅಕ್ಕ-ಪಕ್ಕ, ಹೊಸ ಬನಶಂಕರಿ ಬಡಾವಣೆ ಪೂರ್ವ 40x60 ಅಕ್ಕ-ಪಕ್ಕ, 30x50 ಅಕ್ಕ-ಪಕ್ಕ, ಪಶ್ಚಿಮ 80x70 ವಿನಾಯಕ ಬಡಾವಣೆ 40x60 ಅಕ್ಕ-ಪಕ್ಕ (ಹಿಂದೆ-ಮುಂದೆ 4 ಸೈಟುಗಳು) ಪೂರ್ವ ಮತ್ತು ಪಶ್ಚಿಮ ರಸ್ತೆ ಉತ್ತರ 40x85, 40x60
ಐಗೂರು ವಿಜಯಕುಮಾರ್
99457 02495

**ಬೇಕಾಗಿದ್ದಾರೆ**
ಸೇಲ್ಸ್ ಎಕ್ಸಿಕ್ಯೂಟಿವ್
ವಿದ್ಯಾರ್ಹತೆ : ಡಿಪ್ಲೋಮಾ/ಯಾವುದೇ ಪದವಿ. ವಯಸ್ಸು: 35 ವರ್ಷದ ಒಳಗೆ
ವಿಳಾಸ : **ವಿಜಯ ಆಟೋ ಸೇಲ್ಸ್ ಅಂಡ್ ಸರ್ವೀಸ್,** ಡಿಸಿ ಆಫೀಸ್ ಹತ್ತಿರ ಪಿಬಿ ರೋಡ್ ರೋಡ್ ದಾವಣಗೆರೆ.
94480 70098, 90712 65655

**ರೆಸ್ಟೋರೆಂಟ್‌ನಲ್ಲಿ ಕೆಲಸಗಾರರು ಬೇಕಾಗಿದ್ದಾರೆ**
ಮ್ಯಾನೇಜರ್, ಸೂಪರ್ ವೈಜರ್, ಆರ್ಡರ್ ತೆಗೆದುಕೊಳ್ಳಲು ಹುಡುಗರು ಬೇಕಾಗಿದ್ದಾರೆ. ವಸತಿ ಸೌಲಭ್ಯವಿರುತ್ತದೆ. (ಅನುಭವವಿರುವವರಿಗೆ ಮೊದಲ ಆದ್ಯತೆ)
94812 47552

**ಬೇಕಾಗಿದ್ದಾರೆ**
ಡಿಪ್ಲೋಮಾ ಸಿವಿಲ್ ಅಥವಾ ಬಿ.ಇ. ಸಿವಿಲ್ ಕೋರ್ಸ್ ಮಾಡಿರುವ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.
94488 72778
ಭೇಟಿ ಸಮಯ : ಬೆಳಿಗ್ಗೆ 10.30 ರಿಂದ ಸಂಜೆ 5.30 ರವರೆಗೆ.

**ಬೇಕಾಗಿದ್ದಾರೆ**
ಶ್ರೀ ಅನ್ನಪೂರ್ಣೇಶ್ವರಿ ಟಿಫಿನ್ ಸೆಂಟರ್‌ಗೆ ಅಡುಗೆ ಭಟ್ಟರು ಬೇಕಾಗಿದ್ದಾರೆ.
73495 44131

**ಬೇಕಾಗಿದ್ದಾರೆ**
ಎಸ್‌ಬಿಎಂ ಬ್ಯಾಂಕ್ ಎದುರು ಮಂಡಿಪೇಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
99162 36521

**WANTED**
* Accountant (Male or female) Salary 13-15k
* Watchman with family, only veg
Contact with bio data
SAMRUDDHI PLY & HARDWARE
Near Laxmi floor mills , Davangere.
Dinesh Jain - 99803 39333

**CCTV ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
Age : 20-25 Years
Address :
VAHIN GROUPS
3096, Bapuji high school road, MCC `B' Block, Davanagere.
93805 83672

**ಕಾಡು ಬೆಳೆಸಿ ನಾಡು ಉಳಿಸಿ**

**ಮನೆ ಮಾರಾಟಕ್ಕಿದೆ**
30/30 ಅಳತೆಯ ಪಶ್ಚಿಮ ದಿಕ್ಕಿನ 3 BHK ಡುಪ್ಲೆಕ್ಸ್ ಮನೆ ಮಾರಾಟಕ್ಕಿದೆ ನಿಜಲಿಂಗಪ್ಪ ಬಡಾವಣೆ. ಸಂಪರ್ಕಿಸಿ
96068 50128
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ಶೀಘ್ರ ಮದುವೆಗೆ**
ಸ್ವಂತ ವ್ಯವಹಾರ, ಹಿಂದೂ ಯುವಕ, ವಯಸ್ಸು : 32, ಶಿಕ್ಷಣ B.A., B.Ed., ಸುಂದರ ವಧು ಹುಡುಕಿ ಕೊಡಲು ಶೀಘ್ರ ಕಲ್ಯಾಣಕ್ಕೆ ಮದುವೆ ಸಹಾಯಕರು ಬೇಕಾಗಿದ್ದಾರೆ. ಮದುವೆ ದಿನದಂದು ಸಹಾಯ ಮಾಡಿದವರಿಗೆ 20,000/- ರೂ. ಗೌರವ ಧನ ನೀಡಲಾಗುವುದು. ದಾವಣಗೆರೆ ನಗರ.
99456 82243

**ಕಛೇರಿ ಕೆಲಸ**
ದೂರವಾಣಿ ಕರೆ ಸ್ವೀಕರಿಸಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಊಟ, ವಸತಿ ಉಚಿತವಾಗಿ ನೀಡಲಾಗುವುದು. ತಿಂಗಳ ಸಂಬಳ 8,000/- ಆಸಕ್ತಿ ಇದ್ದವರು ಸಂಪರ್ಕಿಸಿ
97433 67767

**ಕೆಲಸಗಾರರು ಬೇಕಾಗಿದ್ದಾರೆ**
ಹೋಟೆಲ್ ಉದ್ಯಮಕ್ಕೆ ಕೆಲಸಗಾರರು ಬೇಕಾಗಿದ್ದಾರೆ.
70190 51306

**ಮಳಿಗೆ ಬಾಡಿಗೆಗೆ ಇದೆ**
35.5x13.5 (478 Sqft) ಇರುವ ಮಳಿಗೆ ಹೆಲ್ತ್ ಕ್ಲಿನಿಕ್, ಫೈನಾನ್ಸ್ & ಗಾರ್ಮೆಂಟ್ಸ್‌ಗೆ ಮತ್ತು ಇತರೆಗಳಿಗೆ ಸೂಕ್ತವಾಗಿದೆ. ಎಂಸಿಸಿ 'ಎ' ಬ್ಲಾಕ್, 10ನೇ ಮೇನ್, 2ನೇ ಕ್ರಾಸ್.
94486 30214

**ಬೇಕಾಗಿದ್ದಾರೆ**
ನಮ್ಮ ಕಾಫೀ ಶಾಪ್‌ನಲ್ಲಿ ಮತ್ತು ಕಾಫೀ ಕೌಂಟರ್‌ಗಳಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿವುಳ್ಳವರು ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**CHANGE OF NAME**
RASHIDA BANU (old name) D/o ABDUL GAFFAR Resident of # 98/3, 2nd main, 5th cross, Near MAS Shamiyana, Davangere - 577 001. Davangere Dist. Karnataka Has Changed my name as RASHEEDA BANU Vide affidavit dated 22.01.2025 sworn before Notary. I.P. Brahmakumar, Davangere. Henceforth all my transactions and dealings will be in my new name RASHEEDA BANU
Sd/- RASHEEDA BANU

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟ್ಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
94484 39639

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
96860 22969

**ಮನೆ ಬಾಡಿಗೆಗೆ ಇದೆ**
ಹೊಸ ಕೋರ್ಟ್ ಹಿಂಭಾಗ ಎ ಬ್ಲಾಕ್ 5ನೇ ಕ್ರಾಸ್ ಪಾರ್ಕ್ ಬಳಿ #21, 2ನೇ ಮಹಡಿ ಅಲ್ಲಿ 2 ಮನೆಗಳು ಬಾಡಿಗೆಗೆ ಇವೆ. ವಿಚಾರಿಸಿ
9901247050, 7204022829

# ಸಿಎಂ ಮಾಡಿ ಎಂದು ಕೇಳಲ್ಲ, ಸಣ್ಣ-ಪುಟ್ಟ ಅವಕಾಶಗಳನ್ನಾದರೂ ಕೊಡಿ



ಮಲೇಬೆನ್ನೂರಿನಲ್ಲಿನ ಶರಣ ಅಂಬಿಗರ ಚೌಡಯ್ಯನವರ ಜಯಂತಿಯಲ್ಲಿ ಗೌಡ್ರ ಮಂಜಣ್ಣ ಮನವಿ

ಮಲೇಬೆನ್ನೂರು, ಜ. 22- ಸಣ್ಣ ಪುಟ್ಟ ಅವಕಾಶಗಳನ್ನಾದರೂ ಗಂಗಾಮತ ಸಮಾಜಕ್ಕೆ ಎಲ್ಲಾ ಪಕ್ಷಗಳು ನೀಡಬೇಕೆಂದು ಪುರಸಭೆ ಸದಸ್ಯ ಗೌಡ್ರ ಮಂಜಣ್ಣ ಮನವಿ ಮಾಡಿದರು.

ಅವರು ಪಟ್ಟಣದ ಪುರಸಭೆಯಲ್ಲಿ ಹಮ್ಮಿಕೊಂಡಿದ್ದ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಾವು ಸಿಎಂ ಮಾಡಿ ಎಂದು ಕೇಳಲ್ಲ. ನಮ್ಮ ಸಮಾಜಕ್ಕೆ ಎಲ್ಲೆಲ್ಲಿ ಅವಕಾಶ ನೀಡಬೇಕು. ನಮ್ಮ ಸಮಾಜ ನಂಬಿದವರನ್ನು ಎಂದೂ ಕೈ ಬಿಡುವುದಿಲ್ಲ. ನಾವು ಅಂಬಿಗರ ಚೌಡಯ್ಯನವರಂತೆ ನೇರವಾಗಿ, ನಿಷ್ಠೂರವಾಗಿ ಮಾತನಾಡುತ್ತೇವೆ. ಒಟ್ಟಾರೆ ಸಮಾಜಕ್ಕೆ ಒಳಿತನ್ನೇ ಬಯಸುತ್ತೇವೆ ಎಂದು ಗೌಡ್ರ ಮಂಜಣ್ಣ ಹೇಳಿದರು.

ಪುರಸಭೆ ಸದಸ್ಯ ಸಾಬೀರ್ ಅಲಿ ಮಾತನಾಡಿ, ಶರಣರಲ್ಲೇ ಅತ್ಯಂತ ನಿಷ್ಠೂರವಾದಿ, ನೇರವಾದಿಯಾಗಿದ್ದವರು ವಚನಕಾರ ನಿಜ ಶರಣ ಅಂಬಿಗರ ಚೌಡಯ್ಯನವರು. ಅವರು ತುಂಬಿದ ಹೊಳೆಯಲ್ಲಿ ಹುಟ್ಟುಹಾಕುವ ಕೆಲಸ ಮಾಡುವುದರ ಜೊತೆಗೆ ಭವಸಾಗರದಲ್ಲೂ ಹುಟ್ಟುಹಾಕುವ ಕೌಶಲ್ಯ ಹೊಂದಿದ್ದರು ಎಂದರು.

ಗಂಗಾಮತ ಸಮಾಜದ ಹೋಬಳಿ ಘಟಕದ ಅಧ್ಯಕ್ಷ ಪವನ್‌ಕುಮಾರ್ ಮಾತನಾಡಿ, ಅಂಬಿಗರ ಚೌಡಯ್ಯನವರು ತಮ್ಮ ಕಠೋರವಾದ ವಚನಗಳಿಂದಾಗಿ ನಿಜ ಶರಣರಾದರು. ಚೌಡಯ್ಯ ದಾನ ಮಾಡಿದ ಪುರ ಗ್ರಾಮವನ್ನು ಚೌಡಯ್ಯದಾನಾಪುರ ಎನ್ನಲಾಗುತ್ತಿದೆ. ಅವರು ನಮ್ಮನ್ನು ಅಗಲಿ 905 ವರ್ಷಗಳಾಗಿದ್ದರೂ ಅವರು ಹಾಕಿಕೊಟ್ಟ ಮಾರ್ಗದರ್ಶನ ಸಮಾಜಕ್ಕೆ ದಾರಿದೀಪವಾಗಿದೆ ಎಂದರು.

ಪುರಸಭೆ ಮುಖ್ಯಾಧಿಕಾರಿ ಭಜಕ್ಕನವರ್ ಮಾತನಾಡಿ, ಶರಣರ ಜಯಂತಿ ಆಚರಣೆಗಳ ಜೊತೆಗೆ ಅವರ ಬಗ್ಗೆ ಮಕ್ಕಳಿಗೆ ತಿಳಿಸುವ ಕೆಲಸವನ್ನು ಪೋಷಕರು ಮಾಡಬೇಕೆಂದರು.

ಪಿಎಸಿಎಸ್ ಅಧ್ಯಕ್ಷ ಕೆ.ಪಿ. ಗಂಗಾಧರ್ ಮಾತನಾಡಿ, ಶರಣರ ಆಶಯಗಳನ್ನು ನಾವು ಜನ ಸಾಮಾನ್ಯರಿಗೂ ಮುಟ್ಟಿಸುವ ಕೆಲಸ ಮಾಡಿದಾಗ ಮಾತ್ರ ಸಮಾಜದಲ್ಲಿ ಶಾಂತಿ, ಸಾಮರಸ್ಯ, ಸಹಬಾಳ್ವೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ ಎಂದರು.

ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಬಿ. ಮಂಜುನಾಥ್, ಸದಸ್ಯರಾದ ಕೆ.ಜಿ. ಲೋಕೇಶ್, ನಯಾಜ್, ಮಾಜಿ ಸದಸ್ಯ ಬಿ. ಸುರೇಶ್, ಸಮಾಜದ ಹಿರಿಯರಾದ ಕಣ್ಣಾಳ್ ಪರಸಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿಕುಮಾರ್ ಮಾತನಾಡಿದರು.

ಗಂಗಾಮತ ಸಮಾಜದ ಮುಖಂಡ ಎಂ.ಎನ್. ಮಂಜುನಾಥ್ ಮಾತನಾಡಿ, ಸರ್ವರಿಗೂ ಲೇಸನ್ನೇ ಬಯಸಿದ ಶರಣರು, ದಾರ್ಶನಿಕರನ್ನು ಒಂದೊಂದು ಸಮಾಜಕ್ಕೆ ಸೀಮಿತಗೊಳಿಸಿರುವುದು ಬೇಸರದ ಸಂಗತಿ ಎಂದರು.

ಪುರಸಭೆ ಅಧ್ಯಕ್ಷ ಹನುಮಂತಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಪುರಸಭೆಯಲ್ಲಿ ಎಲ್ಲಾ ಶರಣರ, ದಾಸರ, ಕವಿಗಳ, ಮಹಾತ್ಮರ ಜಯಂತಿ ಆಚರಣೆ ಮೂಲಕ ಇಂದಿನ ಯುವ ಜನಾಂಗಕ್ಕೆ ಅವರ ಪರಿಚಯ ಮಾಡುವ ಕೆಲಸವನ್ನು ಮಾಡುತ್ತಿದ್ದೇವೆ ಎಂದರು.

ಪುರಸಭೆ ಉಪಾಧ್ಯಕ್ಷೆ ನಫ್ಸಿಯಾಬಾನು ಚಮನ್ ಷಾ, ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಭೋವಿ ಶಿವು, ಖಲೀಲ್, ಶಬ್ಬೀರ್ ಖಾನ್, ಎ. ಆರೀಫ್ ಅಲಿ, ಬಿ. ರಫೀಕ್ ಸಾಬ್, ಬಸವರಾಜ್ ದೊಡ್ಮನಿ, ಮಾಜಿ ಸದಸ್ಯರಾದ ಯೂಸೂಫ್ ಖಾನ್, ಪಿ.ಆರ್. ರಾಜು, ಪಿ. ಹೆಚ್. ಶಿವಕುಮಾರ್, ಎ.ಕೆ. ಲೋಕೇಶ್, ಮಾಸಣಗಿ ಶೇಖರಪ್ಪ, ಎಂ.ಬಿ. ರುಸ್ತುಂ, ಸಮಾಜದ ಮುಖಂಡರಾದ ಕಣ್ಣಾಳ್ ಹನುಮಂತಪ್ಪ, ಕಡೇಮನಿ ಕುಮಾರ್, ನಿಟ್ಟೂರು ರಾಮಚಂದ್ರಪ್ಪ, ಕಣ್ಣಾಳ್ ನಾಗರಾಜ್, ಕೆಂಚನಹಳ್ಳಿ ಮಹೇಶ್, ಮಲ್ಲನಾಯ್ಕನಹಳ್ಳಿ ಅಂಬರೀಶ್, ಕುಂಬಳೂರು ವಾಸುದೇವಮೂರ್ತಿ ಮತ್ತಿತರರು ಭಾಗವಹಿಸಿದ್ದರು.

## ಕುರುಹಿನಶೆಟ್ಟಿ ನೇಕಾರ ಸಮಾಜ ಸಂಘದಿಂದ ಪ್ರತಿಭಾ ಪುರಸ್ಕಾರ



ದಾವಣಗೆರೆ, ಜ. 22- ಕುರುಹಿನಶೆಟ್ಟಿ ನೇಕಾರ ಸಮಾಜ ಸಂಘ ಹಾಗೂ ಆರ್.ಎಲ್. ಹನುಮಂತಪ್ಪ ಚಾರಿಟೇಬಲ್ ಟ್ರಸ್ಟ್ ದಾವಣಗೆರೆ ಇವರ ಸಹಯೋಗದಲ್ಲಿ ಶ್ರೀ ನೀಲಕಂಠೇಶ್ವರ ದೇವಸ್ಥಾನದಲ್ಲಿ ಪ್ರತಿಭಾ ಪುರಸ್ಕಾರ ಮತ್ತು ಪ್ರೋತ್ಸಾಹ ಧನ ವಿತರಣೆ ಕಾರ್ಯಕ್ರಮ ನಡೆಯಿತು.

ಹತ್ತನೇ ತರಗತಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಉತ್ತಮ ಅಂಕಗಳನ್ನು ಪಡೆದ ದಾವಣಗೆರೆ ಜಿಲ್ಲೆಯ ಕುರುಹಿನಶೆಟ್ಟಿ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಆರ್.ಎಲ್. ಹನುಮಂತಪ್ಪ ಚಾರಿಟೇಬಲ್ ಟ್ರಸ್ಟ್‌ನ ಸಂಸ್ಥಾಪಕರು ದಾವಣಗೆರೆ ಕುರುಹಿನಶೆಟ್ಟಿ ಸಮಾಜದ ಅಧ್ಯಕ್ಷ ನಾಗಭೂಷಣ್, ಕಾರ್ಯದರ್ಶಿ ವಕೀಲ ಕೆ.ಎನ್. ಹನುಮಂತಪ್ಪ, ಕುರುಹಿನಶೆಟ್ಟಿ ಕೇಂದ್ರ ಸಂಘದ ಸಂಘಟನಾ ಕಾರ್ಯದರ್ಶಿ ವಿಠಲ್ ಅಮಾಸಿ ಸೇರಿದಂತೆ ಸಮಾಜ ಬಾಂಧವರು, ಪೋಷಕರು, ವಿದ್ಯಾರ್ಥಿಗಳಿಗಳು ಉಪಸ್ಥಿತರಿದ್ದರು.

## ಕೆಂಚನಹಳ್ಳಿ ಪಿಎಸಿಎಸ್ ಚುನಾವಣೆ : ಕೆ.ಹೆಚ್. ಮಹೇಶ್ ಸೇರಿ 12 ಜನ ಆಯ್ಕೆ



ಮಲೇಬೆನ್ನೂರು, ಜ. 22- ಕೆಂಚನಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ 11 ಜನ ನಿರ್ದೇಶಕರು ಚುನಾವಣೆಯಲ್ಲಿ ಮತ್ತು ಒಬ್ಬರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಾಲಗಾರರ ಕ್ಷೇತ್ರದಿಂದ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರೂ ಆದ ಕೆ.ಹೆಚ್. ಮಹೇಶ್ ಮತ್ತು ಕೆ.ಜಿ. ರೇವಣಸಿದ್ದಪ್ಪ, ಬುಳ್ಳಾಪುರದ ಎಂ.ಬಿ. ಶಿವಶಂಕರ್, ಟಿ.ಎಸ್. ಹನುಮಂತಪ್ಪ, ಬಿ.ಆರ್. ಪ್ರಭು, ಕುರುಬರಹಳ್ಳಿಯ ಸಿದ್ದಮ್ಮ ಡಿ. ನಿಂಗಪ್ಪ, ಕೆಂಚನಹಳ್ಳಿಯ ಎ.ಕೆ. ದಂಡ್ಯಪ್ಪ, ಮೀನಾಕ್ಷಮ್ಮ ರುದ್ರಮ್ಮ ವಟ್ಟಗಾನಹಳ್ಳಿಯ ವಸಂತಕುಮಾರ್ ಇವರುಗಳು, ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ಸಾಲಗಾರರಲ್ಲದ ಕ್ಷೇತ್ರದಿಂದ ಕೆಂಚನಹಳ್ಳಿಯ ಇಂಧೂದರ್ ನಿಟುವಳ್ಳಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಹಕಾರ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಸುನೀತಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

## ಸ್ನೇಹ ಮಹಿಳಾ ಬಳಗದ ವಾರ್ಷಿಕೋತ್ಸವ



ದಾವಣಗೆರೆ, ಜ. 22- ಸ್ನೇಹ ಮಹಿಳಾ ಬಳಗದ ವತಿಯಿಂದ ವಾರ್ಷಿಕೋತ್ಸವ ಮತ್ತು ಸಂಕ್ರಾಂತಿ ಹಬ್ಬವನ್ನು ಆಚರಿಸಲಾಯಿತು. ಆಜೀವ ಗೌರವ ಅಧ್ಯಕ್ಷರಾದ ಮಂಜುಳಾ ನಿಂಗಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಗೌರವ ಅಧ್ಯಕ್ಷರಾದ ಮಂಜುಳಾ ಬಸವಲಿಂಗಪ್ಪ ಹೊಸ ವರ್ಷದ ಹಾಗೂ ಮಕರ ಸಂಕ್ರಮಣದ ಬಗ್ಗೆ ಮಾತನಾಡಿದರು.

ಅಧ್ಯಕ್ಷರಾದ ಶೋಭಾ ರವಿ, ಕಾರ್ಯದರ್ಶಿ ನಾಗರತ್ನ ಮಹೇಶ್, ಖಜಾಂಚಿ ತುಳಸಿ ಡಾ. ಮಹೇಶ್ ಹಾಗೂ ಸದಸ್ಯರಾದ ರೇಖಾ ಸುದರ್ಶನ್, ನರ್ಮದಾ, ಉಮಾ ಎಸ್. ಮೂರ್ತಿ, ರಾಜೇಶ್ವರಿ ಏಕಬೋಟೆ, ಚೇತನ ಲಿಂಗರಾಜು, ನೇತ್ರ ವೆರ್ಣೇಕರ್, ಅನ್ನಪೂರ್ಣ ಮಹೇಂದ್ರಕರ್, ಲೀಲಾ, ಮಮತಾ, ಕವಿತಾ ಜೈನ್, ಸುಜಾತ ಮತ್ತು ಅನೇಕ ಮಹಿಳೆಯರು ಭಾಗವಹಿಸಿದ್ದರು. ಸದಸ್ಯರು ಸಂಕ್ರಾಂತಿ ನೃತ್ಯ, ಹಾಡುಗಳು ಸೇರಿದಂತೆ ಇನ್ನಿತರೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

## ಪುಟ್ಟರಾಜ ಗವಾಯಿಗಳ ಆಶ್ರಮದಲ್ಲಿ ಟಿ.ಆರ್. ಶಂಕರಪ್ಪ ಜನ್ಮದಿನ



ದಾವಣಗೆರೆ, ಜ.22- ನಗರದ ಬಾಡ ಕ್ರಾಸ್ ಬಳಿಯ ಶ್ರೀ ಪುಟ್ಟರಾಜ ಗವಾಯಿಗಳ ಆಶ್ರಮದಲ್ಲಿ ಬುಧವಾರ ಟಿ.ಆರ್. ಶಂಕರಪ್ಪ ಅವರ 75ನೇ ವರ್ಷದ ಜನ್ಮದಿನವನ್ನು ಸರಳವಾಗಿ ಆಚರಿಸಲಾಯಿತು.

ಆಶ್ರಮದ ಕಾರ್ಯದರ್ಶಿ ಕರಿಬಸಪ್ಪನವರು ಶಂಕರಪ್ಪ ಅವರಿಗೆ ಶುಭ ಹಾರೈಸಿ, ಆಶ್ರಮದ ವತಿಯಿಂದ ಸನ್ಮಾನಿಸಿದರು.

ಈ ವೇಳೆ ಸಿಂಗಪುರದ ಪರಮೇಶ್ವರಪ್ಪ, ಕುರ್ಕಿ ಕೆ.ಜಿ. ಬಸವರಾಜ್, ತರಳಬಾಳು ಬಡಾವಣೆಯ ಎ.ಆರ್. ನಾಗರಾಜ್ ಇದ್ದರು.

## ಶಸಾಪ ಸಮ್ಮೇಳನದಲ್ಲಿ ಕದಳಿ ಮಹಿಳಾ ವೇದಿಕೆಯಿಂದ ವಚನ ಗಾಯನ



ಚಿತ್ರದುರ್ಗ, ಜ. 22- ಇಲ್ಲಿನ ಶ್ರೀ ಮುರುಘರಾಜೇಂದ್ರ ಬೃಹನ್ಮಠ, ಅನುಭವ ಮಂಟಪದ ಆವರಣದಲ್ಲಿ ನಡೆದ 13 ನೇ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲಿ ದಾವಣಗೆರೆಯ ಕದಳಿ ಮಹಿಳಾ ವೇದಿಕೆ ವತಿಯಿಂದ ವಚನ ಗಾಯನ ನಡೆಯಿತು.

ಗುರುಗಳಾದ ರೇವಣಸಿದ್ದಪ್ಪ ಅವರ ಹಾರ್ಮೋನಿಯಂಗೆ ಜೋಶಿ ತಬಲಾ ಸಾಥ್ ನೀಡಿದರು.

# ಸಮಸಮಾಜ ಕಟ್ಟಲು ಯುವಕರು ಮುಂದಾಗಲಿ



**ಹೊಳಲ್ಕೆರೆಯಿಂದ ಉಳವಿಗೆ ಪಾದಯಾತ್ರೆ ಕಾರ್ಯಕ್ರಮದಲ್ಲಿ ಹೊಳಲ್ಕೆರೆ ಒಂಟಿಕಂಬ ಮಠದ ತಿಪ್ಪೇರುದ್ರ ಸ್ವಾಮೀಜಿ**

ಮಾಯಕೊಂಡ, ಜ. 22- ಶರಣ ಧರ್ಮ ಪಾಲಿಸಿ, ಸಮಸಮಾಜ ಕಟ್ಟಲು ಯುವಕರು ಮುಂದಾಗಬೇಕು ಎಂದು ಹೊಳಲ್ಕೆರೆ ಒಂಟಿಕಂಬ ಮಠದ ತಿಪ್ಪೇರುದ್ರ ಸ್ವಾಮೀಜಿ ಕರೆ ನೀಡಿದರು.

ಇಲ್ಲಿನ ಮೈಲಾರ ಲಿಂಗೇಶ್ವರ ದೇವಾಲಯದಲ್ಲಿ ನಡೆದ ಪಾದಯಾತ್ರೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶರಣರ ವಚನ ಸಂದೇಶ ಪಾಲಿಸಿದರೆ ಜನಜೀನದಲ್ಲಿ ಬದಲಾವಣೆ ತರುತ್ತದೆ. ಶರಣರು ವೇಶ್ಯೆಯರನ್ನೂ ಪರಿವರ್ತನೆ ಮಾಡಿದವರು. ಅನುಭವ ಮಂಟಪ ಸಮಾಜದಲ್ಲಿ ದಮನಿತರಾದ ಕಾಯಕ ಜೀವಿಗಳಿಂದಲೂ ವಚನ ಬರೆಯಿಸಿತು. ಬಸವಣ್ಣನವರ ಬದುಕೇ ಒಂದು ಆದರ್ಶ. ಜಾತೀಯತೆ ತೊಲಗಬೇಕು. ಬಸವ ಧರ್ಮ ಎಲ್ಲರ ಧರ್ಮ ಇದಕ್ಕೆ ಜಾತಿ ಲೇಪನ ಸಲ್ಲದು. ಕನ್ನಡದ ಮೊದಲ ವೈಚಾರಿಕ ಪಂಥವೇ ಶರಣ ಧರ್ಮ. ಬಸವಣ್ಣ ವೇದಕಾಲದಿಂದಲೂ ನಡೆದ ಸ್ತ್ರೀ ಶೋಷಣೆ ವಿರುದ್ಧ ಧ್ವನಿ ಎತ್ತಿದರು. ಬ್ರಾಹ್ಮಣ ಮತ್ತು ದಲಿತರ ವಿವಾಹ ಮಾಡಿದ್ದನ್ನು ಪಟ್ಟಭದ್ರರು ಸಹಿಸದ ಕಾರಣ ಬಸವಣ್ಣ ಪದವಿ ತ್ಯಜಿಸಬೇಕಾಯಿತು, ಶರಣರ ಕಗ್ಗೊಲೆ ನಡೆಯಿತು. ಇನ್ನಾದರೂ ಬಸವ ತತ್ವ ಮತ್ತು ವಚನ ಸಾಹಿತ್ಯ ಉಳಿಸಿ, ಸಮಸಮಾಜ ಕಟ್ಟಲು ಯುವಕರು ಮುಂದಾಗಬೇಕು ಎಂದು ಕರೆ ನೀಡಿದರು.

ಶರಣ ಕ್ರಾಂತಿ ಬಳಿಕ ವಚನ ಗ್ರಂಥಗಳನ್ನು ಉಳವಿಗೆ ಸಾಗಿಸಿ, ಸಂರಕ್ಷಿಸಿ ಇಡಲಾಯಿತು. ಹೀಗಾಗಿ ಹೊಳಲ್ಕೆರೆಯಿಂದ ಉಳವಿಗೆ ಪಾದಯಾತ್ರೆ ಹಮ್ಮಿಕೊಂಡಿದ್ದೇವೆ ಎಂದು ಮಾಹಿತಿ ನೀಡಿದರು.

ಉಪನ್ಯಾಸಕ ಬಿ.ಆರ್. ಮಹಂತೇಶ್, ಬಸವಣ್ಣನೇ ಜಗತ್ತಿಗೆ ಒಂದು ಬೆಳಕು. ನಾವಾದರೂ ಪ್ಲಾಸ್ಟಿಕ್, ರಾಸಾಯನಿಕ ಬಳಕೆ ಕಡಿಮೆ ಮಾಡಬೇಕು. ಪರಿಸರ ರಕ್ಷಣೆಗೆ ನಮ್ಮಿಂದಲೇ ಮೊದಲ ಹೆಜ್ಜೆ ಆರಂಭವಾಗಬೇಕು. ಬಸವಣ್ಣ ಹನ್ನೆರಡನೇ ಶತಮಾನದಲ್ಲಿಯೇ ಸಮಾಜದ ಪರಿವರ್ತನೆಗೆ ಚಿಂತಿಸಿದವರು. ಸಮಸಮಾಜದ ನಿರ್ಮಾಣಕ್ಕೆ ಬಸವ ತತ್ವ ಅತ್ಯವಶ್ಯ ಎಂದರು.

ಪರಿಸರ ಚಿಂತಕ ಮಲ್ಲಿಕಾರ್ಜುನ ಸ್ವಾಮಿ, ಮನೆಗಳಿಗೆ ಹಿತ್ತಲು ವ್ಯವಸ್ಥೆ ಇದ್ದದ್ದರಿಂದ ಆರೋಗ್ಯ ಚೆನ್ನಾಗಿತ್ತು. ಆಧುನಿಕತೆಯ ಗೀಳಿನಿಂದಾಗಿ ಪರಿಸರ ನಾಶ ಮಾಡುತ್ತಿದ್ದೇವೆ. ವಾಹನದ ಹೊಗೆಯಿಂದಾಗಿ ವಾಯು ಮಾಲಿನ್ಯ ಹೆಚ್ಚಿದೆ. ಕಳೆನಾಶಕದಿಂದಾಗಿ ಅಣು ಜೀವಿಗಳು ಸಾಯುತ್ತವೆ. ಅವಶ್ಯವಿದ್ದಷ್ಟು ರಸಗೊಬ್ಬರ ಬಳಸಬೇಕು. ಪರಿಸರದ ಜಾಗೃತಿ ಮೂಡಿಸಲು ಎಲ್ಲರೂ ಮುಂದಾಗಬೇಕು ಎಂದರು.

ಗಾಯತ್ರಿ ಗ್ರಾಮೀಣ ವಿದ್ಯಾ ಸಂಸ್ಥೆಯ ಕೆ. ಪಿ. ಮರಿಯಾಚಾರ್, ಮುರುಘಾ ಮಠದ ಪರಂಪರೆಗೂ-ಮಾಯಕೊಂಡಕ್ಕೂ ಅವಿನಾಭಾವ ಸಂಬಂಧವಿದೆ. ಇಂಥವರ ಮಾರ್ಗದರ್ಶನ ಸಮಾಜಕ್ಕೆ ಅವಶ್ಯವಿದೆ ಎಂದರು. ಜಗದೀಶ್ ಸ್ವಾಗತಿಸಿ, ನಿರೂಪಿಸಿದರು. ಮಂಜುನಾಥ ಸನ್ಮಾನಿಸಿ, ವಂದಿಸಿದರು.

ಆವರಗೆರೆ ರುದ್ರಮುನಿ ಪರಿಸರ ಗೀತೆ ಹಾಡಿದರು. ತಾಲ್ಲೂಕು ಕೃಷಿಕ ಸಮಾಜದ ಸದಸ್ಯ ರುದ್ರೇಶ್, ಕನ್ನಡ ಯುವಶಕ್ತಿ ಕೇಂದ್ರದ ಪದಾಧಿಕಾರಿಗಳಾದ ಗುರುನಾಥ, ರವಿ, ಮಂಜುನಾಥ, ದಯಾನಂದ, ಲೋಕೇಶ್, ಪಾರಿ ಶಿವು, ಡಾಬಾ ನಾಗರಾಜ್, ನರಗನಹಳ್ಳಿ ಮಹಾಲಿಂಗಪ್ಪ, ಹೊನ್ನಾನಾಯಕನ ಹಳ್ಳಿ ಮಲ್ಲೇಶ್, ಬಾವಿಹಾಳ್ ಚಂದ್ರಣ್ಣ ಮತ್ತಿತರರಿದ್ದರು.

## ಕುಡಿಯುವ ನೀರು ಕಾಮಗಾರಿಗಳಲ್ಲಿ ಅವ್ಯವಹಾರ: ಕ್ರಮಕ್ಕೆ ಆಗ್ರಹ

ದಾವಣಗೆರೆ, ಜ. 22- 2023-24ನೇ ಸಾಲಿನಲ್ಲಿ ದಾವಣಗೆರೆ ತಾಲ್ಲೂಕಿನ ಸಮಸ್ಯಾತ್ಮಕ ಗ್ರಾಮಗಳಲ್ಲಿ ತುರ್ತು ಕುಡಿಯುವ ನೀರಿನ ಕಾಮಗಾರಿಗಳಲ್ಲಿ ಸುಮಾರು 87.45 ಲಕ್ಷ ರೂ. ಅವ್ಯವಹಾರ ನಡೆದಿರುವುದಾಗಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ -ಕರ್ನಾಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಕೆ.ಎ. ಓಬಳೇಶ್ ಆರೋಪಿಸಿದ್ದಾರೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಪಂಚಾಯ್ತಿ ಸಿಇಒ ಅವರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ದಾವಣಗೆರೆ ಇವರಿಗೆ 71 ಕಾಮಗಾರಿಗಳಿಗೆ ಕ್ರಿಯಾಯೋಜನೆಗೆ 87.45 ಲಕ್ಷ ರೂ. ಕಾರ್ಯಾದೇಶ ನೀಡಿದ್ದಾರೆ. ಈಅನುದಾನ ಸಂಪೂರ್ಣ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಹಿಂದಿನ ವರ್ಷಗಳ ಹಳೆಯ ಕಾಮಗಾರಿಗಳ ಕಡತಗಳನ್ನು ಬಳಸಿಕೊಂಡು ಅನುದಾನ ಪಡೆಯಲಾಗಿದೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪಂಚಾಯ್ತಿ ಸಿಇಒ ಅವರಿಗೆ ಮನವಿ ಮಾಡಿದ್ದರೂ, ಯಾವುದೇ ಕ್ರಮ ಕೈಗೊಂಡಿಲ್ಲ.

ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ನಾಲ್ವರು ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಲೋಕಾಯುಕ್ತರಿಗೆ ದೂರು ನೀಡಲಾಗಿದೆ ಎಂದು ತಿಳಿಸಿದರು. ಜಿಲ್ಲಾ ಪಂಚಾಯ್ತಿಯಲ್ಲಿ ಯಾವುದೇ ಸಿಸಿ ಟಿವಿಗಳು ಕಾರ್ಯ ನಿರ್ವಹಿಸುತ್ತಿಲ್ಲ. ಬಯೋಮೆಟ್ರಿಕ್ ಯಂತ್ರಗಳು ಹೆಸರಿಗೆ ಮಾತ್ರ ಇವೆ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿ ಹೋರಾಟ ನಡೆಸಲಾಗುವುದು ಎಂದರು.

## ವ್ಹೀಲಿಂಗ್ ಪುಂಡರ ಬಂಧನ : 2 ಬೈಕ್ ವಶ



ದಾವಣಗೆರೆ, ಜ.22- ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿ-48ರಲ್ಲಿ ಬೈಕ್ ವೀಲಿಂಗ್ ಮಾಡಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದು, ಎರಡು ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಬೈಕ್ ವ್ಹೀಲಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಭರಮಸಾಗರ ನಿವಾಸಿ ರಸೂಲ್, ದಾವಣಗೆರೆ ನಗರದ ಎಸ್‌ಓಜಿ ಕಾಲೋನಿಯ ನಿವಾಸಿ ಹಜರತ್ ಅಲಿ ಎಂಬುವವರನ್ನು ಬಂಧಿಸಲಾಗಿದೆ.

ಇನ್ನು ಮತ್ತೊಂದು ಬೈಕ್‌ನಲ್ಲಿ ತ್ರಿಬಲ್ ರೈಡಿಂಗ್ ಮಾಡುತ್ತಿದ್ದವರ ಮೇಲೆ ದಕ್ಷಿಣ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸ್ಪಿ ಉಮಾ ಪ್ರಶಾಂತ್, ಎಎಸ್ಪಿ-ಗಳಾದ ವಿಜಯ್ ಕುಮಾರ್ ಎಂ ಸಂತೋಷ್ ಮತ್ತು ಮಂಜುನಾಥ್, ನಗರದ ಡಿವೈಎಸ್ಪಿ ಶರಣಬಸವೇಶ್ವರ ಬಿ. ಭೀಮರಾವ್, ಟ್ರಾಫಿಕ್ ಇನ್ಸ್‌ಪೆಕ್ಟರ್ ಎನ್. ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ದಕ್ಷಿಣ ಸಂಚಾರಿ ಪೊಲೀಸ್ ಠಾಣೆಯ ಪಿಎಸ್‌ಐ ಶೈಲಜಾ ಅವರ ನೇತೃತ್ವದಲ್ಲಿ ಪಿಎಸ್‌ಐ ನಿರ್ಮಲ, ಎಎಸ್‌ಐ ಅಣ್ಣಯ್ಯ, ಸಿಬ್ಬಂದಿ ಕೆ. ನಾಗರಾಜ್, ಪ್ರವೀಣ್ ಕುಮಾರ್, ರವಿನಾಯಕ್, ಶಿವಮೂರ್ತಿ ನಾಯ್ಕ ಅವರ ತಂಡ ವಿಶೇಷ ಕಾರ್ಯಾಚರಣೆ ನಡೆಸಿ ಪ್ರಕರಣ ಬೇಧಿಸಿದ್ದಾರೆ.

# ಲಿಂ. ಸಿದ್ದಗಂಗಾ ಶ್ರೀಗಳಿಗೆ ಭಾರತ ರತ್ನ ನೀಡಲು ಆಗ್ರಹ



**ಲಿಂಗೈಕ್ಯ ಸಿದ್ದಗಂಗಾ ಶ್ರೀಗಳ ಸ್ಮರಣೆ ಸಮಾರಂಭದಲ್ಲಿ ದಿನೇಶ್ ಕೆ. ಶೆಟ್ಟಿ**

ದಾವಣಗೆರೆ, ಜ. 22 - ನಡೆದಾಡುವ ದೇವರು ಎಂದೇ ಹೆಸರಾಗಿರುವ ತ್ರಿವಿಧ ದಾಸೋಹಿ ಲಿಂಗೈಕ್ಯ ಸಿದ್ದಗಂಗಾ ಮಠದ ಡಾ. ಶಿವಕುಮಾರ ಮಹಾಸ್ವಾಮಿಗಳಿಗೆ ಕೇಂದ್ರ ಸರ್ಕಾರ ಮರಣೋತ್ತರ ಭಾರತ ರತ್ನ ಪ್ರಶಸ್ತಿ ನೀಡುವಂತೆ, ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಆಗ್ರಹಿಸಿದ್ದಾರೆ.

ಅವರಿಂದು ದಾವಣಗೆರೆ ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದ ಹರಳೆಣ್ಣೆ ಕೊಟ್ರುಬಸಪ್ಪ ವೃತ್ತದಲ್ಲಿ ಹಮ್ಮಿಕೊಂಡಿದ್ದ ತ್ರಿವಿಧ ದಾಸೋಹಿ ಲಿಂಗೈಕ್ಯ ಸಿದ್ದಗಂಗಾ ಮಠದ ಡಾ. ಶಿವಕುಮಾರ ಮಹಾಸ್ವಾಮಿಗಳ ಪುಣ್ಯಸ್ಮರಣೆ ಸಮಾರಂಭದಲ್ಲಿ ಭಾಗವಹಿಸಿ, ಅವರು ಮಾತನಾಡಿದರು.

ತ್ರಿವಿಧ ದಾಸೋಹಿ ಲಿಂಗೈಕ್ಯ ಸಿದ್ದಗಂಗಾ ಮಠದ ಡಾ. ಶಿವಕುಮಾರ ಮಹಾಸ್ವಾಮಿಗಳವರು ಅನ್ನ, ಆಶ್ರಯ, ಜ್ಞಾನದಂತಹ ದಾಸೋಹವನ್ನು ಯಾವುದೇ ಫಲಾಪೇಕ್ಷೆ ಇಲ್ಲದೇ ಮಾಡುತ್ತಾ, ಅವರ ಋಣವನ್ನು ನಾವು ಎಂದಿಗೂ ತೀರಿಸಲು ಸಾಧ್ಯವಿಲ್ಲ. ಅವರ ಸೇವೆಗೆ ದೇಶದ ಅತ್ಯುನ್ನತ ಗೌರವವಾದ ಭಾರತ ರತ್ನ ಪ್ರಶಸ್ತಿ ನೀಡಿದರೆ ಅವರಿಗೆ ಕನಿಷ್ಟ ಗೌರವವಾದರೂ ನೀಡಿದಂತಾಗಲಿದ್ದು, ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು.

ಮಹಿಳಾ ಕಾಂಗ್ರೆಸ್‌ನ ದ್ರಾಕ್ಷಾಯಣಮ್ಮ, ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್ ಮಾತನಾಡಿ, ಲಿಂಗೈಕ್ಯ ಸಿದ್ದಗಂಗಾ ಮಠದ ಡಾ. ಶಿವಕುಮಾರ ಮಹಾಸ್ವಾಮಿಗಳವರ ಸೇವೆಯನ್ನು ಸ್ಮರಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಕಾಂಗ್ರೆಸ್‌ನ ಮಂಗಳಮ್ಮ, ರಾಜೇಶ್ವರಿ, ಗೀತಾ ಚಂದ್ರಶೇಖರ್, ಕೇರಂ ಗಣೇಶ್, ಎಸ್. ರವಿ, ಮುಜಾಹಿದ್, ಸುರೇಶ್ ಜಾಧವ್, ಪ್ರವೀಣ್, ಗೋಪಾಲಕೃಷ್ಣ, ಪರಶುರಾಮ್, ಸತೀಶ್ ಶೆಟ್ಟಿ, ಯುವರಾಜ್ ಮತ್ತಿತರರಿದ್ದರು.

## ಜಗಳೂರು : ಇಂದು ದೇವದಾಸಿ ಸಮರ್ಪಣೆ ನಿಷೇಧ ಅರಿವು ಕಾರ್ಯಕ್ರಮ

ಜಗಳೂರು ತಾಲ್ಲೂಕಿನ ಸೊಕ್ಕೆ ಗ್ರಾಮ, ಚಿಕ್ಕಬಂಟನ ಹಳ್ಳಿಯ ಪ್ರತಿಭಾ ವಿಕಾಸ ವೇದಿಕೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ದೇವದಾಸಿ ಸಮರ್ಪಣೆ ನಿಷೇಧ ಕುರಿತು ಮಾಜಿ ದೇವದಾಸಿ ಮಹಿಳೆಯರಿಗೆ ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಾನಾಯ್ಕ ತಿಳಿಸಿದ್ದಾರೆ.


ALPHA ಬೇಕಾಗಿದ್ದಾರೆ

ಪ್ರತಿಷ್ಠಿತ ಬ್ಯೂಟಿ ಸಲೂನ್ ಅಂಡ್ ಸ್ಪಾ ಸಂಸ್ಥೆಗೆ ಶಿವಮೊಗ್ಗ-ದಾವಣಗೆರೆ ಮತ್ತು ಮಣಿಪಾಲ್ ಶಾಖೆಗಳಿಗೆ ಮ್ಯಾನೇಜರ್ ಮತ್ತು ರಿಸೆಪ್ಷನಿಸ್ಟ್ ಕೆಲಸಕ್ಕೆ ಬೇಕಾಗಿದ್ದಾರೆ.
(ಅನುಭವವಿದ್ದವರಿಗೆ ಆದ್ಯತೆ) ಸಂಬಳ : 15 ಸಾವಿರದಿಂದ

ಸಂಪರ್ಕಿಸಿ : 78995 74669

ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.ದಾವಣಗೆರೆ.



ಮಾನ್ಯ ಮತದಾರರೇ, ದಿನಾಂಕ : 24.01.2025ನೇ ಶುಕ್ರವಾರ ಬೆಳಿಗ್ಗೆ 9 ರಿಂದ ಸಂಜೆ 4ರವರೆಗೆ 5 ವರ್ಷಗಳ ಅವಧಿಗೆ ನಡೆಯಲಿರುವ ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪ್ ಸೊ.ಲಿ., ದಾವಣಗೆರೆ ಇದರ ಆಡಳಿತ ಮಂಡಳಿ ಸದಸ್ಯರ ಚುನಾವಣೆಗೆ **ಬಿ.ಸಿ. ಶಿವಲಿಂಗಪ್ಪ** ಆದ ನಾನು ಅಭ್ಯರ್ಥಿಯಾಗಿ ಸ್ಪರ್ಧಿಸಿರುತ್ತೇನೆ. ನನ್ನ ಗುರುತು **'ಡಿಶ್ ಎಂಟಿನಾ'** ಗುರುತಿಗೆ ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡಿ ನನ್ನನ್ನು ಜಯಶೀಲರನ್ನಾಗಿ ಮಾಡಿ ತಮ್ಮಗಳ ಸೇವೆ ಮತ್ತು ಬ್ಯಾಂಕ್ ಅಭಿವೃದ್ಧಿ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಸವಿನಯ ಪ್ರಾರ್ಥನೆ.

| ಕ್ರ.ಸಂ. | ನನ್ನ ಹೆಸರು | ಚಿನ್ಹೆ | ಗುರುತು |
|---|---|---|---|
| 09 | ಬಿ.ಸಿ. ಶಿವಲಿಂಗಪ್ಪ | | |

ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ. ದಾವಣಗೆರೆ.

ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ - 2025



ಮಾನ್ಯ ಮತದಾರರೇ, ದಿನಾಂಕ : 24.01.2025ನೇ ಶುಕ್ರವಾರ ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ 5 ವರ್ಷಗಳ ಅವಧಿಗೆ ನಡೆಯಲಿರುವ ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪ್ ಸೊ.ಲಿ., ದಾವಣಗೆರೆ ಇದರ ಆಡಳಿತ ಮಂಡಳಿ ಸದಸ್ಯರ ಚುನಾವಣೆಗೆ ಎಸ್. ರಾಮಚಂದ್ರ ರೆಡ್ಡಿ ಇವರ ಮೊಮ್ಮಗನಾದ **ಎಸ್. ಮಧುಕೃಷ್ಣ** ಆದ ನಾನು ಅಭ್ಯರ್ಥಿಯಾಗಿ ಸ್ಪರ್ಧಿಸಿರುತ್ತೇನೆ. ನನ್ನ **'ನೀರಿನ ನಲ್ಲಿ'** ಗುರುತಿಗೆ ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡಿ ನನ್ನನ್ನು ಜಯಶೀಲನನ್ನಾಗಿ ಮಾಡಿ ತಮ್ಮಗಳ ಸೇವೆ ಮತ್ತು ಬ್ಯಾಂಕ್ ಅಭಿವೃದ್ಧಿ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಸವಿನಯ ಪ್ರಾರ್ಥನೆ.

| ಕ್ರ.ಸಂ. | ನನ್ನ ಹೆಸರು | ಚಿನ್ಹೆ | ಗುರುತು |
|---|---|---|---|
| 04 | ಎಸ್. ಮಧುಕೃಷ್ಣ | | |

ಈ ಮೇಲ್ಕಂಡ ಗುರುತಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡುವುದರ ಮೂಲಕ ನನ್ನನ್ನು ಜಯಶೀಲನನ್ನಾಗಿ ಮಾಡಬೇಕಾಗಿ ಪ್ರಾರ್ಥನೆ.

ಸ್ಥಳ : ಆಡಳಿತ ಕಛೇರಿ , ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪ್. ಸೊಸೈಟಿ ಲಿ. 16ನೇ ಅಡ್ಡ ರಸ್ತೆ, 3ನೇ ಮುಖ್ಯರಸ್ತೆ, ಕೆಟಿಜೆ ನಗರ, ದಾವಣಗೆರೆ

ತಮ್ಮ ಸೇವಾಕಾಂಕ್ಷಿ, ಎಸ್. ಮಧುಕೃಷ್ಣ S/o ಎಸ್. ಕೃಷ್ಣಾರೆಡ್ಡಿ

ಹೃದಯಪೂರ್ವಕ ಕೃತಜ್ಞತೆಗಳು

ಹರಿಹರ ತಾಲ್ಲೂಕು ಕೊಂಡಜ್ಜಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ನಮ್ಮನ್ನು ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ಸಂಘದ ಎಲ್ಲಾ ನಿರ್ದೇಶಕರುಗಳಾದ
ನಿಖಿಲ್ ಆರ್. ಕೊಂಡಜ್ಜಿ,
ಎ.ಎಸ್. ಕರಿಬಸಪ್ಪ, ಬಿ. ಹನುಮಂತಪ್ಪ,
ಎನ್.ವೈ. ಹಾಲಪ್ಪ, ಟಿ. ಅಂಜಿನಮ್ಮ,
ಕೆ.ಹೆಚ್. ಗಣೇಶ್, ಜಿ.ಸಿ. ಮುನಿಯಪ್ಪ,
ಸೌಭಾಗ್ಯಮ್ಮ, ಟಿ.ಎಸ್. ಮುನಿಯಪ್ಪ
ಮತ್ತು ಮೃತ್ಯುಂಜಯ ಅವರುಗಳಿಗೆ ಹೃದಯಪೂರ್ವಕ ಕೃತಜ್ಞತೆಗಳು. ಈ ಸಂದರ್ಭದಲ್ಲಿ ಪ್ರತ್ಯಕ್ಷ-ಪರೋಕ್ಷವಾಗಿ ಸಹಕಾರ ನೀಡಿದ ಗ್ರಾಮದ ಮುಖಂಡರಿಗೂ, ಗ್ರಾಮಸ್ಥರಿಗೂ, ಸಂಘದ ಕಾರ್ಯದರ್ಶಿ ಹಾಗೂ ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳು.



ಎಂ. ಮಲ್ಲಿಕಾರ್ಜುನ (ಹೆಗಡೆ)
ಅಧ್ಯಕ್ಷರು



ಹೆಚ್. ಹನುಮಂತಪ್ಪ
ಉಪಾಧ್ಯಕ್ಷರು

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಕೊಂಡಜ್ಜಿ, ಹರಿಹರ ತಾ.

# ಇಂದು ಶಹಾಜಿರಾಜಿ ಬೌಂಸ್ಲೆ ಪುಣ್ಯಾರಾಧನೆ



## ಸಮಾಧಿ ಸ್ಥಳ ಅಭಿವೃದ್ಧಿಗೆ ಆಗ್ರಹ

ದಾವಣಗೆರೆ, ಜ. 22- ಚನ್ನಗಿರಿ ತಾಲ್ಲೂಕಿನ ಹೊದಿಗೆರೆ ಗ್ರಾಮದಲ್ಲಿರುವ ಶ್ರೀ ಶಹಾಜಿರಾಜಿ ಬೌಂಸ್ಲೆ ಅವರ ಸಮಾಧಿ ಸ್ಥಳವನ್ನು ಅಭಿವೃದ್ಧಿಗೊಳಿಸುವಂತೆ ದತ್ತಾಜಿ ಲಕ್ಷ್ಮಣ್ ನಲ್ವಾಡೆ ಒತ್ತಾಯಿಸಿದ್ದಾರೆ.

ಶಿವಾಜಿ ಮಹರಾಜರ ತಂದೆ ಷಹಾಜಿ ರಾಜೆ ಬೌಂಸ್ಲೆ ಅವರ ಆದರ್ಶಗಳು ಇಂದಿನ ಯುವಕರಿಗೆ ಪ್ರೇರಣೆಯಾಗಿವೆ. ಅವರ ಸಮಾಧಿ ಕರ್ನಾಟಕದಲ್ಲಿ ಅದರಲ್ಲೂ ದಾವಣಗೆರೆ ಜಿಲ್ಲೆಯಲ್ಲಿ ಇರುವುದು ಹೆಮ್ಮೆಯ ವಿಚಾರ ಎಂದರು.

ಇಲ್ಲಿಯವರೆಗೂ ಅವರ ಸಮಾಧಿ ಸ್ಥಳ ಅಭಿವೃದ್ಧಿಯಾಗಿಲ್ಲ. ಸಮಾಧಿಗೆ ಮೇಲ್ಛಾವಣಿ ಇಲ್ಲ ಎಂದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರ ಮತ್ತು ಸ್ಥಳೀಯ ಆಡಳಿತ ಸಮಾಧಿ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು. ಸಮಾಧಿ ಸ್ಥಳಕ್ಕೆ ಬಂದವರಿಗೆ ಜಾಗ ಖರೀದಿಸಿ ವಸತಿ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

**361ನೇ ಪುಣ್ಯಾರಾಧನೆ:** ಜ.23ರಂದು ಹೊದಿಗೆರೆ ಗ್ರಾಮದಲ್ಲಿರುವ ಸ್ಮಾರಕದ ಆವರಣದಲ್ಲಿ ಷಹಾಜಿರಾಜೆ ಅವರ 361ನೇ ಪುಣ್ಯಾರಾಧನೆ ಕಾರ್ಯಕ್ರಮ ಆಯೋಜಿಸ ಲಾಗಿದೆ ಎಂದು ವಿಜಯ್ ಜಾಧವ್ ತಿಳಿಸಿದರು.

ಬೆಳಿಗ್ಗೆ 11.30ಕ್ಕೆ ಜಗದ್ಗುರು ವೇದಾಂತಚಾರ್ಯ ಶ್ರೀ ಮಂಜುನಾಥ ಭಾರತಿ ಮಹಾಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಸ್ಮಾರಕ ಪೂಜೆ, ಆಶೀರ್ವಚನ ನಡೆಯಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸುನಿಲ್ ಜಂಗಮ ಸ್ವಾಮಿ, ಅಶ್ಲೋಜಿರಾವ್ ನಲ್ವಾಡೆ, ರೋಹಿತ್ ನಲ್ವಾಡೆ, ಗೋವಿಂದರಾವ್ ಬಿಜ್ಜಿ, ಪ್ರಶಾಂತ್ ರಾವ್ ಬೋಸ್ಲೆ ಇದ್ದರು.

# ಯುವಕರಿಗೆ ಸ್ವಾಮಿ ವಿವೇಕಾನಂದ ಮಾದರಿಯಾಗಲಿ



## ಮೇಯರ್ ಕೆ. ಚಮನ್‌ಸಾಬ್ ಕಿವಿ ಮಾತು

ದಾವಣಗೆರೆ, ಜ.22- ಸಿನಿಮಾ ನಟರು, ಕ್ರಿಕೆಟ್ ಆಟಗಾರರನ್ನು ಮಾದರಿ ವ್ಯಕ್ತಿಯಾಗಿ ಸ್ವೀಕರಿಸದೇ ಸ್ವಾಮಿ ವಿವೇಕಾನಂದ ಅವರಂತಹ ಸಂತರನ್ನು ಮಾದರಿಯಾಗಿ ಸ್ವೀಕರಿಸಿ ಎಂದು ಯುವಕರಿಗೆ ಪಾಲಿಕೆ ಮೇಯರ್ ಕೆ. ಚಮನ್‌ಸಾಬ್ ಕಿವಿ ಮಾತು ಹೇಳಿದರು.

ನಗರದ ಬಸಾಪುರದಲ್ಲಿನ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸುವುದು ಬಹಳ ಮುಖ್ಯ. ನಮ್ಮ ಮಕ್ಕಳು ಇಂಜಿನಿಯರ್, ಡಾಕ್ಟರ್ ಆಗಬೇಕು ಎಂದು ಮಕ್ಕಳಲ್ಲಿ ಒತ್ತಡ ಹೇರದೆ, ಮಕ್ಕಳ ಆಸಕ್ತಿಯ ಅನುಗುಣವಾಗಿ ಪಾಲಕರು ಶಿಕ್ಷಣ ನೀಡಲು ಮುಂದಾಗಬೇಕು ಎಂದರು.

ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ ಮಾತನಾಡಿ, ಒಂದು ಶಾಲಾ ವಾತಾವರಣ ಹೇಗಿರಬೇಕು ಅನ್ನುವುದಕ್ಕೆ ನಮ್ಮ ಬಸಾಪುರದ ಸರ್ಕಾರಿ ಪ್ರೌಢ ಶಾಲೆ ಹಾಗೂ ಪ್ರಾಥಮಿಕ ಶಾಲೆ ಮಾದರಿ ಆಗಬಹುದು. ಇಲ್ಲಿ ಗ್ರಾಮಸ್ಥರು ಹಾಗೂ ಶಿಕ್ಷಕ ವರ್ಗ ಒಟ್ಟಾಗಿ ಕಾರ್ಯ ನಿರ್ವಹಿಸುವುದರಿಂದ ಜನಪ್ರತಿನಿಧಿಗಳ ನೆರವು ಪಡೆದು ಶಾಲೆಯನ್ನು ಸುಸಜ್ಜಿತಗೊಳಿಸಿದ್ದಾರೆ ಎಂದರು.

ಜಿಲ್ಲೆಯ ಸುಮಾರು ಎಂಟನೂರು ಮಕ್ಕಳು ಪ್ರದರ್ಶನದಲ್ಲಿ ಭಾಗವಹಿಸಿ ನೃತ್ಯ, ಸಂಗೀತ, ಜಾನಪದ, ಪ್ರಬಂಧ ಮುಂತಾದ ಸ್ಪರ್ಧೆಗಳಲ್ಲಿ ತಮ್ಮ ಪ್ರತಿಭೆಗಳನ್ನು ಅನಾವರಣಗೊಳಿಸಿದರು.

ವೈಯಕ್ತಿ ಹಾಗೂ ಸಾಮೂಹಿಕ ಸ್ಪರ್ಧೆಗಳಾದ ಕಂಠಪಾಠ, ಧಾರ್ಮಿಕ ಪಠಣ, ದೇಶಭಕ್ತಿ ಗೀತೆ, ಪ್ರಬಂಧ ರಚನೆ, ಕಥೆ ಹೇಳುವುದು, ಚಿತ್ರಕಲೆ, ಅಭಿನಯಗೀತೆ, ಕ್ಲೇ ಮಾಡಲಿಂಗ್, ಭಕ್ತಿಗೀತೆ, ಆಶುಭಾಷಣ, ಕವನ ವಾಚನ, ಮಿಮಿಕ್ರಿ, ರಂಗೋಲಿ, ಗಝಲ್, ಭರತನಾಟ್ಯ, ಭಾವಗೀತೆ, ಹೀಗೆ 14 ವೈಯಕ್ತಿಕ ಸ್ಪರ್ಧೆಗಳು ನಡೆದವು. ಜಾನಪದ ನೃತ್ಯ, ಕ್ವಿಜ್, ಕವ್ವಾಲಿ ಸಾಮೂಹಿಕ ಸ್ಪರ್ಧೆ ನಡೆದವು.

ಈ ವೇಳೆ ಡಿಡಿಪಿಐ ಕೊಟ್ರೇಶ್, ದಕ್ಷಿಣ ವಲಯ ಬಿಇಓ ಪುಷ್ಪಲತಾ, ಪಾಲಿಕೆ ಸದಸ್ಯೆ ಶಿವಲೀಲಾ ಕೊಟ್ರಯ್ಯ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ರಮೇಶ್, ಗುರುಸ್ವಾಮಿ, ಗ್ರಾಮದ ಪ್ರಮುಖರಾದ ಬಿ. ನಾಗೇಂದ್ರಚಾರ್, ಕೆ.ಬಿ. ಲಿಂಗರಾಜು, ಎಂ.ಎಸ್. ಕೊಟ್ರಯ್ಯ, ಸಿ. ಮಹೇಶ್ವರಪ್ಪ, ಕೆ.ಎಲ್. ಹರೀಶ್ ಬಸಾಪುರ, ಜಿ. ತಿಪ್ಪೇಸ್ವಾಮಿ, ಬಿ.ಎಂ. ಬಕ್ಕಯ್ಯ, ಬಿ.ಕೆ. ದೇವೇಂದ್ರಪ್ಪ, ಆಲದಹಳ್ಳಿ ಗಿರೀಶ್, ಕಳೂರು ಮಹೇಶ್ವರಪ್ಪ, ಕಳೂರು ಪರಮೇಶ್ವರಪ್ಪ ಇತರರಿದ್ದರು.

## ರಾಷ್ಟ್ರಪತಿಗಳ ಭೋಜನ ಕೂಟಕ್ಕೆ ಡಾ. ಸುರೇಶ ಹನಗವಾಡಿ



ದಾವಣಗೆರೆ, ಜ.22- ಈ ಬಾರಿಯ ಗಣರಾಜ್ಯೋತ್ಸವದ ಪ್ರಯುಕ್ತ ರಾಷ್ಟ್ರಪತಿ ಭವನ ಹಮ್ಮಿಕೊಳ್ಳುವ ಭೋಜನ ಕೂಟಕ್ಕೆ, ನಗರದ ಜ.ಜ.ಮು ವೈದ್ಯಕೀಯ ಕಾಲೇಜಿನ ಪೆಥಾಲಜಿ ವಿಭಾಗದ ಪ್ರಾಧ್ಯಾಪಕರೂ ಆದ ಹಿಮೊಫಿಲಿಯಾ ಸಂಸ್ಥೆ ಅಧ್ಯಕ್ಷ ಡಾ. ಸುರೇಶ ಹನಗವಾಡಿ ಆಹ್ವಾನಿತರಾಗಿದ್ದಾರೆ.

## ನಗರದ ಪುರಾಣ ಪ್ರವಚನದಲ್ಲಿ ಇಂದು

ಚೌಕಿಪೇಟೆಯ ಶ್ರೀ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಡೆಯುತ್ತಿರುವ ಒಂದು ತಿಂಗಳ ಪರ್ಯಂತದ ಪುರಾಣದಲ್ಲಿ ಇಂದಿನ ಕಾರ್ಯಕ್ರಮದಲ್ಲಿ ಮೈಸೂರಿನ ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರಾದ ಭೀಮಶಂಕರ ಬೀದೂರ್ ನೇತೃತ್ವದ 15 ಜನರ ತಂಡ ತಬಲಾ ಸೋಲೋ ನಡೆಸುವರು ಎಂದು ಸಂಚಾಲಕ ಅಜ್ಜಂಪುರ ಶೆಟ್ರು ಮೃತ್ಯುಂಜಯ ತಿಳಿಸಿದ್ದಾರೆ.

## ಜಿಲ್ಲೆಯ ಇಬ್ಬರು 'ರಾಷ್ಟ್ರೀಯ ಪ್ರಜಾ ಸೇವಾ ರತ್ನ' ಪ್ರಶಸ್ತಿಗೆ ಆಯ್ಕೆ



ದಾವಣಗೆರೆ, ಜ.21- ಜಿಲ್ಲಾ ಶೋಷಿತ ವರ್ಗಗಳ ಒಕ್ಕೂಟದ ಅಧ್ಯಕ್ಷ ಬಾಡದ ಆನಂದರಾಜ್ ಹಾಗೂ ಮಾಯಕೊಂಡ ಬಿಜೆಪಿ ಯುವ ನಾಯಕ ಜಿ.ಎಸ್. ಶ್ಯಾಮ್ ಅವರು 'ರಾಷ್ಟ್ರೀಯ ಪ್ರಜಾ ಸೇವಾ ರತ್ನ' ಪ್ರಶಸ್ತಿಗೆ ಆಯ್ಕೆ ಆಗಿದ್ದಾರೆ ಎಂದು ಗೋವಾದ ಕ್ಯಾಲಂಗುಟೆ ಕನ್ನಡ ಸಂಘ, ಬೆಂಗಳೂರಿನ ಸಾಂತ್ವನ ಮ್ಯೂಸಿಕ್ ಆ್ಯಂಡ್ ಚಾರಿಟೇಬಲ್ ಫೌಂಡೇಶನ್ ತಿಳಿಸಿವೆ.

ಜನವರಿ 26ರ ಮಧ್ಯಾಹ್ನ 2ಗಂಟೆಗೆ ಗೋವಾದ ಪಣಜಿಯ ಇನ್‌ಸ್ಟಿಟ್ಯೂಟ್ ಮೆನೇಜಸ್ ಬ್ರಗಾಂಜಾದಲ್ಲಿ ನಡೆಯಲಿರುವ 'ಗಣರಾಜ್ಯೋತ್ಸವ ಮತ್ತು ಸಂಕ್ರಾಂತಿ ಸಂಗೀತ ಸಂಭ್ರಮ' ಕಾರ್ಯಕ್ರಮದಲ್ಲಿ ಗಣ್ಯರ ಸಮ್ಮುಖದಲ್ಲಿ ಅಕ್ಷರ ಸಂತ, ಪದ್ಮಶ್ರೀ ಹರೇಕಳ ಹಾಜಬ್ಬ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

## ಬೆಳವನೂರು ಗ್ರಾ.ಪಂ. ಅಧ್ಯಕ್ಷರಾಗಿ ಸರೋಜಮ್ಮ ಆಯ್ಕೆ



ದಾವಣಗೆರೆ, ಜ.22- ತಾಲ್ಲೂಕಿನ ಬೆಳವನೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಶ್ರೀಮತಿ ಸರೋಜಮ್ಮ ಅವರು ಇಂದು ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಕೆ.ಎನ್. ಶಿವಮೂರ್ತಿ ಕರ್ತವ್ಯ ನಿರ್ವಹಿಸಿದರು.

## ಈ ವರ್ಷ ಲೋಡ್ ಶೆಡ್ಡಿಂಗ್ ಇಲ್ಲ

ಬಾಗಲಕೋಟೆ, ಜ.22- ಈ ವರ್ಷ ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಮಾಡುವುದಿಲ್ಲ ಎಂದು ಇಂಧನ ಸಚಿವ ಕೆ.ಜೆ ಜಾರ್ಜ್ ಹೇಳಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಬರಗಾಲ ಇದ್ದಾಗಲೇ ಲೋಡ್ ಶೆಡ್ಡಿಂಗ್ ಮಾಡಿರಲಿಲ್ಲ. ಈ ವರ್ಷ ಜಲಾಶಯಗಳಲ್ಲಿಯೂ ನೀರಿನ ಸಂಗ್ರಹ ಚೆನ್ನಾಗಿದೆ. ಆದ್ದರಿಂದ ಲೋಡ್ ಶೆಡ್ಡಿಂಗ್ ಮಾಡುವುದಿಲ್ಲ ಎಂದರು.

ಒಂದು ವೇಳೆ ವಿದ್ಯುತ್ ಕೊರತೆ ಎದುರಾದರೆ ಬೇರೆ ರಾಜ್ಯಗಳಿಂದ ವಿದ್ಯುತ್ ಖರೀದಿ ಮಾಡಿ, ಸರಬರಾಜು ಮಾಡಲಾಗುವುದು ಎಂದು ಹೇಳಿದರು. ಆಡಳಿತ ಪಕ್ಷದಲ್ಲಿ ಗೊಂದಲವೇ ಇಲ್ಲ. ಇದು ಮಾಧ್ಯಮಗಳು ಸೃಷ್ಟಿ ಮಾಡುತ್ತಿವೆ. ಟೀ ಕಪ್ ನಲ್ಲಿ ಬಿರುಗಾಳಿ ಬಂದಿರುವ ರೀತಿ ಮಾಡಲಾಗುತ್ತಿದೆ ಎಂದರು.

## ಕೊಂಡಜ್ಜಿ ಕೃಷಿ ಪತ್ತಿನ ಸಂಘಕ್ಕೆ ಮಲ್ಲಿಕಾರ್ಜುನ ಅಧ್ಯಕ್ಷ, ಹನುಮಂತಪ್ಪ ಉಪಾಧ್ಯಕ್ಷ



ಹರಿಹರ, ಜ. 22- ತಾಲ್ಲೂಕಿನ ಕೊಂಡಜ್ಜಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಎಂ. ಮಲ್ಲಿಕಾರ್ಜುನ (ಹೆಗಡೆ) ಮತ್ತು ಉಪಾಧ್ಯಕ್ಷರಾಗಿ ಹೆಚ್. ಹನುಮಂತಪ್ಪ ಆಯ್ಕೆಯಾಗಿದ್ದಾರೆ.

ಸಂಘದ ಆಡಳಿತ ಮಂಡಳಿಗೆ ಇದೇ ದಿನಾಂಕ 11ರಂದು ನಡೆದ ಚುನಾವಣೆಯಲ್ಲಿ ಆಯ್ಕೆಯಾದ ನೂತನ ನಿರ್ದೇಶಕರ ಸಭೆಯು ಸಂಘದ ಕಛೇರಿ ಸಭಾಂಗಣದಲ್ಲಿ ಇಂದು ನಡೆದ ಸಂದರ್ಭದಲ್ಲಿ, ಈ ಆಯ್ಕೆ ನಡೆಯಿತು.

## ಜಿಲ್ಲಾ ಸಹಕಾರ ಯೂನಿಯನ್ ಉಪಾಧ್ಯಕ್ಷರಾಗಿ ಮಂಜುಳಾ ಗಣೇಶ್



ಹೊನ್ನಾಳಿ,ಜ.22- ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್‌ನ ಉಪಾಧ್ಯಕ್ಷರಾಗಿ ತಾಲ್ಲೂಕಿನ ಬೆನಕನಹಳ್ಳಿ ಗ್ರಾಮದ ಎಚ್.ಜಿ ಮಂಜುಳಾ ಗಣೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಳೆದ ಮಂಗಳವಾರ ನಡೆದ ಚುನಾವಣೆಯಲ್ಲಿ ಚನ್ನಗಿರಿ-ಹೊನ್ನಾಳಿ-ನ್ಯಾಮತಿ ವಿಭಾಗದ ಮಹಿಳಾ ಮೀಸಲಾತಿ ಕ್ಷೇತ್ರದಿಂದ ಅವರು ಆಯ್ಕೆಯಾಗಿದ್ದಾರೆ. ಬೆನಕನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಮತ್ತು ವಿ.ಎಸ್.ಎಸ್.ಎನ್. ಸೊಸೈಟಿಯ ನಿರ್ದೇಶಕರಾಗಿಯೂ ಶ್ರೀಮತಿ ಮಂಜುಳಾ ಕಾರ್ಯ ನಿರ್ವಹಿಸಿದ್ದಾರೆ.

## ಮೇಕಾ ಸೇರಿ ಐವರು ಅವಿರೋಧ ಆಯ್ಕೆ



(1ನೇ ಪುಟದಿಂದ) ಮತ್ತೊಂದು ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹಿಂದುಳಿದ ವರ್ಗ ಪ್ರವರ್ಗ 'ಬ' ಮೀಸಲು ಕ್ಷೇತ್ರದಿಂದ ಮೇಕಾ ಮುರುಳಿಕೃಷ್ಣ, ಮಹಿಳಾ ಮೀಸಲು ಕ್ಷೇತ್ರದಿಂದ ಶ್ರೀಮತಿ ವೈ. ಸರೋಜ ವೆಂಕಟೇಶ್ವರ ರೆಡ್ಡಿ ಮತ್ತು ಶ್ರೀಮತಿ ಶ್ರೀದೇವಿ ತಿಮ್ಮಾರೆಡ್ಡಿ, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಟಿ.ಹೆಚ್. ರಾಜಶೇಖರ್ ಮತ್ತು ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರ ಜಿ.ಆರ್. ರಾಜಾನಾಯಕ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## 25ರಂದು ಶ್ರೀ ಸಂತ ಸೇವಾಲಾಲ್ ಜಯಂತಿ 2ನೇ ಪೂರ್ವಭಾವಿ ಸಭೆ

ದಾವಣಗೆರೆ, ಜ. 22 - ನ್ಯಾಮತಿ ತಾಲ್ಲೂಕು, ಭಾಯಗಡ್ ಸೂರಗೊಂಡನಕೊಪ್ಪದಲ್ಲಿ ಫೆ.13 ರಿಂದ 15 ರವರೆಗೆ ನಡೆಯುವ ರಾಜ್ಯಮಟ್ಟದ ಶ್ರೀ ಸಂತ ಸೇವಾಲಾಲ್ ಮಹಾರಾಜರ 286ನೇ ಜನ್ಮದಿನಾಚರಣೆ ಪ್ರಯುಕ್ತ ಜಾತ್ರಾ ಮಹೋತ್ಸವ ಆಚರಣೆಯ 2ನೇ ಪೂರ್ವಭಾವಿ ಸಿದ್ದತಾ ಸಭೆಯನ್ನು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಇವರ ಅಧ್ಯಕ್ಷತೆಯಲ್ಲಿ ಇದೇ ದಿನಾಂಕ 25 ರಂದು ಮಧ್ಯಾಹ್ನ 12 ಗಂಟೆಗೆ ನ್ಯಾಮತಿ ತಾಲ್ಲೂಕು ಸೂರಗೊಂಡನಕೊಪ್ಪದಲ್ಲಿ ಆಯೋಜಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ನಾಗರಾಜ್ ತಿಳಿಸಿದ್ದಾರೆ.


# ಹಾಲಪ್ಪನವರಿಗೆ ಸನ್ಮಾನ



ಶಾಮನೂರು ಹೆಚ್.ಆರ್. ಲಿಂಗರಾಜ್ ಅವರ ಮುಂದಾಳತ್ವದಲ್ಲಿ
ಶ್ಯಾಬನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ
ಅವಿರೋಧವಾಗಿ ಆಯ್ಕೆಯಾಗಿರುವ ಶ್ರೀ ಎಸ್. ಹಾಲಪ್ಪ
ಅವರನ್ನು ಸ್ನೇಹ ಬಳಗದಿಂದ ಸನ್ಮಾನಿಸಿ, ಗೌರವಿಸಲಾಯಿತು.

# ಶಿವಪ್ಪನವರಿಗೆ ಅಭಿನಂದನೆ



ದಾವಣಗೆರೆ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾಗಿ
ಅವಿರೋಧವಾಗಿ ಆಯ್ಕೆಯಾಗಿರುವ
ಶ್ರೀ ಶಾಮನೂರು ಎ. ಶಿವಪ್ಪ
ಅವರಿಗೆ ಹಾಗೂ ಕೃಷಿಕ ಸಮಾಜದ
ಎಲ್ಲಾ ಪದಾಧಿಕಾರಿಗಳಿಗೆ ಹಾರ್ದಿಕ ಅಭಿನಂದನೆಗಳು.

- ಗ್ರಂಥಾಲಯ ಸ್ನೇಹ ಬಳಗ, ಶಾಮನೂರು
- ಡಾ. ಶಿವಕುಮಾರಸ್ವಾಮಿ ಸರ್ಕಲ್ ಸ್ನೇಹ ಬಳಗ, ಶಾಮನೂರು
- ಹೊರ ಬೀರಲಿಂಗೇಶ್ವರ ದೇವಸ್ಥಾನ ಸ್ನೇಹ ಬಳಗ, ಶಾಮನೂರು
- ಆಂಜನೇಯ ಸ್ವಾಮಿ ಕಲ್ಯಾಣ ಮಂಟಪ ಹತ್ತಿರದ ಸ್ನೇಹ ಬಳಗ, ಶಾಮನೂರು



# ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ

## ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ – 2025

ಮಾನ್ಯ ಬಂಧುಗಳೇ,

ದಿನಾಂಕ 24–01–2025ನೇ ಶುಕ್ರವಾರದಂದು ನಡೆಯಲಿರುವ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ನಾವುಗಳು ಅಭ್ಯರ್ಥಿಗಳಾಗಿ ಸ್ಪರ್ಧಿಸಿರುತ್ತೇವೆ. ತಾವುಗಳು ತಮ್ಮ ಅತ್ಯಮೂಲ್ಯವಾದ ಮತಗಳನ್ನು ನೀಡುವುದರ ಮೂಲಕ ಎಲ್ಲಾ 8 (ಎಂಟು) ಅಭ್ಯರ್ಥಿಗಳನ್ನು ಅತ್ಯಂತ ಬಹುಮತದಿಂದ ಜಯಶೀಲರನ್ನಾಗಿ ಮಾಡಬೇಕಾಗಿ ತಮ್ಮಲ್ಲಿ ಸವಿನಯ ಪ್ರಾರ್ಥನೆ.

### ಮಾದರಿ ಮತ ಪತ್ರ

**ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆ 07 ಸಾಮಾನ್ಯ ಕ್ಷೇತ್ರಕ್ಕೆ**

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | |
|---|---|---|---|
| 1 | ಕೆ.ಬಿ. ನಾಗರಾಜ್ | | |
| 2 | ಪ್ರಕಾಶ್ ವಿ. | | |
| 3 | ಬ್ರಹ್ಮಾನಂದ ರೆಡ್ಡಿ ಡಿ. | | |
| 4 | | | |
| 5 | ಯೋಗಿ ರೆಡ್ಡಿ ಬಿ. | | |
| 6 | ವೆಂಕಟ ರೆಡ್ಡಿ ಆರ್. | | |
| 7 | ಬಿ. ವೆಂಕಟೇಶ್ವರ ರೆಡ್ಡಿ ಬಿನ್ ನರಸಾ ರೆಡ್ಡಿ | | |
| 8 | ಬಿ. ವೆಂಕಟೇಶ್ವರ ರೆಡ್ಡಿ ಬಿನ್ ಬಿ. ವೆಂಕಟ ರೆಡ್ಡಿ | | |
| 9 | | | |

**ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆ 01 ಹಿಂದುಳಿದ ವರ್ಗ ಪ್ರವರ್ಗ 'ಎ' ಮೀಸಲು ಕ್ಷೇತ್ರಕ್ಕೆ**

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | |
|---|---|---|---|
| 1 | ಆನಂದ ಎನ್. | | |
| 2 | | | |

ಮತದಾನ ದಿನಾಂಕ : 24–01–2025ನೇ ಶುಕ್ರವಾರ
ಮತದಾನದ ಸಮಯ : ಬೆಳಿಗ್ಗೆ 9–00 ರಿಂದ ಸಂಜೆ 4–00ರ ವರೆಗೆ
ಸ್ಥಳ : ಶ್ರೀ ಶ್ರೀಶೈಲ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ,
16ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೆ.ಟಿ.ಜೆ. ನಗರ, ದಾವಣಗೆರೆ.

ಈ ಮೇಲ್ಕಂಡ 8 ಗುರುತುಗಳಿಗೆ ತಮ್ಮ ಅಮೂಲ್ಯವಾದ ಮತಗಳನ್ನು ನೀಡುವುದರ ಮೂಲಕ ನಮ್ಮನ್ನು ಜಯಶೀಲರನ್ನಾಗಿ ಮಾಡಬೇಕಾಗಿ ಪ್ರಾರ್ಥನೆ.

ವಿಶೇಷ ಸೂಚನೆ : ಸೊಸೈಟಿಯ ಗುರುತಿನ ಚೀಟಿ (Identity Card) ಯನ್ನು ತಪ್ಪದೇ ತರಬೇಕಾಗಿ ವಿನಂತಿ.


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas